ಸ್ವಾತಂತ್ರ ಹೋರಾಟ

ಸ್ವಾತಂತ್ರ್ಯ ಹೋರಾಟ

ಸ್ವಾತಂತ್ರ್ಯ ಹೋರಾಟ

ಸ್ವಾತಂತ್ರ ಹೋರಾಟ



ಮಹಾತ್ಮಾ ಮೋಹನದಾಸ್ ಕರಮ್‌ಚಂದ್ ಗಾಂಧೀಜಿಯವರ ಸನ್ನಿಧಿಯಲ್ಲಿ

ತೀರ್ಥಹಳ್ಳಿ ತಾಲ್ಲೋಕಿನ ಪ್ರಜೆಗಳು ವಿನಯ ಪೂರ್ವಕವಾಗಿ ಒಪ್ಪಿಸಿದ ವಿಜ್ಞಾಪನಾ ಪತ್ರಿಕೆ.

ಮಹಾತ್ಮಾಜೀಯವರೇ! ಈ ದಿನ ತಮ್ಮ ಸ್ವಾಗತವನ್ನು ಮಾಡುವ ಸುಯೋಗವು ದೊರಕಿದುದಕ್ಕಾಗಿ ನಮ್ಮ ಆನಂದಕ್ಕೆ ಪಾರವಿಲ್ಲವಾಗಿದೆ. ತಮ್ಮ ಸ್ವಾಗತಮಾಡುವ ಈ ಸುಸಂಧಿಯಲ್ಲಿ ನಮ್ಮ ನಾಡಿನ ಇತಿಹಾಸವನ್ನು ತಮ್ಮ ಅರಿವಿಗೆ ತರಬೇಕೆಂಬ ಕುತೂಹಲವುಂಟಾಗಿದೆ.

ಇದು [illegible]ಸ್ಥಾನದ ದಕ್ಷಿಣ ಪಶ್ಚಿಮ ಎಲ್ಲೆಯಲ್ಲಿ ಸಹ್ಯಾದ್ರಿ ಪರ್ವತ ಪಂಙ್ತಿಗಳ ತಪ್ಪಲಲ್ಲಿ ಅಡಕವಾಗಿರುವ ಪ್ರದೇಶವಾಗಿದೆ. ಪ್ರಕೃತಿ ದೇವಿಯು ಗಿರಿಕಾನನಗಳಿಂದಲೂ, ಸಣ್ಣಸಣ್ಣ ಝರಿಗಳಿಂದಲೂ, ಅಲ್ಲಲ್ಲಿ ಸಣ್ಣ ಪುಟ್ಟ ಜಲಪಾತಗಳಿಂದಲೂ, ಶ್ರೀಗಂಧ ಮುಂತಾದ ವೃಕ್ಷಗಳಿಂದಲೂ, ವನೌಷಧಗಳಿಂದಲೂ ಕೂಡಿ ವಿರಾಜಿಸುತ್ತಿರುವಳು. ಈ ಪರ್ವತ ಪಂಙ್ತಿಗಳಲ್ಲಿ ತುಂಗಾ, ಭದ್ರಾ, ವರದಾ, ಕುಮುದ್ವತಿ ಶರಾವತಿ ಮುಂತಾದ ಪುಣ್ಯನದಿಗಳ ಉಗಮಸ್ಥಳಗಳಿವೆ. ಈ ಪ್ರಕೃತಿ ಸೌಂದರ್ಯದ ನಿರ್ಮಲವಾದ ಪ್ರದೇಶಗಳಲ್ಲಿ ಮಹರ್ಷಿಗಳ ತಪೋವನಗಳೂ ಶಿಲ್ಪಕಲಾಕೌಶಲ್ಯದರ್ಶಕಗಳಾದ ದೇವಾಲಯಗಳೂ ಈಗಲೂ ಗತವೈಭವವನ್ನು ಸೂಚಿಸುತ್ತಲಿವೆ.

ಇಂತಹ ಶಾಂತಿಮಯ ಪ್ರದೇಶವು ಜನವಸತಿಗೂ, ಮಹರ್ಷಿಗಳ ತಪಸ್ಸಿಗೂ, ನಿಷ್ಕಪಟವಾದ ಒಕ್ಕಲುತನದ ಅಭಿವೃದ್ಧಿಗೂ, ಭೂವ್ಯವಸಾಯಕ್ಕೂ, ಜೀವಧಾರಣಕ್ಕೆ ಮೂಲಾಧಾರವಾದ ಗೋವೃಂದದ ಬೆಳವಣಿಗೆಗೂ ಅನುಕೂಲಸ್ಥಳವೆಂದು ನಮ್ಮ ಹಿರಿಯರು ಇಲ್ಲಿಗೆ ಬಂದು ನೆಲಸಿದರು. ಬೆಟ್ಟಗುಡ್ಡಗಳ ಸಂದಣಿಗಳಲ್ಲಿರುವ ಗ್ರಾಮಗಳು ಕೇವಲ ಮೂರು ಅಥವಾ ನಾಲ್ಕು ಮನೆಗಳಿಗೆ ಆಶ್ರಯಭೂತವಾಗಿವೆ. ಈ ಪರಿಸ್ಥಿತಿಯು ನೈಸರ್ಗಿಕ ನಿಯಮಕ್ಕೊಳಪಟ್ಟು ಅಥವಾ ಕೃಷಿ, ಗೋರಕ್ಷಣೆ, ಆರೋಗ್ಯ ಮುಂತಾದ ಮುಖ್ಯ ಅಂಶಗಳಿಗೆ ಅನುಕೂಲಿಸುವಂತೆ ಇರಬೇಕಾದುದರಿಂದಲೋ ಅಂತೂ ಗ್ರಾಮಸಂಘಟನೆಯು ವಿರಳವಾಗಿರುವುದು ಕಾಕತಾಳನ್ಯಾಯವಾಗಿದೆ.

ಈ ರೀತಿ ಇರುವ ಮಲನಾಡು ಪ್ರದೇಶವು ಸುಮಾರು ೧೭ನೆಯ ಶತಮಾನದ ಮಧ್ಯಕಾಲದಲ್ಲಿ ಬಿದನೂರು ಅಥವಾ ನಗರ ಸಂಸ್ಥಾನದಲ್ಲಿ ಪ್ರಸಿದ್ಧಿಯನ್ನು ಹೊಂದಿ ಜನಾನುರಾಗಕ್ಕೆ ಪಾತ್ರನಾದ ಶಿವಪ್ಪನಾಯಕನ ರಾಜ್ಯಾಡಳಿತಕ್ಕೆ ಒಳಪಟ್ಟಿತ್ತು. ಈ ಆಳ್ವಿಕೆಯಲ್ಲಿ ರಾಜಕೀಯ ಸ್ವರೂಪವು ಕೇವಲ ಕೃಷಿಕರಾದ ಪ್ರಜೆಗಳ ವೃತ್ತಿಗೂ, ಸುಖಕ್ಕೂ ನಿರ್ಬಾಧಿತವಾಗಿ ಜ್ಞಾನಾರ್ಜನೆಯ ಪ್ರೋತ್ಸಾಹಕ್ಕೆ ಅನ್ವಯಿಸತಕ್ಕದುದಾಗಿತ್ತು. ಅಲ್ಲದೆ ಇನಾಮುಗಳು ಚಿರಸ್ಥಾಯಿಗಳಾದ ಸಿಸ್ತುಗಳು ಈಗಲೂ ಆ ರಾಜ್ಯಭಾರದ ಮೇಲ್ಮೆಯ ಗುರುತಾಗಿ ಕಾಣಬರುತ್ತವೆ.

[illegible]ಕ್ಕೆ ಅವಶ್ಯಕವಾದ ನಾಡುಮುಟ್ಟುಗಳು ಮತ್ತು ಸಾದಾ ಜೀವನಕ್ಕೆ ಕೇವಲ ಅಗತ್ಯವಾದ ಉಪಕರಣಗಳು ಅಂದರೆ ಕಬ್ಬಿಣ, ಕಲ್ಲು, ಮರ ಮುಂತಾದುವುಗಳಿಂದ ಆಗತಕ್ಕ ಕೈಗಾರಿಕೆ ಕಸುಬುಗಳು ಮಾತ್ರ ಪ್ರಚಾರದಲ್ಲಿದ್ದುವು. ಆದರೆ ಈ ಪ್ರಾಂತದಲ್ಲಿ ತಮ್ಮ ಉಪಯೋಗಕ್ಕೆ ಬೇಕಾದ ಬಟ್ಟೆಯ ಕೈ[illegible]

ಹಿಂದಿನ ಕಾಲದಲ್ಲಿ ಭತ್ತ ಅಡಿಕೆ ಇವೆರಡು ಮುಖ್ಯಬೆಳೆಯಾದ್ದರಿಂದ ಜನರು [illegible] ಬೇಕಾಗುವ ಎಣ್ಣೆಕಾಳುಗಳು ಮತ್ತು ದ್ವಿದಳಧಾನ್ಯ ಮುಂತಾದ ಕೀಳುಪೈರುಗಳನ್ನು ಬೆಳೆಯುತ್ತಿದ್ದರು. ಆಗಿನ ಆರೋಗ್ಯಸ್ಥಿತಿಯೂ, ಸಾಂಪತ್ತಿಕ ಸ್ಥಿತಿಯೂ ತೃಪ್ತಿಕರವಾಗಿತ್ತೆಂದು ಹೇಳಲು ಸಂದೇಹವೇ ಇಲ್ಲ. ಇತ್ತೀಚೆಗೆ ಆಧುನಿಕ ಮಾರ್ಪಾಟುಗಳಿಂದ ನಾಡಿನ ಆರೋಗ್ಯಸಂಪತ್ತೂ ಆರ್ಥಿಕಸಂಪತ್ತೂ ಕಡಿಮೆಯಾಗಿ ಬಂದು ಮುಖ್ಯ ಬೆಳೆಯಾದ ಭತ್ತ ಅಡಿಕೆ ಇವುಗಳ ವ್ಯವಸಾಯವೂ ಕೂಡಾ ಕ್ಷೀಣದೆಸೆಗೆ ಹೋಗಿಮುಟ್ಟಿದೆ. ಉಳಿದ ಜೀವನ ಮತ್ತು ಕೃಷಿ ಸಂಬಂಧವಾದ ವೃತ್ತಿಗಳೆಲ್ಲವೂ ಈ ಕಾರಣಗಳಿಂದಲೇ ಪರಾವಲಂಬನಕ್ಕೊಳಗಾಗಿವೆ. ಈ ಭಾಗವೆಲ್ಲಾ ನಮ್ಮ ಶ್ರೀಮನ್ಮಹಾರಾಜಾ ಸಾಹೇಬರ ಮನಸ್ಸಿಗೆ ನಾಟಿ ನಮ್ಮ ಹೀನಸ್ಥಿತಿಯು ಅವರ ಮನಶ್ಶಾಂತಿಯ ಪೂರ್ಣತೆಗೆ ಕುಂದಕವನ್ನುಂಟುಮಾಡಿದೆ.

ತಾವು ಬಂದಿರುವ ಪರಶುರಾಮಕ್ಷೇತ್ರವಾದ ಈ ಹಳ್ಳಿಯು ಮೈಸೂರು ರಾಜ್ಯಭಾರದ ಒಂದು ಮೂಲೆಯಲ್ಲಿದ್ದರೂ, ನಮ್ಮ ಪ್ರಾರ್ಥನೆಯನ್ನು ಕನಿಕರದಿಂದ ಅಂಗೀಕರಿಸಿ ಈ ಹೆಚ್ಚಾದ ಮಳೆಗಾಳಿ ಇರತಕ್ಕ ಕಾಲದಲ್ಲಿ ತಮ್ಮ ಪ್ರವಾಸಕ್ಕೆ ಪ್ರಯಾಸಕರವಾದ ರಸ್ತೆಯಲ್ಲಿ ಪ್ರಯಾಣಮಾಡಿ ಬಂದು ನಮಗೆ ದರ್ಶನ ಕೊಟ್ಟದ್ದಕ್ಕಾಗಿ

ತಾವು ಬಂದಿಳಿದ ಪರಶುರಾಮಕ್ಷೇತ್ರವೆಂಬ ಈ ಹಳ್ಳಿಯು ಮೈಸೂರು ರಾಜ್ಯಭಾರದ ಒಂದು ಮೂಲೆಯಲ್ಲಿದ್ದರೂ, ನಮ್ಮ ಪ್ರಾರ್ಥನೆಯನ್ನು ಕನಿಕರದಿಂದ ಅಂಗೀಕರಿಸಿ ಈ ಹೆಚ್ಚಾದ ಮಳೆ ಗಾಳಿ ಇರತಕ್ಕ ಕಾಲದಲ್ಲಿ ತಮ್ಮ ಪ್ರವಾಸಕ್ಕೆ ಪ್ರಯಾಸಕರವಾದ ರಸ್ತೆಯಲ್ಲಿ ಪ್ರಯಾಣಮಾಡಿ ಬಂದು ನಮಗೆ ದರ್ಶನ ಕೊಟ್ಟದ್ದಕ್ಕಾಗಿ ನಾವು ಕೃತಜ್ಞರಾಗಿದ್ದೇವೆ.

ಇಡೀ ವಿಶ್ವದ ದಾರಿದ್ರ್ಯಾವಸ್ಥೆಯನ್ನು ದೂರ ಮಾಡುವುದಕ್ಕಾಗಿ ಕಂಕಣಬದ್ಧರಾದ ತಾವು ದರಿದ್ರನಾರಾಯಣನ ಸೇವೆ ಮಾಡುತ್ತಿರುವ ಮಹತ್ಕಾರ್ಯದಲ್ಲಿ ತಮ್ಮ ಜೀವಮಾನವನ್ನೇ ಸವೆಸುತ್ತಿರುವಿರಿ. ಪರಮೇಶ್ವರನ ಅನುಗ್ರಹದಿಂದ ನಮ್ಮ ಕರ್ನಾಟಕದಲ್ಲಿಯೇ ತಮ್ಮ ದೇಹಾರೋಗ್ಯವು ಸುಧಾರಿಸಿದ್ದಕ್ಕಾಗಿ ನಮಗೆ ಆನಂದವುಂಟಾಗಿದೆ. ನಾವು ತಮ್ಮ ಅಮೂಲ್ಯವಾದ ಮಂತ್ರೋಪದೇಶವನ್ನು ಹೊಂದಬೇಕೆಂಬ ಕುತೂಹಲದಲ್ಲಿದ್ದೇವೆ.

ಬಡವರ ಹೊಟ್ಟೆಗೆ ಆಧಾರವಾದ ನೂಲುವುದು, ನೇಯುವುದು, ಅರ್ಥಾತ್ ಖಾದಿಪ್ರಚಾರ ಈ ಮಹತ್ಕಾರ್ಯದಲ್ಲಿ ತಮ್ಮ ವಿಶಾಲವಾದ ಮನಸ್ಸಿನಲ್ಲಿ ನಿರ್ಧರವಾದಂತೆ ನಾವು ಎಷ್ಟರ ಮಟ್ಟಿಗೂ ಮುಂದುವರಿದಿಲ್ಲವೆಂತ ಹೇಳುತ್ತೇವೆ. ಇನ್ನು ಮುಂದೆ ಖಾದಿಪ್ರಚಾರ ವಿಷಯದಲ್ಲಿ ತಮ್ಮ ಸಂದೇಶದಂತೆ ನಡೆದುಕೊಳ್ಳಲು ಸಿದ್ಧರಿರುತ್ತೇವೆ. ಈ ಹಳ್ಳಿಯಲ್ಲಿ ಈಗ ಸರ್ಕಾರದವರು ಒಂದು "ಚರಕ" ಶಾಲೆಯನ್ನು ಇಡಿಸಿರುತ್ತಾರೆ. ಐದಾರು ವರ್ಷಗಳಿಂದಲೂ ಇರುವ ಸಣ್ಣದೊಂದು ಖಾದಿಭಂಡಾರದಲ್ಲಿಯೂ, ಕೆಲವು ಬಟ್ಟೆಅಂಗಡಿಗಳಲ್ಲಿಯೂ ಸಹಾ ಶುದ್ಧ ಖಾದಿ ಮಾರಾಟವಾಗುತ್ತಾ ಇರುವುದರಿಂದ ಖಾದಿಪ್ರೇಮವು ಜನತೆಯಲ್ಲಿ ದಿನೇ ದಿನೇ ಹೆಚ್ಚುತ್ತಲಿದೆ ಎಂಬುದನ್ನು ತಮ್ಮ ಅವಗಾಹನೆಗೆ ತರಲು ಸಂತೋಷಪಡುತ್ತೇವೆ.

ನಮ್ಮ ಪ್ರದೇಶದಲ್ಲಿ ಹಿಂದೂ ಮುಸಲ್ಮಾನರ ವಿವಾದ ಪ್ರಶ್ನೆಯೇ ಇಲ್ಲವೆಂದೂ ಪರಸ್ಪರ ಉಭಯ ವರ್ಗದವರೂ ಮಿತ್ರಭಾವದಲ್ಲಿರುವರೆಂದೂ ತಿಳಿಸಲು ಸಂತೋಷ ಪಡುತ್ತೇವೆ. ಅಸ್ಪೃಶ್ಯತೆಯು ನಮ್ಮಲ್ಲಿ ಇನ್ನೂ ಇದೆ. ಇದರ ನಿವಾರಣೆ ಪ್ರಯತ್ನವನ್ನು ನಾವಿನ್ನೂ ಕೈಕೊಂಡಿಲ್ಲವೆಂದು ತಿಳಿಸಲು ನಮಗೆ ತುಂಬಾ ವ್ಯಥೆ ಉಂಟಾಗುತ್ತದಲ್ಲದೆ ತಮಗೆ ಇನ್ನೂ ಹೆಚ್ಚಿನ ಖೇದವೆನಿಸುತ್ತದೆ; ಈ ವಿಚಾರದಲ್ಲಿ ಇದ್ದ ಸಂಗತಿಯನ್ನು ತಿಳಿಸಿದ್ದೇವೆಂಬುದೇ ಸಮಾಧಾನ. ಹಿಂದೀ ಭಾಷಾಪರಿಚಯವು ನಮಗಿಲ್ಲದಿರುವುದರಿಂದ ನಮ್ಮ ಮಾತೃಭಾಷೆಯಾದ ಕನ್ನಡದಲ್ಲಿ ಈ ವಿಜ್ಞಾಪನಾ ಪತ್ರಿಕೆಯನ್ನು ಒಪ್ಪಿಸುತ್ತೇವೆ.

ಮಹಾತ್ಮಾಜೀಯವರೇ! ತಮ್ಮ ಖಾದಿನಿಧಿಗೆ ಜೊತೆಗೂಳಿಸಲು ನಾವು ಅರ್ಪಿಸುವ ಈ ಸಣ್ಣ ನಿಧಿಯನ್ನು ಸ್ವೀಕರಿಸಬೇಕಾಗಿ ಕೇಳಿಕೊಳ್ಳುತ್ತೇವೆ. ತಾವು ಬಡಜನರ ಉದ್ಧಾರಕ್ಕಾಗಿ ಕೈಕೊಂಡ ಕಾರ್ಯಗಳೆಲ್ಲಾ ಸರಾಗವಾಗಿ ನಡೆಯಲೆಂದೂ, ತಮ್ಮ ಆಯುರಾರೋಗ್ಯವು ವೃದ್ಧಿಯಾಗಲೆಂದೂ ಪರಮೇಶ್ವರನಲ್ಲಿ ಸದಾ ಪ್ರಾರ್ಥಿಸುವ,

ತಾ. ೧೨—೮—೧೯೨೭.
ತೀರ್ಥಹಳ್ಳಿ,

ತಮ್ಮ ಅತ್ಯಂತ ವಿಧೇಯ ಸೇವಕರಾದ
ತೀರ್ಥಹಳ್ಳಿ ತಾಲ್ಲೋಕು ಪ್ರಜೆಗಳು.

ರಾಧಾಕೃಷ್ಣ ಮುದ್ರಾಯಂತ್ರ, ತೀರ್ಥಹಳ್ಳಿ.

		ಹಿಂದಿನ ತೇರೀಜು	೧೬೪೦	೪	೧೦
೪೫೮	ಶ್ರೀಮತಿ	ರತ್ನಾಬಾಯಿ	೦	೪	೦
೪೫೯.	”	ಜೆ ಲಕ್ಷ್ಮೀಬಾಯಿ	೫	೦	೦
೪೬೦	”	ಉ. ಸುಭದ್ರಮ್ಮ	೦	೪	೦
೪೬೧.	”	ಜೆ ಶಾಂಬವಿ ಯಾನೆ ಸೀತಾಬಾಯಿ	೫	೦	೦
೪೬೨	”	ಸುಂದರಮ್ಮ	೦	೨	೦
೪೬೩.	”	ಜೈ. ಪದ್ಮಾವತಮ್ಮ	೦	೪	೦
೪೬೪	”	ಸುಮಿತ್ರಮ್ಮ	೧	೦	೦
೪೬೫.	”	ನಂಜಮ್ಮ	೦	೪	೦
೪೬೬	”	ಸೀತಮ್ಮ	೨	೦	೦
೪೬೭	”	ಎಚ್ ಪ್ರೇಮಾಬಾಯಿ	೧	೦	೦
೪೬೮	”	ಸೀತಮ್ಮ	೦	೮	೦
೪೬೯	”	ದುಗ್ಗಮ್ಮ	೧	೦	೦
೪೭೦	”	ಉತ್ತಜ್ಜಿ, ಬೇಗಂ	೧	೦	೦
೪೭೧	”	ರಾಧಾಬಾಯಿ	೦	೮	೦
೪೭೨	”	ರುಕ್ಮಾಬಾಯಿ	೦	೪	೦
೪೭೩.	”	ಲಕ್ಷ್ಮೀದೇವಮ್ಮ	೧	೦	೦
೪೭೪.	”	ಲಕ್ಷ್ಮಮ್ಮ	೦	೨	೦
೪೭೫.	”	ಚಂದ್ರಾವತಿಬಾಯಿ	೧	೦	೦
೪೭೬	”	ಯಶೋದಾಬಾಯಿ	೨	೦	೦
೪೭೭.	”	ಕೊ. ಸರಸ್ವತಮ್ಮ	೦	೮	೦
೪೭೮	”	ಗೌರಮ್ಮ	೦	೮	೦
೪೭೯.	”	ಬಂಟ್ವಾಳ ಗಿರಿಜಾಬಾಯಿ	೫	೦	೦
೪೮೦.	”	ಬಸರೂರು ಉಮಾಬಾಯಿ	೧	೦	೦
೪೮೧.	”	ಸಾಂ. ಭಾಗೀರಥಮ್ಮ	೧	೦	೦
೪೮೨.	”	ಸಾವಿತ್ರಮ್ಮ	೦	೪	೦
೪೮೩	”	ಗಂಗಮ್ಮ	೦	೨	೦
೪೮೪.	”	ಲಕ್ಷ್ಮಮ್ಮ	೦	೧	೦
೪೮೫	”	ರೀತಾಬಾಯಿ	೧	೦	೦
೪೮೬.	”	ಶಿವಂತಮ್ಮ	೦	೪	೦
೪೮೭	”	ಶಾಂಬವೀಬಾಯಿ	೦	೮	೦
೪೮೮	”	ಚಿನ್ನಮ್ಮ	೧	೦	೦
೪೮೯.	”	ಸತ್ಯಮ್ಮ	೦	೪	೦
೪೯೦.	”	ಪಿ. ಸರಸ್ವತಿಯಮ್ಮ	೦	೨	೦
೪೯೧.	”	ಶಿ. ಶ್ರೀಮತಿಬಾಯಿ	೦	೨	೦
೪೯೨	”	ಎಸ್. ಕಾಶಮ್ಮ	೧	೦	೦
			೧೬೭೫	೭	೧೦

		ಎಡದ ತೇರೀಜು	೧೬೭೫	೭	೧೦
೪೯೩	”	ಬಿ. ಲಕ್ಷ್ಮಮ್ಮ	೦	೮	೦
೪೯೪.	”	ಬಿ ಕಾವೇರಮ್ಮ	೫	೦	೦
೪೯೫	”	ಬಿ. ಗೌರಮ್ಮ	೫	೦	೦
೪೯೬	”	ಬಿ. ಯಮುನಮ್ಮ	೫	೧	೦
೪೯೭	”	ಲಕ್ಷ್ಮಮ್ಮ	೨	೦	೦
೪೯೮	”	ಪಾರ್ವತಮ್ಮ	೧	೦	೦
೪೯೯.	”	ಗೌರಮ್ಮ	೦	೮	೦
೫೦೦.	”	ಜ. ಕೃಷ್ಣವೇಣಮ್ಮ	೫	೦	೦
೫೦೧.	”	ಕೆ. ರಾಧಮ್ಮ	೦	೨	೦
೫೦೨.	”	ಲಕ್ಷ್ಮಮ್ಮ	೦	೪	೦
೫೦೩.	”	ಯು. ಪುಟ್ಟಮ್ಮ	೦	೮	೦
೫೦೪.	”	ಬಿ. ರುಕ್ಮಿಣಿಯಮ್ಮ	೦	೮	೦
೫೦೫.	”	ಯು. ಪದ್ಮಾವತಿಯಮ್ಮ	೦	೬	೦
೫೦೬.	”	ಪದ್ಮಾವತಿಬಾಯಿ	೦	೪	೦
೫೦೭.	”	ಸೀತಮ್ಮ	೦	೪	೦
೫೦೮.	”	ಬಿ. ಜಾನಕಿಯಮ್ಮ	೦	೪	೦
೫೦೯.	”	ಕಮಲಮ್ಮ	೦	೨	೦
೫೧೦.	”	ಚಿತ್ರಂಪುರು. ಸೀತಮ್ಮ	೫	೦	೦
೫೧೧	”	ಬಿ. ರಾಧಮ್ಮ	೦	೪	೦
೫೧೨.	”	ಮೂಕಾಂಬಿಕಮ್ಮ ಕಲ್ಲಳ್ಳಿ	೫	೦	೦
೫೧೩	”	ದೇ. ವೆಂಕಟಲಕ್ಷ್ಮಮ್ಮನವರು	೨	೦	೦
೫೧೪.	”	ಎಸ್ ಕಾವೇರಮ್ಮನವರು	೧	೦	೦
೫೧೫.	”	ನಂಜಮ್ಮನವರು	೧	೦	೦
೫೧೬	”	ಯಲವಟ್ಟಿ. ನಾಗಮ್ಮ	೫	೧	೦
೫೧೭.	”	ಉಡುಪಿ. ಕಮಲಮ್ಮ	೦	೮	೦
೫೧೮.	”	ಎಸ್ ಪ್ರಭಾವತಿಬಾಯಿ	೧	೦	೦
೫೧೯.	”	ಎ. ಲಕ್ಷ್ಮಮ್ಮ	೩	೦	೦
೫೨೦	”	ತಾರಗೊಳ್ಳಿ. ರಂಗಮ್ಮ	೧೦	೦	೦
೫೨೧.	ಮಿಸ್ಸೆಸ್	ಬಿ. ಕೆ. ಸುಬ್ರಾವ್	೨	೦	೦
೫೨೨	”	ಬಿ. ಕೃಷ್ಣಮೂರ್ತಿಯಾಚಾರ್	೦	೬	೦
೫೨೩.	”	ವೈ. ತಿಪ್ಪಾಜೋಯ್ಸರು	೨	೦	೦
೫೨೪.		ಚಿತ್ರದ ಮರಿಯಪ್ಪನವರಲ್ಲಿ	೦	೦	೬
೫೨೫.		ಸು॥ ವೈ. ಕೃಷ್ಣರಾಯರ ತಾಯಿ	೦	೪	೦
೫೨೬		ಶಿರಸ್ತೆದಾರವರಲ್ಲಿಂದ	೦	೮	೦
		(ಕೈತಪ್ಪಿನಿಂದ ನಿಂತಿರುವುದು)	೦	೧೦	೦
		ಜುಮ್ಲಾ	೧೭೪೧	೧೨	೪

ಜೆ. ಭಾಸ್ಕರರಾವ್,
ಖಜಾಂಚಿ.

ಜೆ. ಮಾಧವರಾವ್,
ಅಧ್ಯಕ್ಷ.

ನಾವು ಹೋಗಿದ್ದ ಎಲ್ಲಾ ಸ್ಥಳಗಳಲ್ಲಿಯೂ ಆಯಾಯ ಸ್ಥಳದ ಜನಗಳು ಬಹು ಉತ್ಸಾಹದಿಂದ ಸೇರಿದ್ದರು. ಶ್ರೀಯುತ. ಗಂಗಾಧರರಾವ್ ದೇಶಪಾಂಡೆಯವರೂ, ಶ್ರೀ ರಾಜಗೋಪಾಲಾಚಾರ್ಯರೂ ಹೀಗೆ ಸೇರಿದ್ದ ಎಲ್ಲಾ ಸಭೆಗಳಿಗೂ ಮುತುವರ್ಜಿಯಿಂದ ಅರ್ಧ ಘಂಟೆಗೆ ಮುಂಚೆಯೇ ಸಭೆಯನ್ನು ಸೇರಿ ಆ ಸಭೆಯಲ್ಲಿ ಪ್ರಸಿದ್ಧ ಪತ್ರಿಕೆಯಲ್ಲಿ ಪ್ರಕಟಿಸಿದ ಕಾರ್ಯಕ್ರಮಕ್ಕಿಂತಲೂ ಹೆಚ್ಚು ಗಮನದಿಂದ ಜನಗಳು ನಡಕೊಳ್ಳತಕ್ಕ ವಿಷಯದಲ್ಲಿ ಮಾತನಾಡಿದ್ದರಿಂದ ಅವರಿಬ್ಬರೂ ವಂದನೀಯರಾಗಿರುವರು. ಆದರೆ ತೀರ್ಥಹಳ್ಳಿಯಲ್ಲಿ ಮಾತ್ರ ನಡೆದ ಸ್ತ್ರೀಯರ ಮತ್ತು ಪುರುಷರ ಸಭೆಗಳಲ್ಲಿ ಸರ್ವರೂ ಮುಂದಿನ ಕಾರ್ಯನಿರ್ವಾಹಕರ ಆಗಮನಕ್ಕೆ ಮುಂಚೆಯೇ ಗಾಂಭೀರ್ಯದಿಂದಲೂ ನಿಶ್ಶಬ್ದದಿಂದಲೂ ಕೂಡಿ ಸಜೀವಪ್ರತಿಮೆಗಳಂತಿದ್ದರು. ಈ ಪವಿತ್ರವಾದ ಸ್ಥಳದ ನಿವಾಸಿಗಳು ಬಹಳ ಮೋಹನವನ್ನು ಮಾಡಿ ಈ ಸಭೆಗಳನ್ನು ಸೇರಿಸಿದ ಏರ್ಪಾಡನ್ನೂ ಮತ್ತು ಶಕ್ತಿಮೀರಿ ಸಂಗ್ರಹಿಸಿಕೊಟ್ಟ ನಿಧಿಯನ್ನೂ ನೋಡಿದರೆ ಯಾರಿಗಾದರೂ ಸಂತೋಷವನ್ನುಂಟುಮಾಡದಿರಲಾರದು.

(ಮಹಾತ್ಮಾಜಿಯವರ "ಯಂಗ್ ಇಂಡಿಯಾ" ಎಂಬ (ತಾ. ೧—೯—೨೭ನೇ) ಆಂಗ್ಲಪತ್ರಿಕೆಯಲ್ಲಿ ಶ್ರೀಯುತ. ಮಹದೇವ ದೇಸಾಯಿಯವರ ಲೇಖನದಿಂದ ಪರಿವರ್ತಿಸಿರುವುದು.)

ರಾಧಾಕೃಷ್ಣ ಮುದ್ರಾಯಂತ್ರ, ತೀರ್ಥಹಳ್ಳಿ

Filed
Received on 1 Jan 34
In The National High School Maidan at 5.30 P.M.
[illegible signature] Hon. Secy

ಪೂಜ್ಯರಾದ ಮಹಾತ್ಮ ಮೋಹನದಾಸ್ ಕರ್ಮಚಂದ್ ಗಾಂಧಿಯವರಿಗೆ

ಬೆಂಗಳೂರು ನಗರದ ಮಹಾಜನರು

ಒಪ್ಪಿಸಿದ ಬಿನ್ನವತ್ತಳೆ

ಪೂಜ್ಯರಾದ ಮಹಾತ್ಮಾಜಿಯವರೇ,

ಇಲ್ಲಿ ಸೇರಿರುವ ಬೆಂಗಳೂರು ಪುರನಿವಾಸಿಗಳಾದ ನಾವು ತಮಗೆ ಪ್ರೀತಿಗೌರವಪೂರ್ವಕವಾಗಿ ಸ್ವಾಗತವನ್ನು ಆಶಿಸುತ್ತೇವೆ.

ಈಗ ಆರುವರ್ಷಗಳ ಹಿಂದೆ ತಾವು ಆರೋಗ್ಯ ನಿಮಿತ್ತವಾಗಿ ಈ ಊರಿಗೆ ಬಿಜಯಮಾಡಿಸಿದ್ದಾಗ ತಮಗೆ ಸ್ವಾಗತವನ್ನು ಬಯಸುವ ಸುಯೋಗವು ನಮಗೆ ದೊರೆತಿದ್ದಿತು. ಆಗಿನಿಂದ ಈವರೆಗಣ ಅಂತರದಲ್ಲಿ ಮಾತೃಭೂಮಿಯೊಳಗ ಸಾಮಾಜಿಕ ರಾಜಕೀಯ ವಿಚಾರಗಳಲ್ಲಿ ಅಧಿಕವಾದ ಜಾಗ್ರತಿಯೂ ಉನ್ನತಿಯೂ ತಲೆದೋರಿವೆ ತಮ್ಮ ಚರಿತ್ರಪ್ರಸಿದ್ಧವಾದ ಉಪವಾಸ ವ್ರತದಿಂದ ಅಸ್ಪೃಶ್ಯತಾ ನಿವಾರಣೆ ಮತ್ತು ಹರಿಜನೋದ್ಧಾರ ವಿಷಯದಲ್ಲಿ ಭಾರತೀಯರೆಲ್ಲರ ಹೃದಯದೊಳಗೂ ಉತ್ಸಾಹವೂ ಜಾಗೃತಿಯೂ ಅತಿಶಯವಾಗಿ ತೋರುತ್ತಿವ ಪೂನಾ ಒಪ್ಪಂದದೊಳಗ ಹಿಂದೂಗಳ ಪರವಾಗಿ ತಾವು ಹರಿಜನರಿಗೆ ಕೊಟ್ಟ ಭಾಷೆಯನ್ನು ಸಲ್ಲಿಸುವ ದಕ್ಕೋಸ್ಕರ ಈಗ ಕೈಕೊಂಡಿರುವ ಅಖಿಲಭಾರತ ಹರಿಜನ ಪ್ರವಾಸಕಾರ್ಯವು ನಮಗೆಲ್ಲ ಆನಂದವನ್ನೂ ಕೃತಜ್ಞತೆಯನ್ನೂ ಉಂಟಾಗಿಸುತ್ತಿದೆ.

ಪ್ರಕೃತ ಮೈಸೂರು ರಾಜ್ಯದೊಳಗೆ 10,00,3[illegible] ಮಂದಿ ಹರಿಜನರು ಇರುತ್ತಾರೆ. ಈ ಜನರ ಸಂಖ್ಯೆಯು ದೇಶದ ಒಟ್ಟು ಜನಸಂಖ್ಯೆಯಲ್ಲಿ [illegible] ಭಾಗಕ್ಕೆ ಕೊಂಚ ಕಮ್ಮಿಯಾಗುತ್ತದೆ. ದೇಶದ ಪ್ರಜಾ ಸಂಖ್ಯೆಯಲ್ಲಿ ಓದು ಒಂದವರ ಪರಿಮಾಣವು 1000 ಕ್ಕೆ 91 ಇದ್ದರೆ, ಈ ಜನರಲ್ಲಿ ಅದು 1000 ಕ್ಕೆ 16 ಆಗುತ್ತದೆ.

ಹರಿಜನರ ವಿಷಯವಾಗಿ ಮೈಸೂರು ಸರ್ಕಾರದವರು ಬಹುವಾಗಿ ಮಮತೆಯನ್ನು ತೋರಿಸುತ್ತಿದ್ದಾರೆ ಅವರ ದುಸ್ಥಿತಿಯನ್ನು ಸುಧಾರಿಸಬೇಕೆಂದು ರಾಜಾಂಗದವರು ವಿಶೇಷವಾಗಿ ಪರಿಶ್ರಮಿಸುತ್ತಿದ್ದಾರೆ ಹರಿಜನರ ಮತ್ತು ಇತರ ನಿಮ್ನ ಕುಲದವರ ವಿದ್ಯಾಭ್ಯಾಸಕ್ಕಾಗಿ ಸರ್ಕಾರದವರು ಪ್ರತ್ಯೇಕವಾದ ಅನುಕೂಲ್ಯಗಳನ್ನು ಉಂಟುಮಾಡಿ ವರ್ಷಂಪ್ರತಿ 2½ ಲಕ್ಷ ರೂಪಾಯಿಗಳನ್ನು ವೆಚ್ಚಿಸುತ್ತಾರೆ. ಸಾರ್ವಜನಿಕ ಪಾಠಶಾಲೆಗಳಿಗೂ ಪ್ರೌಢವಿದ್ಯಾಲಯಗಳಿಗೂ ಹೋಗುವುದಕ್ಕೆ ಹರಿಜನರಿಗೆ ಅವಕಾಶವುಂಟು. ಇದೂ ಅಲ್ಲದೆ ಪ್ರತ್ಯೇಕವಾಗಿ ಹರಿಜನರಿಗಾಗಿಯೇ 602 ಪ್ರಾಥಮಿಕ ಪಾಠಶಾಲೆಗಳಿವೆ. ಇವುಗಳಲ್ಲಿ 10,5[illegible]4 ಹುಡುಗರೂ 2,103 ಹುಡುಗಿಯರೂ ಓದುತ್ತಾರೆ ಸಾರ್ವಜನಿಕ ಪಾಠಶಾಲೆಗಳಲ್ಲಿ 3,969 ಹುಡುಗರೂ 419 ಹುಡುಗಿಯರೂ ವಿದ್ಯೆ ಕಲಿಯುತ್ತಾರೆ. ಹರಿಜನರಿಗಾಗಿಯೇ ಸರಕಾರದ ಆರು ವಿದ್ಯಾರ್ಥಿನಿಲಯಗಳೂ, ಸರಕಾರದ ಸಹಾಯವನ್ನು ಪಡೆದ 10 ವಿದ್ಯಾರ್ಥಿನಿಲಯಗಳೂ ಇವೆ ಅವುಗಳೊಳಗೆ ಎರಡು ಹುಡುಗಿಯರ ವಸತಿಗಳು. ಎಲ್ಲ ತರಗತಿಗಳಲ್ಲಿರುವ ಹರಿಜನರ ವಿದ್ಯಾರ್ಥಿ ವೇತನಕ್ಕಾಗಿ 26,610 ರೂಪಾಯಿಗಳು ತೆಗೆದಿಡಲ್ಪಟ್ಟಿವೆ. ಹರಿಜನರು ತಮ್ಮ ಓದಿಗೋಸ್ಕರ ಪಾಠಶಾಲೆಗೆ ಮಾಸಾಶನವನ್ನು ಕೊಡಬೇಕಾಗಿಲ್ಲ. ಪರೀಕ್ಷೆಗಳಿಗೆ ಹಣವನ್ನು ಕಟ್ಟಬೇಕಾಗಿಯೂ ಇಲ್ಲ ವಿದ್ಯಾರ್ಥಿವೇತನವನ್ನು ಪಡೆಯದೆ ಪ್ರಾಥಮಿಕ ಶಾಲೆಗಳಲ್ಲಿ ಓದುತ್ತಿರುವ ಹರಿಜನರ ಮಕ್ಕಳಿಗೆ ಹಲಗೆ, ಪುಸ್ತಕ, ಬಟ್ಟೆಗಳನ್ನು ಉಚಿತವಾಗಿ ಒದಗಿಸುವ ಏರ್ಪಾಡು ಕೂಡ ಆಗಿರುತ್ತದೆ.

ಪರಸ್ಪರ ಸಹಾಯ ವಿಚಾರವನ್ನು ಹರಿಜನರಲ್ಲಿ ಒಳಕೆಗೆ ತರಬೇಕೆಂದು ಸರಕಾರದವರು ತುಂಬ ಸಾಹಸಪಡುತ್ತಿದ್ದಾರೆ. ಹರಿಜನರ ಮತ್ತು ಇತರ ನಿಮ್ನ ಕುಲದವರ ಉಪಯೋಗಕ್ಕಾಗಿಯೇ 250 ಪ್ರತ್ಯೇಕವಾದ ಸಂಘಗಳಿವೆ. ಅವುಗಳಲ್ಲಿ 6,060 ಜನ ಮೆಂಬರುಗಳಿದ್ದಾರೆ. 1,18,143 ರೂಪಾಯಿಗಳ ಬಂಡವಾಳವಿದೆ. ಸರಕಾರದವರೂ, ಮೈಸೂರು ದೇಶೀಯ ಪರಸ್ಪರ ಸಹಾಯಕ ಪ್ರಧಾನ (ಏಪೆಕ್ಸ್) ಬ್ಯಾಂಕಿನವರೂ ಈ ಸಂಘಗಳಿಗೆ ಸುಲಭವೂ ಅನುಕೂಲವೂ ಆದ ಒಪ್ಪಂದದ ಮೇಲೆ ಹಣವನ್ನು ಒದಗಿಸುತ್ತಿದ್ದಾರೆ. ಗೊಟ್ಟಿಗೆರೆಯಲ್ಲಿಯೂ, ಬೈರಾಪುರದಲ್ಲಿಯೂ ಎರಡು ಹರಿಜನ ಪರಸ್ಪರ ಸಹಾಯಕ ವಸತಿಗಳಿವೆ.

ಭೂಮಿಕಾಣಿಯಿಲ್ಲದ ಹರಿಜನರಿಗೆ ಸರ್ಕಾರದವರು ನೆಲವನ್ನು ಕಮ್ಮಿ ಬೆಲೆಗೆ ಕೊಡುತ್ತಾರೆ. ಮನೆ ಕಟ್ಟಿಕೊಳ್ಳುವುದಕ್ಕಾಗಿ ಕುಟುಂಬವೊಂದಕ್ಕೆ 15 ರೂಪಾಯಿ ಬೆಲೆಬಾಳುವ ಮರಮುಟ್ಟುಗಳು ಬೊಂಬು ಮುಂತಾದುವನ್ನು ಸರ್ಕಾರದ ಕಾಡುಗಳಿಂದ ಹರಿಜನರಿಗೆ ಉಚಿತವಾಗಿ ಸರ್ಕಾರದವರು ಒದಗಿಸಿ ಕೊಡುತ್ತಿದ್ದಾರೆ. ಮೈಸೂರು ದೇಶದ ರಾಜಕೀಯ ಸಂಸ್ಥೆಗಳಲ್ಲೆಲ್ಲ ಹರಿಜನರು ಪ್ರತಿನಿಧಿಗಳಾಗಿ ನಿಯಮಿಸಲ್ಪಡುತ್ತಿದ್ದಾರೆ. ಸರ್ಕಾರದ ಉದ್ಯೋಗಗಳನ್ನು ಹರಿಜನರಿಗೇ ಮುಖ್ಯವಾಗಿ ಕೊಡುತ್ತಿದ್ದಾರೆ.

ಈ ರಾಜ್ಯದಲ್ಲಿ ಅಸ್ಪೃಶ್ಯತಾನಿರೋಧ ಮತ್ತು ಹರಿಜನೋದ್ಧಾರಕಾರ್ಯಗಳನ್ನು ಮೈಸೂರು ರಾಜ್ಯದ ಅಸ್ಪೃಶ್ಯತಾ ನಿರೋಧಕ ಸಂಘವೂ ಅದರ ಶಾಖೆಯ ಸಂಘಗಳೂ ನಡೆಸುತ್ತಿವೆ. ಸರಕಾರದವಲ್ಲದ ಹಲವು ಸಂಘಗಳು ಕೂಡ ಈ ಕಾರ್ಯವನ್ನು ಕೈಕೊಂಡಿರುತ್ತವೆ. ಮಾವಳ್ಳಿಯ ಆದಿಕರ್ಣಾಟಕ ಸಂಘ, ಗೋಪಾಲಪುರದ ಆದಿಜಾಂಬವ ಸಂಘ, ಕಣಿಯರ ಸಂಘ, ಆದಿದ್ರಾವಿಡ ಮಹಾಜನಸಂಘ, ಮೈಸೂರಿನ ಆದಿಕರ್ಣಾಟಕ ಸಹಾಯ ಸಂಘ, ಕೋಲಾರದ ಚಿನ್ನದಗಣಿಯ ನಿಮ್ನಕುಲೋದ್ಧಾರ ಸಭೆ, ಮುಂತಾದ ಹಲವು ಸಂಘಗಳ ಕಾರ್ಯಕಲಾಪಗಳೆಲ್ಲ ಹರಿಜನರಿಂದಲೇ ನಿರ್ವಹಿಸಲ್ಪಡುತ್ತಿವೆ. ತಗಡೂರು ಸತ್ಯಾಗ್ರಹಾಶ್ರಮ, ಕೆಂಗೇರಿಯ ಗುರುಕುಲಾಶ್ರಮ, ಬೆಂಗಳೂರ ದೀನಸೇವಾಸಂಘ, ಪೌರ ಮತ್ತು ಸಾಮಾಜಿಕೋನ್ನತಿ ಸಮಿತಿ, ಆರ್ಯಸಮಾಜ, ಮುಂತಾದ ಕೆಲವು ಪ್ರಮುಖ ಸಂಸ್ಥೆಗಳೂ ಈ ಕಾರ್ಯಕ್ಕೆ ಕೈಹಾಕಿವೆ. ಮೈಸೂರು ಸೀಮೆಯ ಅಸ್ಪೃಶ್ಯತಾ ನಿರೋಧಕ ಸಂಘವು ಒಂಬತ್ತು ಡಿಸ್ಟ್ರಿಕ್ಟು ಸಂಗಡನಾಗಿ ವಿಭಾಗವಾಗಿದೆ. ಮೈಸೂರು, ಹಾಸನ, ಕೋಲಾರ, ಬೆಂಗಳೂರು ದಂಡು, ಎಂಬ ನಾಲ್ಕು ಸಂಗಡಗಳಲ್ಲಿ ಮಟ್ಟಿಗೆ ಡಿಸ್ಟ್ರಿಕ್ಟ್ ಸಮಿತಿಗಳು ಇರುತ್ತವೆ. ಆದರೆ ದಾವಣಗೆರೆ, ಸಂಜನಗೂಡು, ಚೆನ್ನಪಟ್ಟಣ, ಕುಲೀಸಪೇಟೆ, ಚಿಂತಾಮಣಿ ಮುಂತಾದ ಕೆಲವು ಕಡೆಗಳಲ್ಲಿ ಸ್ಥಳೀಯ ಕೇಂದ್ರಗಳು ಏರ್ಪಾಡಾಗಿವೆ. ಈ ಸಂಘವು ಹೋದವರ್ಷ ಹರಿಜನರ ಮಕ್ಕಳ ನಾಲ್ಕು ಪಾಠಶಾಲೆಗಳಿಗೆ ಮಾಸಾಶನವಾಗಿ 65 ರೂಪಾಯಿಗಳನ್ನೂ, ಹರಿಜನ ವಿದ್ಯಾರ್ಥಿಗಳ ಪೋಷಣೆಗಾಗಿ ಕೆಂಗೇರಿಯ ಗುರುಕುಲಾಶ್ರಮಕ್ಕೆ 45 ರೂಪಾಯಿಗಳನ್ನೂ, ಬೆಂಗಳೂರು ಆದಿಜಾಂಬವ ವಿದ್ಯಾರ್ಥಿನಿಲಯಕ್ಕೆ 40 ರೂಪಾಯಿಗಳನ್ನೂ, ಪರೀಕ್ಷೆಯಲ್ಲಿ ತೇರ್ಗಡೆಯಾಗದೆ ವಿದ್ಯಾರ್ಥಿವೇತನರೂಪವಾದ ಸರ್ಕಾರದ ಸಹಾಯವನ್ನು ಕೊಂಚಮಟ್ಟಿಗೆ ಕಳೆದುಕೊಂಡ ಹರಿಜನ ವಿದ್ಯಾರ್ಥಿಗಳ ಮಾತ್ರ ವೇತನಕ್ಕಾಗಿ 20 ರೂಪಾಯಿಗಳನ್ನೂ ಕೊಟ್ಟಿರುತ್ತದೆ. ಇದೂ ಅಲ್ಲದೆ ಇಗ, ಅಸ್ಪೃಶ್ಯತಾ ನಿವಾರಣೆ, ಪಾನನಿರೋಧ, ಶುಚಿಯಾಗಿರುವುದು, ಹಸನಾಗಿ ಜೀವನಮಾಡುವುದು ಎಂಬ ವಿಷಯಗಳಲ್ಲಿ ಹರಿಜನರಿಗೆ ತಿಳುವಳಿಕೆಯನ್ನು ಕೊಡುತ್ತ ದೇಶದಲ್ಲೆಲ್ಲ ವಿಶೇಷವಾಗಿ ಸಂಚಾರಮಾಡಿದುದಲ್ಲದೆ, ನಾನಾ ಭಾಗಗಳಲ್ಲಿರುವ ಹರಿಜನರ 25 ವಾಸಸ್ಥಳಗಳ ಶುಚಿ ಮತ್ತು ಅನುಕೂಲ್ಯಗಳನ್ನು ಪರಾಮರ್ಶಿಸಿ, ಹರಿಜನರ ಸ್ಥಿತಿಯನ್ನು ನೇರಮಾಡುವ ಸಲುವಾಗಿ ಸರ್ಕಾರಕ್ಕೂ, ಪುರಾಧಿಕಾರಿಗಳಿಗೂ, ಸ್ಥಳಾಧಿಕಾರಿಗಳಿಗೂ ವಿಶೇಷ ರೀತಿಯಿಂದ ವಿಜ್ಞಾಪಿಸಿಕೊಂಡಿತು. ಪ್ರಜಾಪ್ರತಿನಿಧಿಸಭೆಯಲ್ಲಿಯೂ, ಶಾಸನ ನಿರ್ಮಾಣ ಸಭೆಯಲ್ಲಿಯೂ ಸದಸ್ಯರಾಗಿರುವ ಈ ಸಂಘದ ಸಭ್ಯರು ಶ್ರೀ ಸುಬ್ಬರಾಮಶೆಟ್ಟರ ಮತ್ತು ವೆಂಕಟಪ್ಪನವರ ಮುಂದಾಳುತನದಲ್ಲಿ ಸಮಾನವಾದ ಬಾಧ್ಯತೆಗಳನ್ನೂ ಅನುಕೂಲ್ಯಗಳನ್ನೂ ಹರಿಜನರಿಗೂ ಒದಗಿಸಿಕೊಡಬೇಕೆಂದು ನಿರ್ಣಯಗಳನ್ನೂ ವಿಜ್ಞಾಪನೆಗಳನ್ನೂ ಆಯಾ ಸಭೆಗಳ ಅವಗಾಹನೆಗೆ ತಂದರು. ಮುಜರಾಯಿ ಆಡಳಿತದಲ್ಲಿರುವ ದೇವಾಲಯಗಳನ್ನೆಲ್ಲ ಹರಿಜನರಿಗೆ ತೆರೆದಿಡಬೇಕೆಂಬ ನಿರ್ಣಯವು 1932 ನೆಯ ವರ್ಷದ ಡಿಸಂಬರು ತಿಂಗಳಲ್ಲಿ ನಡೆದ ಶಾಸನನಿರ್ಮಾಣ ಸಭೆಯ ಅಧಿವೇಶನದಲ್ಲಿ ನಿರ್ವಿವಾದವಾಗಿ ಅಂಗೀಕೃತವಾಯಿತು. ಮೈಸೂರು ರಾಜ್ಯದಲ್ಲಿ ಅಸ್ಪೃಶ್ಯತೆಯನ್ನು ತೊಡೆದುಹಾಕಿಬಿಡಬೇಕೆಂಬ ನಿರ್ಣಯವು ಜೂನ್ 1933 ರಲ್ಲಿ ಪ್ರತಿನಿಧಿ ಸಭೆಯ ಮುಂದೆ ತರಲ್ಪಟ್ಟು 121 ಸಮ್ಮತಿಗಳೂ, 56 ಅಸಮ್ಮತಿಗಳೂ ದೊರೆತು, ಬಹುಮತದಿಂದ ಅಂಗೀಕೃತವಾಯಿತು. ಭಾರತ ಶಾಸನ ಸಭೆಯ ಮುಂದೆ ಶ್ರೀ|| ಸಿ. ಎಸ್. ರಂಗಯ್ಯರವರು ತಂದಿರುವ ಅಸ್ಪೃಶ್ಯತಾ ನಿವಾರಕ ಶಾಸನದ ಮಸೂದೆಯ ಮಾದರಿಯಲ್ಲಿ ಮೈಸೂರು ಅಸ್ಪೃಶ್ಯತಾ ನಿವಾರಕ ಶಾಸನದ ಮಸೂದೆಯು ಈ ಸಂಘದ ಉಪಸಭೆಯಿಂದ ವಿರಚಿತವಾಯಿತು. ಶಾಸನ ಸಭೆಯ ಸರಕಾರದ ಸದಸ್ಯರಲ್ಲದ 10 ಮಂದಿ ಸಭಿಕರು ಅದನ್ನು ಶಾಸನ ಸಭೆಯಲ್ಲಿ ಮುಂದುವರಿಸಬೇಕೆಂದು ದಿವಾನರವರನ್ನು ಪ್ರಾರ್ಥಿಸಿಕೊಂಡರು. ಈ ಮಸೂದೆಯನ್ನು ಒಂದೊಂದು ಸ್ಥಿತಿಯಲ್ಲಿಯೂ ಸಂಪೂರ್ಣವಾಗಿ ಈಗಣ ಸಭೆಯಲ್ಲಿ ಮುಂದುವರಿಸಲಾಗುವುದಿಲ್ಲನೆಂದು ದಿವಾನರು ಅಪ್ಪಣೆಕೊಡಿಸಿಬಿಟ್ಟರು. ಈ ಹಿಂದೆ ನಡೆದ (ಸೆಪ್ಟೆಂಬರು 33) ಪ್ರಜಾಪ್ರತಿನಿಧಿ ಸಭೆಯಲ್ಲಿ ಸಾರ್ವಜನಿಕವಾದ ಎಲ್ಲ ಹಾದಿಗಳನ್ನೂ ಕೆರೆ ಕೊಳ ಬಾವಿಗಳನ್ನೂ ಸತ್ರಗಳನ್ನೂ ಜಾತಿಮತ ಭೇದವಿಲ್ಲದೆ ಸಕಲರೂ ಉಪಯೋಗಿಸಬಹುದೆಂಬ ಅರ್ಥಕ್ಕೆ ರಾಜಾಜ್ಞೆಯನ್ನು ಹೊರಡಿಸಬೇಕೆಂದು ಸರಕಾರವನ್ನು ಬೇಡಲಾಯಿತು. ಆ ಪ್ರಕಾರವೇ ಆಜ್ಞೆಯನ್ನು ಹೊರಡಿಸಲಾದೀತು ಎಂದು ಸರಕಾರದವರು ಅಭಯವನ್ನು ಕೊಟ್ಟರು. ಈಚೆಗೆ ರಾಜಾಜ್ಞೆಯು ಪ್ರಕಟವಾಗಿರುವುದು ಸಂತೋಷದ ಮಾತಾಗಿದೆ.

ಹರಿಜನರ ಏಳಿಗೆಗಾಗಿ ಮಾಡಬೇಕಾಗಿರುವ ಕಾರ್ಯವು ಇನ್ನೂ ಅಪಾರವಾಗಿದೆ. ನಾವು ಇದುವರೆಗೆ ಆ ಹಾದಿಯಲ್ಲಿ ನಡೆಸಿರುವ ಕಾರ್ಯ ಅತ್ಯಲ್ಪವಾದುದೆಂದು ಚೆನ್ನಾಗಿ ತಿಳಿದುಕೊಂಡಿದ್ದೇವೆ. ತಮ್ಮ ಪ್ರೋತ್ಸಾಹದಿಂದಲೂ ಮಾರ್ಗದರ್ಶಿತ್ವದಿಂದಲೂ ಮುಂದೆ ನಾವು ಅಸ್ಪೃಶ್ಯತೆಯನ್ನು ಬುಡದೊಡನೆ ಕಿತ್ತುಹಾಕಿ ಹರಿಜನರ ಜೀವನಕ್ರಮವನ್ನು

ನೇರಮಾಡುವ ಕಾರ್ಯದಲ್ಲಿ ಇತೋಪ್ಯತಿಶಯವಾಗಿ ಪ್ರಯತ್ನಿಸುವ ಶಕ್ತಿಯು ನಮಗೆ ಉಂಟಾದೀತೆಂದು ಹಾರಯಿಸುತ್ತೇವೆ. ಈ ಸಂದರ್ಭದಲ್ಲಿ ಅಸ್ಪೃಶ್ಯತೆಯನ್ನು ಹಾಳುಮಾಡಿ, ಹರಿಜನರ ಉನ್ನತಿಯನ್ನು ಸಾಧಿಸುವುದಕ್ಕಾಗಿ ಆತ್ಮಸಮರ್ಪಣೆಮಾಡಿರುವ ತಮಗೆ ನಾವು ಅತ್ಯಂತ ಕೃತಜ್ಞರಾಗಿದ್ದೇವೆ. ತಮ್ಮ ಈ ಮಹತ್ಪ್ರಯತ್ನದಲ್ಲಿ ನಮ್ಮ ಅಂತಃಕರಣಪೂರ್ವಕವಾದ ಸಹಾಯವೂ ಸಹಾನುಭೂತಿಯೂ ಇದ್ದೇ ಇರುತ್ತವೆ. ಯಾವ ಮಹತ್ಕಾರ್ಯಸಾಧನೆಗೋಸ್ಕರ ತಾವು ಆತ್ಮಸಮರ್ಪಣೆಯನ್ನು ಮಾಡಿದ್ದೀರೋ ಆ ವಿಷಯದಲ್ಲಿ ನಾವು ಸಹಾನುಭೂತಿಯನ್ನೂ ಗೌರವವನ್ನೂ ಉಳ್ಳವರಾಗಿದ್ದೇವೆ. ತಮ್ಮಲ್ಲಿ ನಮಗಿರುವ ಪೂಜ್ಯಬುದ್ಧಿ, ಭಕ್ತಿಗಳ ಕುರುಹಾಗಿ ನಾವು ಈ ಮುಡುಪನ್ನು ತಮಗೆ ಸಮರ್ಪಿಸುತ್ತೇವೆ. ತಾವು ಅದನ್ನು ಸ್ವೀಕರಿಸಿ ಅನುಗ್ರಹಿಸಬೇಕು ಈ ಸಂದರ್ಭದಲ್ಲಿ ಹರಿಜನನಿಧಿಗೆ ಬೆಂಗಳೂರು ನಗರದಲ್ಲಿರುವ ಗುಜರಾತಿ ನಿವಾಸಿಗಳು 901 ರೂಪಾಯಿಗಳನ್ನೂ, ಶಿಕಾರಿಪೂರಿ ಮುಲ್ತಾನಿಬ್ಯಾಂಕರು ಮತ್ತು ವರ್ತಕರು 751 ರೂಪಾಯಿಗಳನ್ನೂ, ಸಂಯುಕ್ತ ಪ್ರಾಂತ್ಯದ ವರ್ತಕರು 501 ಗೂಪಾಯಿಗಳನ್ನೂ ಕೊಟ್ಟಿರುವುದನ್ನು ವಂದನೆಯೊಡನೆ ಸ್ಮರಿಸಲು ಬಯಸುತ್ತೇವೆ.

ಈ ಸಂದರ್ಭದಲ್ಲಿ ದಯಾಮಯಿಯೂ ಕೋಮಲಹೃದಯೆಯೂ ಆದ ಶ್ರೀಮತಿ ಕಸ್ತೂರೀಬಾಯಿಯವರ ದರ್ಶನಲಾಭವು ನಮಗೆ ಆಗದೆ ಹೋಯಿತು. ಜನಸ್ವಾತಂತ್ರ್ಯಕ್ಕಾಗಿ ಆ ಮಹನೀಯೆಯು ಈಗ ಕಾರಾಗೃಹದಲ್ಲಿ ಇರುತ್ತಿದ್ದಾರೆ. ಈ ಸಭೆಯಲ್ಲಿ ತಮ್ಮೊಂದಿಗೆ ಅವರಿಗೂ ಸ್ವಾಗತವನ್ನು ಬಯಸುವ ಭಾಗ್ಯವು ದೊರಕಬೇಕಾಗಿದ್ದಿತೆಂದು ಬಯಸುತ್ತೇವೆ.

ಪೂಜ್ಯರಾದ ಮಹಾತ್ಮಾಜೀಯವರೇ, ಹರಿಜನರ ಉದ್ಧಾರಕ್ಕೋಸ್ಕರ ತಾವು ಆರಂಭಿಸಿರುವ ಈ ಅಸಾಧಾರಣ ಕಾರ್ಯಕ್ಕಾಗಿ ತಮ್ಮನ್ನು ನಾವು ಅತ್ಯಂತ ಕೃತಜ್ಞತೆಯಿಂದ ಅಭಿನಂದಿಸುತ್ತೇವೆ. ಈ ಸಾಹಸಕಾರ್ಯಪ್ರಭಾವದಿಂದ ಸವರ್ಣರ ಮನಸ್ಸೂ ನಿರೀಕ್ಷೆಯೂ ಅತಿಶಯವಾಗಿ ಮಾರ್ಪಟ್ಟುಹೋಗಿವೆ. ಮಾತೃಭೂಮಿಯಿಂದ ಅಸ್ಪೃಶ್ಯತೆಯನ್ನು ಹೊರದೂಡುವ ಪ್ರಯತ್ನದಲ್ಲಿ ಹಿಂದೂ ಜನಾಂಗವೇ ಸೊಂಟಕಟ್ಟಿ ನಿಂತಿದೆ. ತಮ್ಮ ಮುಂದಣ ಪ್ರಯಾಣವು ಸುಗಮವಾಗಿಯೂ ಸುಖವಾಗಿಯೂ ಬೆಳೆಯಲಿ, ತಮ್ಮ ಮಹಾಸಂಕಲ್ಪವು ವಿಜಯೋನ್ಮುಖವಾಗಿಯೂ ಫಲಕಾರಿಯಾಗಿಯೂ ಸಿದ್ಧಿಸಲಿ. ಈ ಮಹತ್ಕಾರ್ಯವು ಸುಮುಖವಾಗಿ ಸಿದ್ಧಿಸುವವರೆಗೂ ತಮಗೆ ದೀರ್ಘಾಯುರಾರೋಗ್ಯಶಕ್ತಿಗಳು ಉಂಟಾಗಲಿ, ಎಂದು ಹಾರಯಿಸುತ್ತ ನಮ್ಮ ವಿಜ್ಞಾಪನೆಯನ್ನು ಮುಕ್ತಾಯಮಾಡುತ್ತೇವೆ.

ಇಂತು ಪೂಜ್ಯ ಮಹಾತ್ಮಾಜಿಯವರ,
ಭಾರತೀಯ ದೇಶಬಾಂಧವರಾದ
ಬೆಂಗಳೂರು ನಗರದ ಮಹಾಜನರು.

ಬೆಂಗಳೂರು ನಗರ,
ತಾ|| 7—1—1934.

ಮೋದಿ ಪವರ್ ಪ್ರಿಂಟಿಂಗ್ ವರ್ಕ್ಸ್, ಬೆಂಗಳೂರು ಸಿಟಿ.

ರಾಷ್ಟ್ರಪತಿ ಜವಾಹೀರರ ಸಂದೇಶ

(ದೇ. ಭ. ಹಣಮಂತರಾಯರಿಗೆ ಜವಾಹೀರರು ಬರೆದ ಪತ್ರ.)

ಪ್ರಿಯ ಕಾಮ್ರೇಡ ಹಣಮಂತರಾಯರೆ—

ಮುಂಬಯಿ ಕಾಯಿದೆ ಮಂಡಳದ ಉಮೇದ್ವಾರನಾಗಿ ಚುನಾವಣಿಯಲ್ಲಿ
ಹೋರಾಡಲು ಕಾಂಗ್ರೆಸ ಪರವಾಗಿ ನೀವು ಆರಿಸಲ್ಪಟ್ಟಿರುವಿರಿ. ಇದಕ್ಕಾಗಿ ನಿಮ್ಮನ್ನು
ನಾನು ಅಭಿನಂದಿಸುತ್ತೇನೆ. ಮತ್ತು ನಿಮಗೆ ಜಯವಾಗಲೆಂದು ಹಾರೈಸುತ್ತಲಿದ್ದೇನೆ
ಹೀಗೆ ವಿಶ್ವಾಸದಿಂದ ಜನರು ನಿಮ್ಮನ್ನು ಆರಿಸುದುದು ಒಂದು ದೊಡ್ಡ ಸನ್ಮಾನವೇ
ಸರಿ ಆದರೆ ಈ ಮೂಲಕ ಅವರು ನಿಮ್ಮ ಮೇಲೆ ಹೊರಿಸಿದ ಜವಾಬದಾರಿಯ
ಹೊರೆಯು ಈ ಸನ್ಮಾನಕಿಂತಲೂ ಹೆಚ್ಚಿನದಾಗಿದೆ. ನೀವಾದರೂ ಆ ಗೌರವಕ್ಕಿಂತಲೂ
ಈ ಜವಾಬದಾರಿಯನ್ನೇ ಹೆಚ್ಚು ಲಕ್ಷಿಸುವವರಾಗಬೇಕೆಂದು ನನ್ನ ಆಸೆ .ನೀವು
ಕಾಂಗ್ರೆಸದ ಪತಿಯಿಂದ ನಿಂತಿರುವಿರಿ ಅಂದರೆ ನಿಮ್ಮ ವ್ಯಕ್ತಿತ್ವವನ್ನೆಲ್ಲ ಬಿಟ್ಟು
ಕೊಟ್ಟು ಇನ್ನುಳಿದ ಅಸಂಖ್ಯ ಕಾಂಗ್ರೆಸ ಉಮೇದ್ವಾರರಂತೆ ಪೀಗ ಪ್ರತಿಜ್ಞೆಯನ್ನು
ಮಾಡಿ ಈ ಸಹಾಸದ ಕಾರ್ಯಕ್ಕೆ ಕೈಹಾಕಿರುವಿರಿ ಹೀಗೆ ಟೊಂಕ ಕಟ್ಟಿ ನೀವು ನಿಂತದ್ದು ಕಾಂಗ್ರೆಸದ ತತ್ವಗಳನ್ನು
ಪಾಲಿಸಲಿಕ್ಕೆ- ಕಾಂಗ್ರೆಸ್ಸದ ಉದ್ದೇಶವನ್ನು ಈಡೇರಿಸಲಿಕ್ಕೆ- ಹಿಂದುಸ್ಥಾನದ ಸ್ವಾತಂತ್ರ್ಯವನ್ನು ಗಳಿಸಲಿಕ್ಕೆ- ಪರಕೀಯ
ಸತ್ತೆಯ ಭಾರದ ಕೆಳಗೆ ಸಿಕ್ಕು ನುಚ್ಚು ನುರಿಯಾಗುತ್ತಿರುವ ಹಿಂದೀ ಜನತೆಯ ಸಂಕಟ ಪರಂಪರೆಯನ್ನು ದೂರ
ಮಾಡುವದಕ್ಕೆ ಇಂದಿನಿಂದ ನೀವೊಬ್ಬರು ಕಾಂಗ್ರೆಸ ಧ್ವಜವನ್ನು ಹೊತ್ತುಕೊಂಡು ತಿರಗುವ ಕಾಂಗ್ರೆಸ ಸಿಪಾಯಿ
ಯಾಗಿರುವಿರಿ ಅಂತೆಯೇ ಹಿಂದೀ ಜನಾಂಗದ ಆಶೆ ಆಕಾಂಕ್ಷೆಗಳನ್ನೂ ಹಂಬಲ ಹವ್ಯಾಸಗಳನ್ನೂ ಅಂಜಿಕೆ ಅಳಕು
ಗಳನ್ನೂ ಶಕ್ತಿ ಶೌರ್ಯಗಳನ್ನೂ ಕುಂದುಕೊರತೆಗಳನ್ನೂ ತನ್ನಲ್ಲಿ ಒಡಮೂಡಿಸಿಕೊಂಡು ಅವೆಲ್ಲವುಗಳ ಪ್ರತಿಬಿಂಬದಂತಿ
ರುವ ಆ ಮಹಾಸಂಸ್ಥೆಯ ಪ್ರತೀಕದಂತೆ ನೀವು ಆದರ್ಶ ಉಮೇದ್ವಾರನಾಗಲು ಯಾವಾಗಲೂ ಆತುರ ಪಡುತ್ತಿರಬೇಕು.

ಖಂಡಿತವಾಗಿಯೂ ನೀವು ಹೊತ್ತುಕೊಂಡ ಜವಾಬದಾರಿಯು ಬಹಳ ದೊಡ್ಡದಾಗಿದೆ ಯಾಕಂದರೆ ರಾಷ್ಟ್ರದ
ಮತ್ತು ಕಾಂಗ್ರೆಸದ ಮರ್ಯಾದೆಯು ಈಗ ನಿಮ್ಮ ರಕ್ಷಣೆಗೆ ಒಪ್ಪಿಸಲ್ಪಟ್ಟಂತಾಗಿದೆ.

ರಾಷ್ಟ್ರದ ಮಾನಾಭಿಮಾನವನ್ನು ಸಂರಕ್ಷಿಸುವ ಈ ಹೊಣೆಗಾರಿಕೆಯ
ಬಗ್ಗೆ ನೀವು ಯಾವಾಗಲೂ ಉತ್ಸುಕರಾಗಿದ್ದು ಅದು ಯಾರಿಂದಲೂ ಕಲಂಕಿತ
ವಾಗದಂತೆ ಯಾವಾಗಲೂ ಎಚ್ಚರಗೊಂಡಿರತಕ್ಕದ್ದು. ಇಂದಿನವರೆಗೆ ಕಾಂಗ್ರೆಸದ
ಕೀರ್ತಿಗಾಗಿ ದುಡಿಯುತ್ತಿರುವ ಧ್ಯೇಯ ಜೀವಿಗಳ ಉದಾತ್ತ ಮತ್ತು ನಿಸ್ವಾರ್ಥ
ಆಚರಣೆಯಿಂದ ಪರಿಶುದ್ಧವಾಗಿ ಬೆಳಗುತ್ತಿರುವ ಕಾಂಗ್ರೆಸಿನ ಉನ್ನತವಾದ
ನೀತಿಯಿಂದ ಚ್ಯುತರಾಗಿ ವಿಜಯ ಸಂಪಾದಿಸುವದು ನಮಗೆ ಬೇಕಿಲ್ಲ.

ಈ ಚುನಾವಣಿಯ ಹೋರಾಟದಲ್ಲಿ ನಾವು ಜಯಶಾಲಿಗಳಾಗುವದು
ಕಟ್ಟಿಟ್ಟ ಮಾತೇ ಎಂದು ನಾನು ಎದೆತಟ್ಟಿ ಹೇಳುತ್ತೇನೆ. ನಾವು ಏತಕ್ಕಾಗಿ ಕಾದುತ್ತಿ
ರುವೆವೆಂಬದು ನಿಮಗೆ ಗೊತ್ತಿದೆ. ನಾವು ಹೊರಡಿಸಿದ ಚುನಾವಣಿ ಉದ್ದೇಶ ಪತ್ರಿಕೆ
ಯನ್ನು ನೀವು ಓದಿರುವಿರಿ. ನೀವಾದರೂ ನಿಮ್ಮ ಚುನಾವಣಿ ಪ್ರಚಾರ ಕಾರ್ಯವನ್ನು
ಆ ಉದ್ದೇಶ ಪತ್ರಿಕೆಗೆ ಅನುಸರಿಸಿಯೇ ನಡೆಸುವಿರೆಂದು ನಾನು ನಂಬಿದ್ದೇನೆ. ಮತ್ತು
ಅದರಬಗ್ಗೆ ಜನತೆಗೆ ಚನ್ನಾಗಿ ತಿಳಿಸಿ ಹೇಳುವದು ನಿಮ್ಮ ಕರ್ತವ್ಯವಾಗಿದೆ.

ನಾವು ಸಣ್ಣ ಪುಟ್ಟ ಸುಧಾರಣೆಗಳಿಗೆ ಹೆಣಗಾಡುವದಿಲ್ಲ. ನಮ್ಮ ಜನರ
ಸಲುವಾಗಿ ನಮ್ಮ ದೇಶವನ್ನು ಸ್ವತಂತ್ರವಾಗಿ ಮಾಡುವದಕ್ಕಾಗಿ ಹೋರಾಡುತ್ತಿರುವೆವು.
ಕಾಯದೆ ಮಂಡಳಗಳಲ್ಲಿ ಹೊಕ್ಕು ಸರಕಾರದ ಸಂಗಡ ಹೋರಾಡಿ ನಮ್ಮ ಮೇಲೆ ಹೇರಿದ ಹೊಸರಾಜ್ಯ ಪದ್ಧತಿಯ
ಮಾಯಾ ಜಾಲವನ್ನು ಮಣ್ಣು ಮುಕ್ಕಿಸುವದಕ್ಕಾಗಿ ನಾವು ಕಾಯದೇ ಮಂಡಳಗಳಲ್ಲಿ ಸೇರುತ್ತೇವೆ ಈಗಿನ ಚುನಾವಣಿಯ
ಹೋರಾಟದ ಮುಖ್ಯ ಉದ್ದೇಶವಾದರೂ ಇದೇ ಇರುವದು. ದೊಡ್ಡಸ್ತಿಕೆಗೆ ಅಥವಾ ಸ್ವಾರ್ಥಕ್ಕೆ ನಾವು ಎಂದೂ ಬಲಿ
ಬೀಳುವದಿಲ್ಲ. ನಿಮ್ಮ ಪ್ರಯತ್ನವು ಯಶಸ್ವಿಯಾಗಿ ಗೆಲವಿನ ಮಾಲೆಯು ನಿಮ್ಮ ಕೊರಳಿಗ ಬೀಳಲಿ.

ಹಿಂದುಸ್ಥಾನದ ಸ್ವರಾಜ್ಯದ ಹೋರಾಟದಲ್ಲಿ ನಿಮ್ಮ ಜತೆಗಾರನಾದ

ಸಹಿ— ಜವಾಹಿರಲಾಲ ನೇಹರು

ಪ್ರಕಟಣೆ ನಂ. ೨

ಕಾಂಗ್ರೆಸ ಪತಿಯಿಂದ ನಿಂತ ಉಮೇದ್ವಾರನಿಗೇ ರೈತರು ಯಾಕೆ ಮತಕೊಡಬೇಕು?

ನಮ್ಮ ದೇಶದಲ್ಲಿಯ ರೈತ ಜನರು ಯಾವರೀತಿಯಿಂದ ಗೋಳಿಟ್ಟು ಬಳಲುತ್ತಿರುವರು ನೋಡಿರಿ!

(೧) ಎಷ್ಟೋ ರೈತರ ಹೊಲಗಳು ಸಾವುಕಾರನಿಗಾಗಲಿ ಸೊಸಾಯಟಿಗಾಗಲಿ ಒತ್ತಿ ಬಿದ್ದಿವೆ. ಆ ಹೊಲಗಳನ್ನು ಸಾವುಕಾರರು ಅಥವಾ ಸೊಸಾಯಿಟಿಗಳು ಎಷ್ಟೋ ಕಡೆಯಲ್ಲಿ ಸುಂಗಿ ನೀರು ಕುಡಿದಿದ್ದಾರೆ. ರೈತರ ಮನೆಗಳೂ ಸಾವು ಕಾರರ ಬಾಯಿಗೆ ಬಿದ್ದಿವೆ. ಹೀಗಾಗಿ ರೈತರು ಹೊಲ-ಮನೆಗಳನ್ನು ಕಳಕೊಂಡು ಕೇವಲ ಗುದ್ದಲಿಯ ಗೆಣೆಯರಾಗಿ ಒಪ್ಪತ್ತಿನ ಊಟ ಸಹ ಸಿಗದೆ ಕಂಗಾಲರಾಗಿರುವರು.

(೨) ರೈತನು ತಂದ ಸಾಲದ ಹಣವು ಮೊದಲು ಅಲ್ಪವಾಗಿದ್ದರೂ ಮುಂದೆ ಸಾವು ಕಾರನ ಬಡ್ಡಿಯು, ಹಣಮಪ್ಪನ ಬಾಲ ಬೆಳೆದಂತೆ ಬೆಳೆಯುತ್ತ ಹೋಗಿ ಸಾಲವನ್ನು ತಿರುಗಿ ಮುಟ್ಟಿಸುವದು ರೈತನಿಗೆ ಇನ್ನೊಮ್ಮೆ ಹುಟ್ಟಿಬಂದರೂ ಮುಟ್ಟಿಸಲಾರದಷ್ಟು ಅಸಾಧ್ಯವಾಗಿದೆ.

(೩) ಹೊಲದಲ್ಲಿ ಬೆಳೆ ಬರುವ ಧಾನ್ಯಗಳ ಹಾಗೂ ಹತ್ತಿಯ ಬೆಲೆಯು ತೀರ ಕಡಿಮೆ ಯಾಗಿದೆ. ಬೆಳೆಗಳೂ ಮಳೆಗಾಲ ಕಡಿಮೆಯಾದ್ದರಿಂದ ಮೊದಲಿನಂತೆ ಭರದಿಂದ ಬೆಳೆದು ಬರುವದಿಲ್ಲ. ಆದರೆ ರೈತನು ಸರಕಾರಕ್ಕೆ ತೆತ್ತಬೇಕಾದ ಬಿರಾಡವು ಮಾತ್ರ ಒಂದು, ಪೈ ಸಹ ಕಡಿಮೆಯಾಗಿಲ್ಲ.

(೪) ಬ್ರಿಟಿಶ ಸರಕಾರವು ನಮ್ಮ ಮೇಲೆ ರಾಜ್ಯಮಾಡಹತ್ತಿ ಒಂದುನೂರಾ ಐವತ್ತು ವರ್ಷಗಳಾದರೂ ರೈತರು ಅಕ್ಷರ ಶತ್ರುಗಳೂ ಅಜ್ಞಾನಿಗಳೂ ಆಗಿ ಓದುಬರಹ ಸಹ ಬಾರದೆ ತಿಳಗೇಡಿಗಳಾಗಿ ಉಳಿದಿರುವರು.

ಕಾಂಗ್ರೆಸ ಹುರಿಯಾಳಾದ ದೇ. ಭ. **ಕೌಜಲಗಿ ಹಣಮಂತರಾಯರು.**

ನಿಮ್ಮ ಮತಗಳನ್ನು **ಕೊಡಬೇಕಾದದು ಇವರಿಗೇ.**

(೫) ಹಳ್ಳಿಯ ಹೋರೆಗಳಾದ ನೇಕಾರಿಕೆ, ಬಡಿಗತನ, ಕಂಬಾರತನ, ಗಾಣದ ಕೆಲಸ ಕುಂಬಾರತನ, ನೂಲುವದು, ಕಂಬಳಿ ಗುಡಾರ ಮೊದಲಾದವುಗಳನ್ನು ನೇಯುವದು ಇವೆಲ್ಲ ಉದ್ಯೋಗಗಳಿಗೆ ಉತ್ತೇಜನ ಕೊಡದೆ ಇದ್ದದರಿಂದ ಈಗ ಅವು ಹಾಳಾಗ ಹತ್ತಿರುವವು. ಬರಗಾಲವಂತೂ ನಮ್ಮ ಬೆನ್ನೇ ಹತ್ತಿದೆ. ಹಳ್ಳಿಗಳಲ್ಲಿ ನಿರುದ್ಯೋಗವು ಹೆಚ್ಚಾಗಿ ಇಲ್ಲದ ಕುಚೇಷ್ಟೆಗಳು ಬೆಳೆಯಹತ್ತಿವೆ. ಹೊಟ್ಟೆ ತುಂಬ ರೊಟ್ಟಿ ಇಲ್ಲ. ಉಟ್ಟೇನೆಂದರೆ ಬಟ್ಟೆ ಇಲ್ಲ. ಹೀಗಾಗಿ ರೈತರ ಸ್ಥಿತಿಯು ಬಹಳೇ ಕೆಟ್ಟು ಹೋಗಿದೆ

ರೈತರ ಈ ಕಷ್ಟ ನಷ್ಟಗಳು ದೂರವಾಗಿ ಅವನಿಗೆ ಸುಖ ಸಿಗಬೇಕಾದರೆ ಸ್ವರಾಜ್ಯಬೇಕು. ಸ್ವಾತಂತ್ರ್ಯಬೇಕು. ಸ್ವರಾಜ್ಯವನ್ನು ಸಂಪಾದಿಸಿ ರೈತನ ಈ ಗೋಳನ್ನು ದೂರ ಮಾಡಲಿಕ್ಕೆ ಟೊಂಕ ಕಟ್ಟಿ ನಿಂತು ಹಗಲು-ರಾತ್ರಿ ಪ್ರಯತ್ನ ಮಾಡುತ್ತಿರುವದು ಯಾವದು? ಕಾಂಗ್ರೆಸ್ಸು ರೈತನ ಸಲುವಾಗಿ ಇಷ್ಟು ಕಳಕಳಿಯಿಂದ ಕೆಲಸ ಮಾಡುವ ಸಂಸ್ಥೆಯು ಕಾಂಗ್ರೆಸ್ಸದ ಹೊರ್ತು ಬೇರೆಯಾವದೂ ಇಲ್ಲ. ರೈತರೆಂದರೆ ಕಾಂಗ್ರೆಸ್ಸು. ಕಾಂಗ್ರೆಸ್ಸು ಎಂದರೆ ರೈತರು. ಕಾಂಗ್ರೆಸ್ಸು ತಾಯಿ. ರೈತರು ಮಕ್ಕಳು. ಕಾಂಗ್ರೆಸ್ಸಕ್ಕೆ ಸಹಾಯ ಮಾಡುವದು ಪ್ರತಿಯೊಬ್ಬರ ಧರ್ಮ. ಪವಿತ್ರ ಕರ್ಮ. ಕಾಂಗ್ರೆಸ್ಸಕ್ಕೆ ಹ್ಯಾಗೆ ಸಹಾಯ ಮಾಡುವಿರಿ? ಕಾಂಗ್ರೆಸ್ಸದ ಅಭಿಮಾನದಿಂದಲೂ, ಭಕ್ತಿಯಿಂದಲೂ, ಕಾಂಗ್ರೆಸ್ಸ ಪತಿಯಿಂದ ಮುಂಬಯಿ ಅಸೆಂಬ್ಲಿಗೆ ಉಮೇದ್ವಾರರಾಗಿ ನಿಂತ **ಶ್ರೀ. ಹಣಮಂತರಾವ ಕೌಜಲಗಿಯವರಿಗೆ** ನಿಮ್ಮ ಹೋಟು ಹಾಕತಕ್ಕದ್ದು. ಇದರಿಂದ ನೀವು ಕಾಂಗ್ರೆಸ್ಸಕ್ಕೆ ಸಹಾಯ ಮಾಡಿದಂತಾಗುವದು. ದೇಶಕಾರ್ಯವಾಗುವದು. ಈಶ ಪ್ರೀತಿ ಯಾಗುವದು. ವಿಜಾಪೂರ ಜಿಲ್ಲೆಯ ದಕ್ಷಿಣ ಭಾಗದ ಕೀರ್ತಿಯು ಎಲ್ಲ ಕಡೆಗೂ ಹರಡುವದು. ಕಾಂಗ್ರೆಸ್ಸದ ಪತಿಯಿಂದ **ಶ್ರೀ. ಹಣಮಂತರಾವ ಕೌಜಲಗಿಯವರಿಗೆ ಹೋಟು ಹಾಕುವದು ಪ್ರತಿಯೊಬ್ಬ ಮತದಾರನ** ಕರ್ತವ್ಯ ಕರ್ಮ. ಇದೇ ನಮ್ಮ ರಾಷ್ಟ್ರಧರ್ಮ. ಇದೇ ನಮ್ಮ ದೇಶಪ್ರೇಮದ ಮರ್ಮ.

ಬಾಗಲಕೋಟ,
ತಾ॥ ೬—೧೨—೩೬.

ಅಧ್ಯಕ್ಷ,
ತಾ. ಕಾಂಗ್ರೆಸ್ಸ ಕಮಿಟಿ ಬಾಗಲಕೋಟ.

ವೆಂಕಟೇಶ ಪ್ರೆಸ್ ಬಾಗಲಕೋಟೆ.

I

ಚಿತ್ರಮಯ ಕಾಂಗ್ರೆಸ್

ವಂದೇ ಮಾತರಂ
ಸುಜಲಾಂ, ಸುಫಲಾಂ
ಮಲಯಜ ಶೀತಲಾಂ
ಸಸ್ಯಶ್ಯಾಮಲಾಂ ಮಾತರಂ
ವಂದೇ ಮಾತರಂ



ಮುಖಂಡರ ಸಂದೇಶಗಳು.

ಪತ್ರಿಕಾವ್ಯವಸಾಯವು ಕರ್ನಾಟಕವಲ್ಲಿ ಭರದಿಂದ ಮುಂದ ಸಾಗುತ್ತಲಿದೆ. ಕರ್ನಾಟಕದ ಜನತೆಯು ಈ ವ್ಯವಸಾಯದ ಸಹಾಯ ದಿಂದ ಹೆಚ್ಚು ಸುಶಿಕ್ಷಿತವೂ ಸುಸಂಸ್ಕೃತವೂ ಆಗಬೇಕಾಗಿದ್ದರೆ ಪತ್ರಿಕಾ ಕರ್ತರು ಈ ಸಂಧಿಕಾಲದಲ್ಲಿ ಬಹಳ ಎಚ್ಚರದಿಂದಲೂ ಧೈರ್ಯದಿಂದ ಲೂ ತಮ್ಮ ಕರ್ತವ್ಯವನ್ನು ಮಾಡಬೇಕಾಗಿವೆ. ಕೇವಲ ಲೋಕಪ್ರಿಯತೆ ಇದು ಪತ್ರಿಕೆಯ ಧ್ಯೇಯವಿರಬಾರದು. ಲೋಕಪ್ರಿಯವಾಗುವದು ಇಷ್ಟವಿದ್ದರೂ ಲೋಕೋಪಕಾರಕ್ಕೆ ಪಾತ್ರವಾಗುವದು ಹೆಚ್ಚು ಮಹತ್ವದ್ದಾಗಿದೆ. ಭಾಷೆ, ವಿಷಯಗಳ ವಿಚಾರದಲ್ಲಿ ಜನರ ಮಟ್ಟಿಗೆ ಇಳಿದು ಅವರನ್ನು ಮೇಲ್ಮಟ್ಟಿಗೆ ಒಯ್ಯುವ ಮಹತ್ತರವಾದ ಕಾರ್ಯವನ್ನು ಪತ್ರಿಕಾ ಕರ್ತರು ಮಾಡಬೇಕಾಗಿದೆ. ಈ ಕಾರ್ಯದಲ್ಲಿ ನಿಮ್ಮ ಪತ್ರಿಕೆ ಸಹಾಯಕವಾದೀತೆಂದು ಆಶಿಸುತ್ತೇನೆ.

ರಂಗನಾಥ ದಿವಾಕರ

ನಿಮ್ಮ ಪತ್ರವು ಇತ್ತೀಚೆಗೆ ಹೆಚ್ಚು ಬಳಕೆಯಲ್ಲಿ ಬರುತ್ತಿರುವದು ನಿಜ. ಇನ್ನೂ ಬೆಳೆದು ರಾಷ್ಟ್ರದ ಸ್ವಾತಂತ್ರ್ಯ ಸಂಪಾದನೆಯಲ್ಲಿ ಒಳ್ಳೆಯ ಸಾಧನವಾಗಲಿ ಎಂದು ಆಶಿಸುತ್ತೇನೆ.

ಪತ್ರಿಕಾಕರ್ತರ ಅಭಿರುಚಿಯ ಸತ್ಯ ಹಾಗೂ ಅಹಿಂಸಾ ತತ್ವಗಳ ಮೇಲೆಯೇ ಅವಲಂಬಿಸಿರತಕ್ಕದ್ದು. ಓದುಗರ ಅಭಿರುಚಿಗೆ ಮಣಿಯದ ತಮ್ಮ ಅಭಿರುಚಿಯಂತೆ ಜನ ಸಾಮಾನ್ಯರನ್ನು ರೂಪಿಸುವದೇ ಪತ್ರಿಕೋದ್ಯಮಿಗಳ ಆದ್ಯ ಕರ್ತವ್ಯವೆಂದು ನಾನು ತಿಳಿಯುತ್ತೇನೆ.

ವೀರನಗೌಡ ಪಾಟೀಲ.

ಯೇಸುಕ್ರಿಸ್ತನ ಪ್ರತಿಮೂರ್ತಿ ಗಾಂಧೀಜಿ

"ಗಾಂಧೀಜಿ ಹೋದ ಸ್ಥಳವೇ ಭಾರತದ ರಾಜಧಾನಿಯಾಗಿ ಬಿಡುತ್ತೆ. ಅವರು ಕಾಲಿಟ್ಟ ಕಡೆಗಳಲ್ಲೆಲ್ಲ ಜನಗಳು ಹಿಂಡುಗಟ್ಟಿಕೊಂಡು ನೆರೆದು ಅವರ ಹಸ್ತದಿಂದ ಜಯಜಯಕಾರ ಮಾಡುತ್ತಾರೆ. ಗಾಂಧೀಜಿಯವರಿಗೆ ಇದು ಸೇರುವದಿಲ್ಲ. ಆದರೇನು ಮಾಡುವದು! ಅವರು ಹೋದ ಹೋದಲ್ಲೆಲ್ಲ ಹೂವಿನರಾಶಿ ಬೀಳುತ್ತ ಅವರ ಕೊರಳಿನಲ್ಲಿ

"ಒಂದುಕಡೆ ಮಹಾ ಆಧ್ಯಾತ್ಮಿಕ ಸತ್ಯಾಚರಣೆ. ಇನ್ನೊಂದು ಕಡೆ ರಾಜಕಾರಣದ ಮೇರೆ. ಇಂತಹ ಪ್ರಭಾವ! ಗಾಂಧೀಜಿಯಲ್ಲಿ ಇನ್ನೊಂದು ಅದ್ಭುತ ವಿಷಯ. ಜುಗುಪ್ಸೆ, ತಿರಸ್ಕಾರ ಅವರ ಹತ್ತಿರದಿಂದ ಎಂದೋ ಹೊರಟು ಹೋಗಿವೆ. ಒಂದುಬಾರಿ ಒಪ್ಪಂದವಾಯಿತೆಂದರೆ ಸರಿ ತನ್ನ ಶತ್ರುವಿನ ಜೊತೆಗೂ ಅವರು ಮನಃಪೂರ್ವಕವಾಗಿ ಸಹಕರಿಸತೊಡಗುವರು.

"ರಾಜಕಾರಣದಲ್ಲಿ ತೊಡಗಿರುವ ಮುಂದಾಳುಗಳಲ್ಲೆಲ್ಲ ಗಾಂಧೀಜಿ ಕ್ರಿಸ್ತನ ಹಾಗಿದ್ದಾರೆ. ಆದರೆ ಅವರು ತಮ್ಮನ್ನು ಕ್ರೈಸ್ತರೆಂದು ಹೇಳಿಕೊಳ್ಳುವುದಿಲ್ಲ. ಒಂದುಬಾರಿ ಪ್ರಾರ್ಥನಾಕಾಲದಲ್ಲಿ ನನ್ನನ್ನು ಅವರು ಯಾರ ಪ್ರಾರ್ಥನೆ ಮಾಡುತ್ತಿರುವರೆಂದು ಪ್ರಶ್ನೆ ಮಾಡಿದೆ. ಅವರ ನಿ[illegible]ಹಿತರಿಗೂ ಸಹ ಆ ವಿಚಾರ ಗೊತ್ತಿರಲಿಲ್ಲ."

ಬಂಕಿಂಚಂದ್ರರ ಅಲ್ಪ ಪರಿಚಯ

ಬಂಕಿಮ ಚಂದ್ರ? ಬಂಕಿಮ-ಬಗ್ಗಿದವ, ನೀನೇಕೆ ಬಗ್ಗಿರುವೆ "ಎಂದು ಬಂಕಿಮಚಂದ್ರರನ್ನು ಶ್ರೀ ರಾಮಕೃಷ್ಣ ಪರಮಹಂಸರು ಕೇಳಿದರು. "ಬ್ರಿಟಿಶರ ಬೂಟಿನ ಒದೆತದಿಂದ, ಸ್ವಾಮಿ" ಎಂದು ಬಂಕಿಮಚಂದ್ರರು ಉತ್ತರವಿತ್ತರು.

ಸಾವಕಾಶವಾಗಿ ತಲೆಯಲ್ಲಾಡಿಸುತ್ತ ಶ್ರೀ ರಾಮಕೃಷ್ಣರು "ಅಲ್ಲಲ್ಲ, ರಾಧೆಯ ಪ್ರೇಮದಿಂದ "ಎಂದು ಹೇಳಿದರು.

ಭಾರತದ ದಾಸ್ಯದಿಂದ ಬಂಕಿಮಚಂದ್ರರ ಜೀವ ಅಷ್ಟೊಂದು ಬೆಂದು ಹೋಗಿತ್ತು.

೧೮೩೮ ರಲ್ಲಿ ಬಂಕಿಮಚಂದ್ರ ಚಟ್ಟೋಪಾಧ್ಯಾಯರು ಜನ್ಮಿಸಿದರು. ಇವರ ತಂದೆ ಡೆಪ್ಯುಟಿ ಮ್ಯಾಜಿಸ್ಟ್ರೇಟರಾಗಿದ್ದರು. ಇಂಗ್ಲೀಷ್ ವಿದ್ಯಾಭ್ಯಾಸ ಮುಗಿಸಿ ಇವರು ಸರಕಾರಿ ನೌಕರರಾದರು. ಇವರ ಸ್ವತಂತ್ರಪ್ರವೃತ್ತಿಯಿಂದ ಇವರಿಗೆ ಅನೇಕ ತೊಂದರೆಗಳುಂಟಾದರೂ ಉಚ್ಚಾಧಿಕಾರವನ್ನು ಸಂಪಾದಿಸಿದರು.

ಇವರು ಮೊದಲಿಗೆ ಇಂಗ್ಲಿಷ್‌ನಲ್ಲಿ ರಾಮಮೋಹನನ ಹೆಂಡತಿ ಎಂಬ ಕಾದಂಬರಿಯನ್ನು ಬರೆದರು. ಆದರೆ ಮಾತೃಭಾಷೆಯಲ್ಲಿ ಸಾಧ್ಯವಾದಂತೆ ಪರಭಾಷೆಯಲ್ಲಿ ಭಾವಪ್ರಕಟನೆಗೆ ಸಾಧ್ಯವಿಲ್ಲವೆಂಬ ಮಾತನ್ನರಿತು ಇವರು ಬಂಗಾಲಿಯಲ್ಲಿ ಬರೆಯಲು ಪ್ರಾರಂಭಿಸಿದರು. ಇವರ ಪ್ರಥಮ ಕಾದಂಬರಿ "ದುರ್ಗೇಶನಂದಿನಿ" ಅದು ತುಂಬಾ ಹೆಸರು ಪಡೆಯಿತು. ಕಪಾಲಕುಂಡಲ, ಮೃಣಾಲಿನಿ, ಆನಂದಮಠ, ವಿಷವೃಕ್ಷ ಇತ್ಯಾದಿ ಅನೇಕ ಕಾದಂಬರಿಗಳನ್ನು ಬರೆದು ಬಂಗಾಲಿ ಸಾಹಿತ್ಯದಲ್ಲಿ ತುಂಬಾ ಕೆಲಸ ಮಾಡಿದ್ದಾರೆ.

ಆನಂದಮಠದಲ್ಲಿ ಸನ್ಯಾಸಿಗಳು ಸ್ವಾತಂತ್ರ್ಯ ಸಾಧನೆಗಾಗಿ ಹೋರಾಡುತ್ತಿರುವಾಗ "ವಂದೇಮಾತರಂ" ಗೀತೆಯನ್ನು ಸ್ಫೂರ್ತಿ ಉತ್ಸಾಹ ಧೈರ್ಯಗಳಿಗಾಗಿ ಹಾಡುತ್ತಿದ್ದರು.

ಆ ಹಾಡು ಅಷ್ಟು ಮನೋಹರವಾಗಿದೆ. ಗಂಭೀರವಾಗಿದೆ ಸ್ಫೂರ್ತಿದಾಯಕವಾಗಿದೆ. ಅಂತೇ ಅದು ಇಂದು ಭಾರತದ ರಾಷ್ಟ್ರಗೀತೆಯಾಗಿದೆ. ಪ್ರತಿಭಾರತೀಯನ ಬಾಯಿಯಲ್ಲಿಯೂ "ವಂದೇಮಾತರಂ" ಬರುವದಾಗಿದೆ.

"ಇಂದು ಭಾರತೀಯ ರಾಜಕಾರಣದಲ್ಲಿ ಶಾಂತಿ ಸ್ಥಾಪನೆಯಾಗಿರಲು ಗಾಂಧೀಜಿಯವರೇ ಕಾರಣರಾಗಿದ್ದಾರೆ. ಉಗ್ರತೆಯ ದಾರಿಯಲ್ಲಿ ಅವರು, ದೊಡ್ಡ ಅಡ್ಡಿಯಂತಿದ್ದಾರೆ. ಹಲಕೆಲವು ಅಭಿಮಾನದ ಸಂದರ್ಭಗಳಲ್ಲಿ ತಾವು ಬ್ರಿಟನ್ನಿನ ಬಂಧನದಿಂದ ಭಾರತವನ್ನು ಬಿಡುಗಡೆ ಮಾಡಲು ಬಂದಿದ್ದುದಾಗಿ ಅವರಿಗೆನ್ನಿಸಿದರೂ ಅವರ ಮೃತ್ಯುವನ್ನು ಬ್ರಿಟಿಶರು ತುಂಬ ಸಂಕಟದ್ದಾಗಿ ತಿಳಿಯುವರು. ಏಕೆಂದರೆ ಅವರು ಸತ್ತು ಹೋಗುತ್ತಲೆ ಸರ್ವಶಕ್ತಿಗಳೂ ಸ್ವಚ್ಛಂದವಾಗುವುವು. ಭಾರತೀಯ ರಾಷ್ಟ್ರೀಯತೆಯನ್ನು ಉಗ್ರಗೊಳಿಸುವವರ ಕಡೆ ಈ ಎಲ್ಲ ಶಕ್ತಿಗಳೂ ಹೊರಳುತ್ತಿವೆ.

"ಅವರ ಜೀವನ ಮಹತ್ವದ್ದು. ಉಜ್ವಲವಾದುದು. ಅವರು ರಾಜಕಾರಣದಲ್ಲಿ ಧರ್ಮವನ್ನು ಸೇರಿಸಿದರು. ಭಾರತೀಯರಿಗೆ ಅಮರ ಶಕ್ತಿ ಕೊಟ್ಟರು. ಆತ್ಮ ವಿಶ್ವಾಸವನ್ನು ತಂದುಕೊಟ್ಟರು."

ಮಿ. ಗುಂಥರವರು ಗಾಂಧೀಜಿಯನ್ನು ಕುರಿತು ಬರೆದ ಮಾತುಗ

ಇದುವರೆಗಿನ ರಾಷ್ಟ್ರಪತಿಗಳು

ಕಾಂಗ್ರೆಸ್ಸಿನ ಕಥೆ

—೦—

[೮ ನೇ ಪುಟದಿಂದ]

ವಚನಭ್ರಷ್ಟತೆ

ಭಾರತದಲ್ಲಿ ರಾಷ್ಟ್ರೀಯ ಭಾವನೆ ಬೆಳೆದು ತೀವ್ರವಾಗುತ್ತಿದ್ದ ಹಾಗೆ ಬ್ರಿಟಿಶ್ ಸರಕಾರದ ನೀತಿಯೂ ಕಠೋರವಾಯಿತು. ಬಂಗಾಲ ಪ್ರಾಂತ ವಿಭಾಗ ಸಮಯದಲ್ಲಿ ಜನತೆಯ ವಿರೋಧವನ್ನು ಲೆಕ್ಕಿಸದೆ ಲಾರ್ಡ್ ಕರ್ಝನ್‌ರವರು ಮಾಡಿದ ಕಾರ್ಯದಿಂದ ಬ್ರಿಟಿಶರಲ್ಲಿದ್ದ ವಿಶ್ವಾಸಕ್ಕೆ ಬಲವಾದ ಆಘಾತವುಂಟಾಯಿತು.

ಆದರೆ ಬ್ರಿಟಿಶರಲ್ಲಿನ ನಂಬುಗೆ ಇನ್ನೂ ಪೂರ್ಣವಾಗಿ ಅಳಿಸಿ ಹೋಗಿರಲಿಲ್ಲ. ಬಂಗಾಲದ ವಿಭಾಗ ಯೋಜನೆಯನ್ನು ರದ್ದು ಮಾಡಿದ್ದರಿಂದಲೂ ಪರಿಸ್ಥಿತಿಯ ಸಂಪೂರ್ಣ ಜ್ಞಾನದ ಅಭಾವದಿಂದಲೂ ಮಹಾಯುದ್ಧದ ಸಮಯದಲ್ಲಿ ಭಾರತವು ಬ್ರಿಟಿಶ್ ಸರಕಾರಕ್ಕೆ ಮುಕ್ತ ಹಸ್ತದಿಂದ ಸಹಾಯಮಾಡಿತು. ಭಾರತದ ಸಹಾಯವನ್ನು ಬ್ರಿಟಿಶ್ ಮುಂದಾಳುಗಳು ಬಾಯಿತುಂಬಾ ಹೊಗಳಿದರು. ೧೯೧೭ ರಲ್ಲಿ ಸ್ಟೇಟ್ ಸೆಕ್ರೆಟರಿಗಳು ಭಾರತಕ್ಕೆ ಸ್ವರಾಜ್ಯವನ್ನು ಕ್ರಮ ಕ್ರಮೇಣವಾಗಿ ಕೊಡಲಾಗುವದೆಂದು ಹೇಳಿದರು. ಸ್ಟೇಟ ಸೆಕ್ರೆಟರಿಗಳು ಮತ್ತು ವೈಸ್ರಾಯರು ವಿಚಾರ ನಡೆಸಿ ೧೯೧೯ರಲ್ಲಿ ಗವರ್ನಮೆಂಟ ಆಫ್ ಇಂಡಿಯಾ ಆಕ್ಟನ್ನು ಪಾಸುಮಾಡಿದರು. ಬ್ರಿಟಿಶ್ ಸರಕಾರದ ವಚನದಲ್ಲಿ ಎಷ್ಟು ಸತ್ಯವಿದೆ ಎಂಬುದು ಜನರಿಗೆ ತಿಳಿದು ಬಂದಿತು. ಮಹಾಯುದ್ಧವು ತನಗೆ ಅನುಕೂಲವಾಗಿ ಮುಗಿದು ಯುರೋಪಿನಲ್ಲಿ ತನಗಿನ್ನು ಭಯವಿಲ್ಲವೆಂದು ತಿಳಿದ ಬ್ರಿಟಿಶ್ ಸರಕಾರ ಭಾರತದ ವಿಷಯದಲ್ಲಿ ಆಪತ್ಕಾಲದಲ್ಲಿ ತನಗಾದ ಸಹಾಯ, ತಾನಿತ್ತ ವಚನ ಇವುಗಳನ್ನು ಮರೆತು “ ಹೊಳೆದಾಟಿದ ಮೇಲೆ ಅಂಬಿಗನ ಮಿಂಡ ” ನ್ಯಾಯವನ್ನು ಸ್ವೀಕರಿಸಿತು. ರಾಲೆಟ್ ಬಿಲ್ ಪಾಸಾಗಿ ನಾಗರಿಕರ ಮೂಲಭೂತ ಹಕ್ಕುಗಳಿಗೂ ಆಘಾತವುಂಟಾಗಿ ಜನತೆಯಲ್ಲಿ ಅಸಮಾಧಾನ, ಅವಿಶ್ವಾಸಗಳು ಹೆಚ್ಚಿದವು.

[೮ ನೇ ಪುಟದಿಂದ]

೧೯೨೫	ಕಾನಪೂರ	ಶ್ರೀಮತಿ ಸರೋಜಿನಿ ನಾಯಡು
೧೯೨೬	ಗೌಹಾಟಿ	ಶ್ರೀನಿವಾಸ ಅಯ್ಯಂಗಾರ
೧೯೨೭	ಮದ್ರಾಸ	ಡಾ. ಎಮ್. ಎ. ಅನಸಾರಿ
೧೯೨೮	ಕಲಕತ್ತಾ	ಪಂಡಿತ ಮೋತೀಲಾಲ ನೆಹರು
೧೯೨೯	ಲಾಹೋರ	ಪಂಡಿತ ಜವಾಹರಲಾಲ ನೆಹರು
೧೯೩೦	ಕಲಕತ್ತಾ	ಎನ್ ಸೇನಗುಪ್ತ
೧೯೩೧	ಕರಾಚಿ	ಸರದಾರ ವಲ್ಲಭಭಾಯಿ
೧೯೩೨	ದಿಲ್ಲಿ	ಸೇಟ ರಣಛೋಡದಾಸ
೧೯೩೪	ಮುಂಬಯಿ	ರಾಜೇಂದ್ರ ಬಾಬು
೧೯೩೬	ಲಖನೌ	ಜವಹರಲಾಲ ನೆಹರು
೧೯೩೬	ಫೈಜಪೂರ	
೧೯೩೮	ಹರಿಪುರ	ಸುಭಾಷಚಂದ್ರ ಬೋಸ
೧೯೩೯	ತ್ರಿಪುರಿ	

ಕಾಂಗ್ರೆಸ್ಸಿನ ಪ್ರಥಮ ಅಧಿವೇಶನ ನಡೆದ ಸ್ಥಳ.

ಸತ್ಯಾಗ್ರಹ

ಇವೆಲ್ಲ ಘಟನೆಗಳಿಂದ ದೇಶದಲ್ಲಿ ಬಲವಾದ ಆಂದೋಲನವೆದ್ದಿತು. ದಕ್ಷಿಣ ಆಫ್ರಿಕದಲ್ಲಿ ಪ್ರಯೋಗಿಸಿ ಯಶಸ್ವಿಯಾಗಿದ್ದ ಸತ್ಯಾಗ್ರಹ ಸಮರ ನೀತಿಯನ್ನು ಮಹಾತ್ಮಾ ಗಾಂಧಿಯವರು ಭಾರತದ ಜನರ ಮುಂದಿಟ್ಟರು. ಜಾಲಿಯನ್ ವಾಲಾ ಬಾಗ್‌ನಲ್ಲಿ ಕೊಲೆಹತ್ಯಾಕಾಂಡ, ಪಂಜಾಬಿನಲ್ಲಿ ಸೈನ್ಯ ಕಾಯಿದೆಯ ಹಾವಳಿ ಸಹಿಸಲಸಾಧ್ಯವಾದ ಘಟನೆಗಳಾದವು. ಇವುಗಳ ವಿಚಾರಣೆಗೆಂದು ಸರಕಾರ ನೇಮಿಸಿದ ಹಂಟರ್ ಕಮಿಟಿಯ ವರದಿ “ತನ್ನ ಎತ್ತಿಗೆ ಮೂರೇ ಕಾಲು” ಎಂದು ಹೇಳಿತು.

ಅಸಹಕಾರ ಚಳವಳಿ ಪ್ರಾರಂಭವಾಯಿತು. ಕೋರ್ಟು ಕಚೇರಿ ಸರಕಾರಿ ಶಾಲೆ ಕಾಲೇಜುಗಳು, ಕಾಯಿದೆ ಕೌನ್ಸಿಲ್‌ಗಳು, ಮುನಿಸಿಪಾಲಿಟಿ ಇತ್ಯಾದಿ ಸ್ಥಾನಿಕ ಸಂಸ್ಥೆಗಳು ಎಲ್ಲವನ್ನೂ ಬಹಿಷ್ಕರಿಸಲಾಯಿತು. ಕಾಂಗ್ರೆಸ ಕಮಿಟಿಗಳ ಸ್ಥಾಪನೆ, ಹಳ್ಳಿಗಳಲ್ಲಿ ನ್ಯಾಯ ನಿರ್ಣಯಕ್ಕಾಗಿ ಪಂಚಾಯತಿ ಕಮಿಟಿಗಳ ಸ್ಥಾಪನೆ. ರಾಟೆ, ಕೈಮಗ್ಗಗಳ ಪ್ರಚಾರ, ಇವೆಲ್ಲ ಕಾಯಿದೆ ಭಂಗ ಚಳವಳಿಗೆ ಪೀಠಿಕೆಗಳಾಗಿ ನಡೆದವು. ಶಾಂತಿ ಅಹಿಂಸಾ ಮಾರ್ಗದಿಂದ ಸಂಪೂರ್ಣ ಸ್ವರಾಜ್ಯವನ್ನು ಸ್ಥಾಪಿಸುವದೇ ಕಾಂಗ್ರೆಸ್ಸಿನ ಧ್ಯೇಯವೆಂದು ಸಾರಲಾಯಿತು.

ಚಳವಳಿ ದೇಶದ ತುಂಬಾ ಹಬ್ಬಿತು. ಸರಕಾರವು ಪ್ರಬಲ ದಬ್ಬಾಳಿಕೆಯನ್ನು ನಡೆಸಿತು. ೧೯೩೦ರ ಕೊನೆಯೊಳಗಾಗಿ ಸಹಸ್ರಾವಧಿ ಸ್ತ್ರೀ ಪುರುಷರು ಸೆರೆಮನೆ ಸೇರಿದರು. ಸರಕಾರದೊಡನೆ ಸಂಧಾನದ ಪ್ರಯತ್ನ ವಿಫಲವಾಯಿತು. ಪರಿಸ್ಥಿತಿಯ ಮೂಲಕ ಬಾರ್ಡೋಲಿಯಲ್ಲಿಯ ಕರನಿರಾಕರಣೆಯ ಚಳವಳಿ ಮತ್ತು ಅಸಹಕಾರ ಚಳವಳಿಯ ಕಾರ್ಯಕ್ರಮಗಳು ಒಂದೊಂದಾಗಿ ನಿಲ್ಲಿಸಲ್ಪಡಬೇಕಾದುದು ಅನಿವಾರ್ಯವಾಗಿ ಬಂದಿತು.

[೧೨ ನೇ ಪುಟದಲ್ಲಿ ನೋಡಿ]

3

ಪಂ. ಜವಹರರ ಜೀವನ

ಜನನ. ೧೪. ನವೆಂಬರ್ ೧೮೮೯

ಆಂಗ್ಲದಾಯಿಯ ಕೈಲಿ ಆರೈಕೆಗೊಳಪಟ್ಟಿರುವ
ಪುಟ್ಟಮಗು ಜವಹರ್.

ಮುಂಚೆಯ ಕಾಲದಲ್ಲಿ ಬಾಲ ಜವಹರ್

ವಿವಾಹಕಾಲದಲ್ಲಿ ನೆಹ್ರೂ ದಂಪತಿಗಳು

ಧರ್ಮಪತ್ನಿ ದಿ॥ ಕಮಲಾ ನೆಹ್ರುರವರ ಜೊತೆಗೆ
ಪಂ॥ ಜವಹರ್.

೧೯೩೮ ರ ಯುರೋಪ್ ಪ್ರವಾಸದಲ್ಲಿ

ಲಾಹೋರ ಕಾಂಗ್ರೆಸ್ ಅಧ್ಯಕ್ಷ (೧೯೨೯)



ಚಕ್ರವರ್ತಿ ರಾಜಗೋಪಾಲಾಚಾರ್ಯ.

ಚಕ್ರವರ್ತಿ ರಾಜಗೋಪಾಲಾಚಾರ್ಯರ ಪರಿಶ್ರಮದ ಫಲವಾಗಿ ಮುಂದಡಿಯಿಡುತ್ತಿರುವ
ತಿರುವಾಂಕೂರಿನಲ್ಲಿ ವರ್ಧಾಶಿಕ್ಷಣ ಪದ್ಧತಿಗನುಸಾರವಾಗಿ ಹೆಣ್ಣು ಹುಡುಗಿಯರು ಹೊಲಿಗೆ ಕಲಿಯುತ್ತಿರುವುದು.

ಗಾಂಧೀಜಿಯವರ ಜೀವನ

ಜನನ ೨ ಅಕ್ಟೋಬರ ೧೮೬೯

೧. ವಿದ್ಯಾರ್ಥಿ ಗಾಂಧಿ
೨. ಬ್ಯಾರಿಸ್ಟರ್ ಗಾಂಧಿ
೩. ಸತ್ಯಾಗ್ರಹಿ ಗಾಂಧಿ
೪. ಪಟೇಲರ ಮಗಳೊಂದಿಗೆ ನಗೆಯಾಡುವ ಗಾಂಧಿ
೫. ಹರಿಜನೋದ್ಧಾರಕ ಗಾಂಧಿ
೬. ಕೈಮುಗಿಯುವ ಕಸ್ತೂರಿಬಾಯಿ
೭. ಗಾಂಧೀಜಿಯವರ ಪತ್ನಿ
೮. ಬೆಳಗಾವಿ ಕಾಂಗ್ರೆಸ್ ಅಧ್ಯಕ್ಷ (೧೯೨೪,

ತ್ರಿಪುರಿ ಕಾಂಗ್ರೆಸ್
ಅಧ್ಯಕ್ಷ
ಪೀಠವನ್ನಲಂಕರಿಸುವ

ಬಾಬೂ
ಸುಭಾಷಚಂದ್ರ
ಬೋಸ್

ತ್ರಿಪುರಿ ಕಾಂಗ್ರೆಸ್
ಸ್ವಾಗತಾಧ್ಯಕ್ಷರಾದ

ಶೇಟ್ ಗೋವಿಂದದಾಸ್
ಎಂ. ಎಲ್. ಎ

ಕೆಮರಾಮನ್ನನ ಕೈಯಲ್ಲಿ

ಜಯಪ್ರಕಾಶ ನಾರಾಯಣ
ದಂಪತಿಗಳು

ಕೃಪಲಾಣಿ
ದಂಪತಿಗಳು

ದೀನಬಂಧು ಆ್ಯಂಡ್ರ್ಯೂಸ್‌ರು
ಮಿಸ್ ಹ್ಯಾರಿಸನ್‌ಳೊಡನೆ.

ಸ್ವಯಂಸೇವಕಿಯೊಂದಿಗೆ ಚೀಟಲು ಕೊಳ್ಳುತ್ತಿರುವ ಶೇಟ್ ಜಮ್ನಾಲಾಲ ಬಜಾಜರು

ತ್ರಿಪುರಿ ಕಾಂಗ್ರೆಸ್
ಅಧ್ಯಕ್ಷ
ಪೀಠವನ್ನಲಂಕರಿಸುವ

ಬಾಬೂ
ಸುಭಾಷಚಂದ್ರ
ಬೋಸ್

ತ್ರಿಪುರಿ ಕಾಂಗ್ರೆಸ್
ಸ್ವಾಗತಾಧ್ಯಕ್ಷರಾದ

ಶೇಟ್ ಗೋವಿಂದದಾಸ್
ಎಂ. ಎಲ್. ಎ.

ಕಾಂಗ್ರೆಸ್ ಕೆಲವು



ಗಾಳಿ ತಿನ್ನುವ ಗಾಂಧಿ—ಸುಶೀಲಾ

'ವಂದೇಮಾತರಂ' ಮತ್ತು ಕಾಂಗ್ರೆಸ್

(... ಲದಿಂದ)





ಯಾವ ಹಾಡನ್ನು ರಾಷ್ಟ್ರಗೀತವೆಂದು ಕಾಂಗ್ರೆಸ್ಸು ಇದುವರೆಗೂ ... ಕಾರದಮುತವಾಗಿ ... ವಂದೇಮಾತರಂ ... ಗೀತೆಯನ್ನು ಎಲ್ಲ ರಾಷ್ಟ್ರ... ಇದಕ್ಕೊಂದು ಕಾರಣವಿದೆ. ... ವರ್ಷಗಳ ಹಿಂದೆ ಈ ಹಾಡು ... ಇದನ್ನು ... ಸಂಗ ಬಂದು ಈ ಹಾಡೆಂದರೆ ಬ್ರಿಟಿಷ್ ಸಾಮ್ರಾಜ್ಯವಾದಿ ವಿರೋಧಿ ಸಂಕೇತವಾಯಿತು. ... ಜನರು ಈ ಗೀತೆಯನ್ನು ... ನಕ್ಕಕ್ಕೆ ಗುರಿಯಾದರು. ಬ್ರಿಟಿಶಾವಾದದೊಡನಿರುವ ಹೋರಾಟದಲ್ಲಿ ಈ ಹಾಡಿಗೆ ... ಅದಕ್ಕೆ ರಾಷ್ಟ್ರೀಯ ಸ್ವರೂಪ ದೊರಕಿತು. ಈ ಹಾಡಿಗೆ ... ಯುವತೆಗೆ ಸಂಬಂಧಪಟ್ಟವು ... ದೇಶ್ದಲ್ಲಿ ...

... ವಲ್ಲಿರುವ ... ನನಗಗುತ್ತಿರುವುದು. - ಜನರಿಗರ್ಥ... ರಾಷ್ಟ್ರೀಯ ಭಾ... ಯಾಗಿದೆಲ್ಲ ಸುಲಭವಾದಭಾ... ಗಳು ನಮ್ಮ ರಾಷ್ಟ್ರಗೀತೆಗಾಗಿ ... ವರಕವಿ ಬೇಕು ಕಾಲಾವಕಾಶ ... ಗೀತೆಯನ್ನ

ರಂಗನಾಥ ... ಪ್ರಕ್ರಿಯ

ದಿನಪತ್ರಿಕೆ

... ಗಳಲ್ಲೂ ಮತ್ತು ಇತರ ... ಪಡೆದು ಪ್ರಖ್ಯಾತಿ ಹೊಂದಿದ ... ಉಪಯೋಗಿಸಿರಿ

ಇದರ ಸೇವನೆಯಿಂದ ಅನೇಕ ವಿಧದಿಂದ ... ಗೆಳೆದು ... ಶಕ್ತಿಯನ್ನು ಉಂಟುಮಾಡುತ್ತ ವೀರ್ಯ ಹೀನಾಗಿರುವುದು ... ಸಂಭೋಗಕ್ಕೆ ಮೊದಲೆ ವೀರ್ಯ ... ಮೂತ್ರದಲ್ಲಿ ವೀರ್ಯ ಹೋಗುವುದು, ರಕ್ತಮೂತ್ರ ಹೋಗುವುದು ಕೈ ಕಾಲು ಸೋಟದಲ್ಲಿ ಶಕ್ತಿಯಿಲ್ಲದಿರುವುದು ಮತ್ತು ಅನೇಕವಿಧವಾದ ಮೇಹರೋಗ, ... ಇವುಗಳನ್ನು ಗುಣಪಡಿಸಿ ಜೀರ್ಣಶಕ್ತಿಯೂ ವೀರ್ಯವೃದ್ಧಿ ...

ದೇಹಪುಷ್ಟಿ ಉಂಟುಮಾಡುತ್ತೆ. ಇದನ್ನು ಸ್ತ್ರೀಯರು ಉಪ... ಗಿಸುವುದರಿಂದ ಗರ್ಭಸಂಬಂಧಕಾದ ವ್ಯಾಧಿಗಳನ್ನು ಗುಣಪಡಿ... ನ್ನುಂಟುಮಾಡುತ್ತೆ.

ಬೆಲೆ ಡಬ್ಬಾ ರೂ. 2-0-0 ಪೋಸ್ಟೇಜು ಪ್ರತ್ಯೇಕ

... ಡಿಪೋ, ದೊಡಪೇಟೆ ಚೌಕ, ಬೆಂಗಳೂರ ಸಿಟಿ

ಹುಬ್ಬಳ್ಳಿ ಏಜೆಂಟ ಆರ್. ಕೆ. ಕಬ್ಬುರ ಕೊಪ್ಪಿಕರ ರೋಡ

... ದೇಶಗಳ ... ಮಾಲೇಖನಗಳು ಬೇಕೆ! ... ವಾಣಿ"ಯನ್ನು ... ಜನವಾಣಿಯನ್ನೇ ಓದಬೇಕು. ... ವೇ ಚಂದಾ ದಾರರಾಗಿ.

... ಕರ್ನಾಟಕ ... ಹೊರಡುವ ಶ್ರೇಷ್ಠ ದಿನಪತ್ರಿಕೆ ... ಗಳ ತಂತೀ ಸಮಾಚಾರಗಳು, ಕರ್ನಾಟಕ ... ಸಾಮಾಜಿಕ ಲೇಖನಗಳು ಇತ್ಯಾದಿಗಳನ್ನು ...ದಲ್ಲಿ ಓದಿ. ಇಷ್ಟು ದೊಡ್ಡ ಪತ್ರಿಕೆ ಕರ್ನಾಟಕದಲ್ಲಿ ...

... ಲೋಕಮತ

... ಹೊರಡುವ ಪ್ರಮುಖ ದಿನಪತ್ರಿಕೆ ... ನಡೆದ ಸಮಾಚಾರ ಇಂದೇ ತಿಳಿಯಬೇಕೆಂಬ ಅಪೇಕ್ಷೆಯವರು ಲೋಕಮತವನ್ನು ತರಿಸಿಕೊಳ್ಳಿ. ಅಖಿಲ ಕರ್ನಾಟಕದಲ್ಲಿ ... ಆಗುವ ಪತ್ರಿಕೆಯಿದು.

... ಓದುವ ರೂಢಿಯಿರಲಿ.

...WSPAPERS EXHIBITION.

ವಂದೇಮಾತರಂ ಗೀತೆ ರಚಿಸಿದ ಮಹನೀಯರು.

ಬಂಕಿಮಚಂದ್ರ ಚಟ್ಟೋಪಾಧ್ಯಾಯ.

ಕಾಂಗ್ರೆಸ್ಸಿನ ಕಥೆ

(ಡಾ. ಪಟ್ಟಾಭಿಸೀತಾರಾಮಯ್ಯನವರ ಕಾಂಗ್ರೆಸ್ ಇತಿಹಾಸದಿಂದ)

ಮಿ. ಎಲೆನ್ ಓಕ್ಟೇವಿಯಸ್ ಹ್ಯೂಮ್ ಕಾಂಗ್ರೆಸ್ಸಿನ ಜನಕರು

೧೮೮೫ ರಲ್ಲಿ ಮುಂಬಯಿ ನಗರದಲ್ಲಿ ಅಖಿಲ ಭಾರತ ಕಾಂಗ್ರೆಸ್ಸಿನ ಪ್ರಥಮ ಅಧಿವೇಶನವು ಸೇರಿತು. ಈ ಅಧಿವೇಶನಕ್ಕೆ ಬಂದಿದ್ದ ಕೆಲವರು ಪ್ರತಿನಿಧಿಗಳು ಜನರಿಂದ ಆರಿಸಿ ಬಂದಿದ್ದವರೆಂದೆನ್ನಲಾಗದಿದ್ದರೂ ಅವರೆಲ್ಲರೂ ನಿಸ್ಸೀಮ ರಾಷ್ಟ್ರಭಕ್ತರೂ, ಶ್ರೇಷ್ಠ ಸಮಾಜ ಸೇವಕರೂ ಆಗಿದ್ದರು.

ಅಂದಿನಿಂದ ಇಂದಿನವರೆಗೆ ಕಾಂಗ್ರೆಸ್ಸು ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತ ಬಂದಿದೆ. ಪ್ರಾರಂಭದಿಂದಲೂ ಭಾರತಕ್ಕೆ ಸ್ವರಾಜ್ಯ ಬೇಕು, ಪ್ರಜೆಗಳನ್ನಾಳುವ ಸರಕಾರ ಪ್ರಜೆಗಳದೇ ಆಗಿರಬೇಕು, ಭಾರತದ ಸರಕಾರ ಭಾರತದಲ್ಲಿಯ ನಾನಾ ಕೋಮುಗಳ ಪ್ರಾತಿನಿಧ್ಯವನ್ನುಳ್ಳದ್ದಾಗಿರಬೇಕು ಎಂದು ಅದು ಹೇಳುತ್ತ ಬಂದಿದೆ.

★

ಹಾಳಾದ ನಂಬಿಗೆ

ಮೊದಲು ಕಾಂಗ್ರೆಸ್ಸಿಗೆ ಅರ್ಥಾತ್ ಭಾರತ ಮುಂದಾಳುಗಳಿಗೆ ಬ್ರಿಟಿಶರ ಮುತ್ಸದ್ದಿತನದಲ್ಲಿ, ಸದ್ಹೇತುವಿನಲ್ಲಿ ನಂಬಿಗೆ ಇತ್ತು. ಪ್ರಜಾಪ್ರಭುತ್ವವಾದಿ ಬ್ರಿಟಿಶರು ಭಾರತದಲ್ಲಿಯ ಪ್ರಜಾಪ್ರಭುತ್ವ ಸರಕಾರ ಸ್ಥಾಪನೆಗೆ ಅವಕಾಶ ಕೊಡುವರು ಎಂದು ಅವರು ಭಾವಿಸಿದ್ದರು. ಕಾಂಗ್ರೆಸ್ಸಿನ ಮೊದಮೊದಲಿನ ಅಧಿವೇಶನಗಳಲ್ಲಿ ಈ ನಂಬಿಗೆ, ಈ ಆಶೆಗಳನ್ನು ಧ್ವನಿಸುವ ಗೊತ್ತುವಳಿಗಳು ಪಾಸಾಗುತ್ತಿದ್ದವು. ಭಾರತದ ನಿಜಸ್ಥಿತಿ ಬ್ರಿಟಿಶ್ ಜನಾಂಗಕ್ಕೆ ಮತ್ತು ಪಾರ್ಲಿಮೆಂಟಿಗೆ ತಿಳಿದು ಬಂದಲ್ಲಿ ಭಾರತಕ್ಕೆ ಸ್ವರಾಜ್ಯ ದೊರೆಯದೆ ಇರದು ಎಂಬ ವಿಶ್ವಾಸದಿಂದ ಕಾಂಗ್ರೆಸ್ಸು ಗೊತ್ತುವಳಿಗಳ ಮೂಲಕ ಭಾರತದ ಕಷ್ಟ ಮತ್ತು ಅದರ ನಿವಾರಣೆಯ ವಿಚಾರವನ್ನು ಬ್ರಿಟಿಶರಿಗೆ ತಿಳಿಸಲೆತ್ನಿಸಿತು.

ಭಾರತದಲ್ಲಿ ಮತ್ತು ಇಂಗ್ಲಂಡದಲ್ಲಿ ಬ್ರಿಟಿಶ ಸರಕಾರ ಸ್ವೀಕರಿಸಿದ ನೀತಿ ಈ ನಂಬಿಗೆ-ಆಶೆಗಳನ್ನು ಸಾವಕಾಶವಾಗಿಯಾದರೂ ಸಂಪೂರ್ಣವಾಗಿ ಹಾಳುಮಾಡಿ ಬಿಟ್ಟಿದೆ.

[೧೦ ನೇ ಪುಟದಲಿ ನೋಡಿ]

ಇದುವರೆಗಿನ ಕಾಂಗ್ರೆಸ್ ಅಧಿವೇಶನಗಳು; ಅಧ್ಯಕ್ಷರು

ವರ್ಷ	ಸ್ಥಳ	ಹೆಸರು
೧೮೮೫	ಮುಂಬೈ	ಉಮೇಶಚಂದ್ರ ಬ್ಯಾನರ್ಜಿ
೧೮೮೬	ಕಲಕತ್ತಾ	ದಾದಾಭಾಯಿ ನವರೋಜಿ
೧೮೮೭	ಮದ್ರಾಸ	ಬದ್ರುದ್ದೀನ ತಯ್ಯಬಜಿ
೧೮೮೮	ಅಲಹಾಬಾದ	ಜಾರ್ಜ ಯೂಲ
೧೮೯೦	ಕಲಕತ್ತಾ	ಸರ್. ಫೆರೋಜಶಹಾ ಮೆಹ್ತಾ
೧೮೯೧	ನಾಗಪೂರ	ರಾವಸಾಹೇಬ ಆನಂದಾಚಾರ್ಲು
೧೮೯೨	ಅಲಹಾಬಾದ	ಉಮೇಶಚಂದ್ರ ಬ್ಯಾನರ್ಜಿ
೧೮೯೩	ಲಾಹೋರ	ದಾದಾಭಾಯಿ ನವರೋಜಿ
೧೮೯೪	ಮದ್ರಾಸ	ಆಲ್‌ಫ್ರೆಡ ವೆಬ್, ಎಮ್. ಪಿ.
೧೮೯೫	ಪೂನಾ	ಸುರೇಂದ್ರನಾಥ ಬ್ಯಾನರ್ಜಿ
೧೮೯೬	ಕಲಕತ್ತಾ	ಮುಹಮ್ಮದ ರಹಿಮತ್‌ಉಲ್ಲಾ ಸಯ್ಯಾ
೧೮೯೭	ಅಮರಾವತಿ	ಸಿ. ಶಂಕರನ್ ನಾಯರ
೧೮೯೮	ಮದ್ರಾಸ	ಆನಂದ ಮೋಹನ ಬೋಸ
೧೮೯೯	ಲಖನೌ	ರಮೇಶಚಂದ್ರ ದತ್ತ ಸಿ. ಆಯ್. ಇ.
೧೯೦೦	ಲಾಹೋರ	ಎನ್. ಜಿ. ಚಂದಾವರಕರ.
೧೯೦೧	ಕಲಕತ್ತಾ	ದಿನಶಾ ಎಡಲ್‌ಜಿ. ವಾಚ್ಛಾ
೧೯೦೨	ಅಹಮ್ಮದಾಬಾದ	ಸುರೇಂದ್ರನಾಥ ಬ್ಯಾನರ್ಜಿ
೧೯೦೩	ಮದ್ರಾಸ	ಲಾಲಮೋಹನ ಘೋಷ
೧೯೦೪	ಮುಂಬೈ	ಸರ್ ಹೆನ್ರಿ ಕಾಟನ್
೧೯೦೫	ಬನಾರಸ	ಗೋಪಾಲ ಕೃಷ್ಣ ಗೋಖಲೆ
೧೯೦೬	ಕಲಕತ್ತಾ	ದಾದಾಭಾಯಿ ನವರೋಜಿ
೧೯೦೭	ಸುರತ	ರಾಸಬಿಹಾರಿ ಘೋಷ
೧೯೦೮	ಮದ್ರಾಸ	ರಾಸಬಿಹಾರಿ ಘೋಷ
೧೯೦೯	ಲಾಹೋರ	ಪಂ. ಮದನಮೋಹನ ಮಾಲವೀಯಾ
೧೯೧೦	ಅಲಹಾಬಾದ	ಸರ್. ವಿಲಿಯಮ್ ವೆಡರಬನ್
೧೯೧೧	ಕಲಕತ್ತಾ	ಪಂಡಿತ ಬಿಶನ್ ನಾರಾಯಣ ಧಾರ
೧೯೧೨	ಪಾಟ್ನಾ	ನವಾಬ ಸಯ್ಯದ ಮಹಮ್ಮದ
೧೯೧೩	ಕರಾಚಿ	ರಂಗನಾಥ ನರಸಿಂಹ ಮುಧೋಳಕರ
೧೯೧೪	ಮದ್ರಾಸ	ಭೂಪೇಂದ್ರನಾಥ ಬೋಸ
೧೯೧೫	ಮುಂಬೈ	ಸತ್ಯೇಂದ್ರ ಪ್ರಸನ್ನ ಸಿಂಹ
೧೯೧೬	ಲಖನೌ	ಅಂಬಿಕಾಚರಣ ಮುಜುಮದಾರ
೧೯೧೭	ಕಲಕತ್ತಾ	ಶ್ರೀಮತಿ ಅನಿಬೆಝಂಟ
೧೯೧೮	ಮುಂಬೈ	ಸಯ್ಯದ ಹಸನ ಇಮಾಮ
೧೯೧೮	ದಿಲ್ಲಿ	ಪಂ. ಮದನಮೋಹನ ಮಾಲವಿಯಾ
೧೯೧೯	ಅಮೃತಸರ	ಮೋತೀಲಾಲ ನೆಹರು
೧೯೨೦	ಕಲಕತ್ತಾ	ಲಾಲಾಜಿ ಲಜಪತರಾಯ
೧೯೨೦	ನಾಗಪೂರ	ವಿಜಯ ರಾಘವಾಚಾರ್ಯ
೧೯೨೧	ಅಹಮ್ಮದಾಬಾದ	ಹಕೀಮ ಅಜಮಲಖಾನ
೧೯೨೨	ಗಯಾ	ದೇಶಬಂಧು ಸಿ. ಆರ್. ದಾಸ
೧೯೨೩	ದಿಲ್ಲಿ	ಅಬ್ದುಲ್ ಕಲಮ್ ಅಝಾದ
೧೯೨೩	ಕೋಕೋನಾಡ	ಮೌಲಾನಾ ಮಹಮ್ಮದಅಲ್ಲಿ
೧೯೨೪	ಬೆಳಗಾಂವಿ	ಮಹಾತ್ಮಾಗಾಂಧಿ

[೧೦ ನೇ ಪುಟದಲಿ ನೋಡಿ]

ಜಿ. ಐ. ಪಿ. ಅಧಿಕಾರಿಗಳ ಜೊತೆಗೆ ತ್ರಿಪುರಿ ಕಾಂಗ್ರೆಸ್ ಸ್ವಾಗತ ಸಮಿತಿಯ ಕಾರ್ಯಕರ್ತರು ರೈಲು ಅನುಕೂಲತೆಗಳ ವಿಚಾರವಾಗಿ ಮಾತುಕಥೆಯಾಡುತ್ತಿದ್ದಾರೆ.

ವಿಷ್ಣುದತ್ತ ನಗರದಲ್ಲಿನ ಗಾಂಧೀಜಿಯ ಕುಟೀರದಿಂದ ನಿಂತು ನೋಡಿದಾಗ ಕಾಣಿಸುವ ನರ್ಮದಾನದಿಯ ಸುಮನೋಹರ ದೃಶ್ಯ.



ಡಾ. ಜೋಯಿಕೆ ಎಂಬ ಅಮೇರಿಕನ್ ಗೃಹಸ್ಥರು ಗಾಂಧೀಜಿಯವರನ್ನು ಕಾಣಲು ಬಂದು ಶೇಗಾವಿನಲ್ಲಿಳಿದುಕೊಂಡಾಗ ಎತ್ತಿನ ಬಂಡಿಯೊಂದರಲ್ಲಿ ಕೂತು ಸವಾರಿ ಮಾಡುತ್ತಿರುವ ದೃಶ್ಯವಿದು.

ಕಾಂಗ್ರೆಸ್ಸಿನ ಇನ್ನು ಕೆಲವು ಮುಖಂಡರು



ಕ್ಷಾದಿಯ ಕಾಲ.



೧. ಶ್ರೀ. ಸತ್ಯಮೂರ್ತಿ
೨. ಜಯರಾಮದಾಸ್ ದೌಲತರಾಮ
೩. ಜಯಪ್ರಕಾಶ ನಾರಾಯಣ
೪. ಶಂಕರರಾವ ದೇವ
೫. ಡಾ. ರವೀಂದ್ರನಾಥ ಟಾಗೋರ
೬. ಬುಲುಸು ಸಾಂಬಮೂರ್ತಿ
೭. ಕಾ. ಎಮ್. ಎನ್. ರಾಯ್.
೮. ಡಾ. ಪಟ್ಟಾಭಿ ಸೀತಾರಾಮಯ್ಯ

ಕೆಲವು ನಾಯಿಕೆಯರು



ಮಾನ್ಯೆ ವಿಜಯಲಕ್ಷ್ಮೀ ಪಂಡಿತ

ಮಣಿಬೇನ್ ಪಟೇಲ

ಶ್ರೀಮತಿ ಸರೋಜಿನಿದೇವಿ

ಶ್ರೀಮತಿ ನಾಗಮ್ಮಾ ಪಾಟೀಲ



೭೦ ನೇ ವರ್ಷದಲ್ಲಿ ಗಾಂಧೀಜಿ



ತ್ರಿಪುರಿಯ ಕೆರೆಯಲ್ಲಿ ದೊರೆತ ವೃಷಭ ಮೂರ್ತಿ. ಇದರ ತಲೆ ಒಡೆದು ಹೋಗಿದ್ದು ಇಷ್ಟು ಭಾಗ ಮಾತ್ರ ಉಳಿದಿದೆ.



ಯುವರಾಜ ಸಿದ್ಧಾರ್ಥನ ಚಿತ್ರಮಂಟಪ

ವಿಷ್ಣುದತ್ತ ನಗರಕ್ಕೆ ಹೋಗುವ ದಾರಿಯನ್ನು ಸುಗಮವಾಗಿ ಮಾಡಲು ನರ್ಮದಾ ನದಿಯ ಮೇಲೆ ಈ ಸ್ಪೆಷಲ್ ಸೇತುವೆಯನ್ನು ನಿರ್ಮಿಸಲಾಗಿದೆ



ತ್ರಿಪುರಿಹಳ್ಳಿಯ ಕುಂಬಾರರು ತ್ರಿಪುರಿ ಕಾಂಗ್ರೆಸ್ ಅಧಿವೇಶನಕ್ಕಾಗಿ ಅವಶ್ಯವಿರುವ ಮಣ್ಣಿನಪಾತ್ರೆಗಳನ್ನು ಸಿದ್ಧಗೊಳಿಸುತ್ತಿದ್ದಾರೆ.

ಮೊಚ್ಚೆಯಜೋಡು

ಮದ್ರಾಸ್ ಪ್ರಾಂತ್ಯದ ಪ್ರಧಾನಮಂತ್ರಿಗಳಾದ
ಚಕ್ರವರ್ತಿ ರಾಜಗೋಪಾಲಾಚಾರ್ಯರು
ಬರೆದ ನೈಜ ಕಥೆ

ಬರಗಾಲ ಪೀಡಿತರಿಗೆ ಸಹಾಯ ಮಾಡಲು ಆರಿಸಲ್ಪಟ್ಟ ಕೇಂದ್ರಗಳಲ್ಲಿ ಮಣಿಯಾನೂರು ಗ್ರಾಮವೂ ಒಂದು. ಈಗ್ರಾಮದ ಸುತ್ತುಮುತ್ತಲಿನ ಹಳ್ಳಿಗಳವರೆಲ್ಲ ವಾರಕ್ಕೊಮ್ಮೆ ಇಲ್ಲಿಸೇರುವ ಸಂತೆಗೆ ಬರಬೇಕಾಗಿದ್ದಿತು. ವಾಡಿಕೆಯಂತೆ ಇಲ್ಲಿ ಹೆಂಡ ಸರಾಯಿಗಳ ಅಂಗಡಿಯೊಂದು ವಿರಾಜಮಾನವಾಗಿದ್ದಿತು. ಅಲ್ಲಿ ವ್ಯಾಪಾರವೂ ತುಂಬಾ ಲಾಭದಾಯಕವಾಗಿ ನಡೆಯುತ್ತಿದ್ದಿತು.

ಮಣಿಯಾನೂರು ಗ್ರಾಮದ ಒಂದುಹಳ್ಳಿ. ಅರ್ಧಸ್ವರ್ಧ ಹೊಟ್ಟೆಗೂ ಸರಿಯಾಗಿ ಕೂಳುಕಾಣದ, ಮೈತುಂಬ ಬಟ್ಟೆಯಿಲ್ಲದ ಹಾಳು ಜೀವನವನ್ನು ಎಂತೋ ಸಾಗಹಾಕುವ ಮೊಚ್ಚೆಗಾರರ ಹಳ್ಳಿ ಅದು. ಮಣಿಯಾನೂರಿನ ಹೆಂಡದಂಗಡಿಯ ದವಡೆಯಲ್ಲಿ ಈಹಳ್ಳಿಯೂ ಸಂಪೂರ್ಣವಾಗಿ ಸಿಕ್ಕಿಬಿದ್ದಿತ್ತು.

ನಾವು ಅಲ್ಲಿಗೆ ಹೋದಬಳಿಕ ಈ ಹಳ್ಳಿಯವರೂ ತಾವು ಇನ್ನೆಂದಿಗೂ ಹೆಂಡವನ್ನು ಕುಡಿಯುವದಿಲ್ಲ ಎಂದುಆಣೆಮಾಡಿದರು. ವಚನವನ್ನವರು ಸರಿಯಾಗಿ ಪಾಲಿಸುತ್ತಲೂ ಇದ್ದರು.

ಪ್ರತಿ ಗುರುವಾರವೂ ಹಳ್ಳಿಯವರು ಆಶ್ರಮಕ್ಕೆ ಬಂದು ಧಾನ್ಯವನ್ನು ತೆಗೆದುಕೊಂಡು ಹೋಗುತ್ತಿದ್ದರು.– ಕಳೆದ ಗುರುವಾರ ತನ್ನ ಹಳ್ಳಿಯ ಕೆಲವರನ್ನು ಒಂದಿಟ್ಟುಕೊಂಡು ಮುನಿಯ ನನ್ನ ಗುಡಿಸಲಿಗೆ ಬಂದ. "ಏನಾಗಿದೆ?' ಎಂದು ನಾನು ಕೇಳಿದೆ.

"ಏನಿಲ್ಲ. ಅವರು ಹೆಂಡ ಕುಡಿದಿದ್ದಾರೆ. ವಿಚಾರಣೆಗಾಗಿ ನಾವು ಬಂದಿದ್ದೇವೆ' ಮುನಿಯ ಹೇಳಿದ.

ಪತ್ರವ್ಯವಹಾರಗಳ ಗಲಾಟೆಯಲ್ಲಿ ನಾನು ತೊಡಗಿದ್ದೆ. 'ಹೆಂಡಕ್ಕಾಗಿ ನೀವು ದುಡ್ಡು ಕೊಟ್ಟಿರುವಿರಾದರೆ ನಿಮಗಾಗಿ ಬೇಕಾಗುವ ಧಾನ್ಯವನ್ನು ಕೊಳ್ಳಲು ನಿಮ್ಮಲ್ಲಿ ಹಣವಿರಲೇಬೇಕು. ನಾವು ನಮ್ಮ ಸಹಾಯವನ್ನು ನಿಲ್ಲಿಸುವೆವು. ನಿಮಗಿಷ್ಟವಿದ್ದರೆ ನೀವು ಹೆಂಡ ಕುಡಿಯಬಹುದು" ಎಂದು ನಾನೆಂದೆ. ಹೆಂಡ ಕುಡಿಯುವದನ್ನು ಬಿಟ್ಟು ಅವರು ನಮಗೇನೂ ಉಪಕಾರ ಮಾಡುತ್ತಿಲ್ಲವೆಂದೂ ಅವರ ಹಿತಕ್ಕಾಗಿಯೇ ಅವರು ಹೆಂಡ ಬಿಡಬೇಕಾಗಿದೆ ಎಂಬುದು ಅವರಿಗೆ ತಿಳಿಯಲಿ ಎಂದೂ ನಾನೀರೀತಿ ಹೇಳಿ "ಕುಡಿದವರು ಯಾರು?" ಎಂದು ವಿಚಾರಿಸಿದೆ.

'ಇಬ್ಬರು ಗಂಡಸರು" ಮುನಿಯ ಹೇಳಿದ.

'ಅವರು ಇಲ್ಲಿಗೆ ಬಂದಿದ್ದಾರೆಯೇ?"

'ಒಬ್ಬ ಬಂದಿದ್ದಾನೆ. ಇನ್ನೊಬ್ಬ ಬಂದಿಲ್ಲ. ಜೋಕಕ್ಕಾಗಿ ಅವನ ಹೆಂಡತಿ ಬಂದಿದ್ದಾಳೆ."

ಕುಡಿದದ್ದನ್ನು ಅವರು ಒಪ್ಪಿಕೊಂಡಿದ್ದಾರೆಯೇ?"

"ನಿನ್ನೆ ರಾತ್ರಿ ಈತ ಕುಡಿದು ಮನೆಗೆಬಂದ. ಹೆಂಡತಿಯೊಡನೆ ಜಗಳವಾಡಿದ. ಹಳ್ಳಿಗೆಹಳ್ಳಿ 'ಇದನ್ನ ಬಲ್ಲದು" ಮುನಿಯಉತ್ತರವಿತ್ತ.

" ನಿಜವೇನದು?" ಎಂದು ನಾನು ಕುಡಿದವನನ್ನು ಕೇಳಿದೆ.

" ನಾನು ನಿನ್ನೆರಾತ್ರಿ ಹೆಂಡತಿಯೊಡನೆ ಜಗಳವಾಡಿದ್ದು ನಿಜ. ಗಂಡಹೆಂಡರಲ್ಲಿ ಜಗಳವಾಗುವದಿಲ್ಲವೇನು? ಹೆಂಡತಿಯೊಡನೆ ಜಗಳವಾಡಿದರೆ ಮಹಾ ಅಪರಾಧವೇನು" ಕುಡಿದವನು ಉತ್ತರವಿತ್ತ.

" ಅದೆಲ್ಲ ನನಗೆಬೇಡ. ನೀನು ಕುಡಿದಿದ್ದೆಯೋ ಇಲ್ಲವೋ ಹೇಳು. ನಿಮ್ಮಲ್ಲಿ ಯಾವನೊಬ್ಬನು ಹೆಂಡಕುಡಿದರೂ ನಾವುನಿಮ್ಮ ಹಳ್ಳಿಗೆ ಸಹಾಯಮಾಡುವದನ್ನು ನಿಲ್ಲಿಸಬೇಕಾಗುತ್ತೆ."

" ನಾನು ಕುಡಿದಿಲ್ಲ. "

" ನೀವೇನು ಹೇಳುವಿರಿ." ಬಂದಿದ್ದ ಉಳಿದವರನ್ನು ನಾನು ವಿಚಾರಿಸಿದೆ. ಜಗಳ ನಡೆದದ್ದು ನಿಜವೆಂದೂ ಆದರೆ ಅವನು ಕುಡಿದಿದ್ದನೋ ಇಲ್ಲವೋ ಎಂಬುದು ತಮಗೆ ಗೊತ್ತಿಲ್ಲವೆಂದೂ ಅವರು ಹೇಳಿದರು.

ಮುನಿಯ ಹೀಗೆ ಹೇಳಲು ದ್ವೇಷಮೂಲಕವಾದ ಕಾರಣವೇನಾದರೂ ಇದೆಯೇ ಎಂದು ಕೇಳಿದಾಗ "ಅಹುದು. ಇಲ್ಲದ ಜನರ ಹೆಸರಿನಲ್ಲಿ ಸಹ ಕಾಳು ಕಡಿ ಒಯ್ಯುತ್ತಾನೆ ಎಂದು ನಾನು ಹೇಳಿದ್ದರಿಂದ ಹೀಗೆ ನನ್ನ ಮೇಲೆ ಅಪವಾದ ಹೊರಸಿದ್ದಾನೆ" ಕುಡಿದವನೆಂದ.

"ಈತನ ತಂದೆ ಈ ಮುದುಕನನ್ನು ಕೇಳಿ ಬೇಕಾದರೆ. ನನಗೂ ಈತ ತಂದೆಯಂತಿದ್ದಾನೆ. ಅವನ ಹೇಳಿಕೆ ಸತ್ಯವನ್ನು ನಿರ್ಣಯಿಸಲಿ" ಮುನಿಯ ಹೇಳಿದ.

ಮುದುಕನು ತನ್ನ ಮಗನು ಗಲಾಟೆ ಮಾಡಿದ್ದು ನಿಜವೆಂದೂ ಆದರೆ ಆತನು ಕುಡಿದಿರಲಿಲ್ಲವೆಂದೂ ಹೇಳಿದ. ಮುದುಕನು ಆಣೆ ಮಾಡಲಿ ಎಂದು ನಾನು ಹೇಳಿದೆ.

ಈ ಶಪಥ ವಿಧಿಯನ್ನು ಹೇಗೆ ನೆರವೇರಿಸಲಿ ಎಂಬ ಯೋಚನೆ ಬಂತು. ಆಣೆ-ಗೀಣೆಗಳು ಸತ್ಯವನ್ನು ಒಡಮೂಡಿಸುವದಿಲ್ಲವೆಂದು ನನಗೆ ನಂಬಿಗೆ ಇತ್ತು. ತನ್ನ ಮಗನ ಪಕ್ಷಪಾತಿಯಾಗಿ ಮುದುಕನು ಸಾಕ್ಷಿ ಹೇಳಿದ್ದನು. ೧೫ ವರ್ಷದ ನನ್ನ ವಕೀಲಿ ಅನುಭವವು ನನಗೆ ಈ ಶಪಥ ವಿಧಿಯಲ್ಲಿನ ನಂಬಿಗೆಯನ್ನು ಹಾರಿಸಿ ಬಿಟ್ಟಿತು. ನಡೆದ ಪ್ರಕರಣವನ್ನು ಮುಗಿಸಿ ಬಿಡೋಣ ಎಂದು ನಾನು ಯೋಚಿಸುತ್ತಿದ್ದಾಗ ಮೂಲೆಯಲ್ಲಿದ್ದ ನನ್ನ ಮೊಚ್ಚೆಗಳ ಮೇಲೆ ನನ್ನ ದೃಷ್ಟಿ ಬಿದ್ದಿತು.

"ನೀವೆಲ್ಲ ಚರ್ಮದ ಸಹಾಯದಿಂದ ಜೀವಿಸುವಿರಿ ಅಲ್ಲವೆ?" ಎಂದು ಮುದುಕನನ್ನು ಕೇಳಿದೆ. ಹೌದೆಂದು ಅವನು ಉತ್ತರವಿತ್ತ.

"ಹುಂ ಬಾ ಇಲ್ಲಿ. ಈ ಮೊಚ್ಚೆಗಳನ್ನು ಕೈಯಲ್ಲಿ ಹಿಡಿದುಕೊ. ಹೇಳು. ನಿನಗೆ ಅನ್ನವನ್ನೀಯುವ ಈ ಚರ್ಮದ ಸಾಕ್ಷಿಯಾಗಿಯೂ ನಿನ್ನ ಮಗನು ಕುಡಿದಿದ್ದಿಲ್ಲವೆ? "

ಮೊಚ್ಚೆಗಳನ್ನು ಹಿಡಿದುಕೊಂಡಿದ್ದ ಮುದುಕನು ಕಂಪಿತ ಸ್ವರದಲ್ಲಿ "ಅಹುದು. ಅವನು ಕುಡಿದದ್ದು ನಿಜ" ಎಂದನು.

ಅಸಂಭವ, ಸಂಭವ ಜಗತ್ತಿನಲ್ಲಿದೆ. ಆದರೆ ನನ್ನ ಕಲ್ಪನೆಗ ಮೀರಿದ್ದಾಗಿತ್ತು ಇದು. ಮುದುಕನ ಮಾತು ಕೇಳಿ ನಾನು ಆಶ್ಚರ್ಯದಿಂದ ದಿಙ್ಮೂಢನಾದೆ. ಕುಡಿದವನೂ ತನ್ನ ತಪ್ಪನ್ನು ಒಪ್ಪಿಕೊಂಡ

ಅವನಿಗೆ ನಾಲ್ಕಾಣೆ ದಂಡವನ್ನು ವಿಧಿಸಲಾಯಿತು. ಅವನದನ್ನು ಕೂಡಲೇ ಕೊಟ್ಟು ಬಿಟ್ಟ. ಆ ಹಣ ಬರಗಾಲ ಸಹಾಯನಿಧಿಗೆ ಸೇರಿತು. ಅಲ್ಲಿದ್ದ ಎಲ್ಲರಿಂದಲೂ ಆ ಮೊಚ್ಚೆಯ ಜೋಡುಗಳನ್ನು ಹಿಡಿದುಕೊಂಡು ಇನ್ನು ಮುಂದೆ ಕುಡಿಯುವದಿಲ್ಲ ಎಂದು ಪ್ರತಿಜ್ಞೆ ಮಾಡಿಸಿದೆ.

ಜನರೆಲ್ಲ ಹೊರಟು ಹೋದರು. ಸವೆದು ಸುಗ್ಗಾಗಿ ಹೋಗಿದ್ದ ನನ್ನ ಹಳೆಯ ಮೊಚ್ಚೆಯ ಜೋಡುಗಳು ಅಲ್ಲಿ ಮೂಲೆಯಲ್ಲಿ ಬಿದ್ದವು. ಅವುಗಳನ್ನು ನಾನೀಗ ಬೇರೆ ದೃಷ್ಟಿಯಿಂದ ನೋಡಿದೆ. ಅವು ಜನರ ಪಾದಗಳಿಗೆ ರಕ್ಷೆಯಾಗಿರುವದು ಮಾತ್ರವಲ್ಲದೆ ಈ ಬಡಪಾಯಿಗಳಿಗೆ ಅನ್ನಾಧಾರವಾಗಿದ್ದುವು.

ಕ್ಷುಲ್ಲಕವೆಂದು ಕಾಣುವ ಇಂಥ ವಿಷಯಗಳ ವಿಚಾರದಲ್ಲಿಯೂ ಮಾನವನು ಶ್ರದ್ಧೆ ಗೌರವಗಳಿಂದ ನಡೆದುಕೊಳ್ಳಬೇಕಾಗುತ್ತದೆ.

ಫೈಜಪುರ ಕಾಂಗ್ರೆಸ್ ಅಧ್ಯಕ್ಷ (೧೯೩೭)

ಐರೋಪ್ಯ ಪ್ರವಾಸದಲ್ಲಿ ಮೆನನ್. ಇಂದಿರಾ. ಜವಹರಲಾಲ

ಅಝಾದ ಮತ್ತು ಜವಹರಲಾಲ



ಮಹಾತ್ಮಾ ಗಾಂಧಿ

ಮನವಾಸಿನಲ್ಲಿ ಸರೋಜಿನಿ ದೇವಿ



ಬಾರ್ಡೋಲಿಯಲ್ಲಿ ಗಾಂಧಿ ವಸತಿಗೃಹ

ಅಮೇರಿಕೆಯಲ್ಲಿನ ಗಾಂಧೀಜಿಯ ಶಿಷ್ಯ

ಸುಭಾಷ್ಚಂದ್ರಬೋಸರ ತಂದೆ

ತಾ. ೨—೧೨—೧೯೩೪ರ
ಮಗನ ಭೇಟಿ ಕೂಡಾ
ಇಲ್ಲದೆ
ನಿಧನ ಹೊಂದಿದರು.





ಸುಭಾಷರ ತಾಯಿ

[illegible]

ಸುಭಾಷರ ಜನನ.
ತಾ. ೨೩
ಜಾನೇವರಿ
೧೮೯೭

"ಸ್ವಾತಂತ್ರ್ಯವೇ
ನನ್ನ
ಜೀವನ
ಸಂಗೀತ"

ಇಬ್ಬರು ಗಾಂಧಿಗಳು

ಇಬ್ಬರು ನೇತಾರರು

ಕಾಂಗ್ರೆಸ್ ಮುಂದಾಳುಗಳ ಭೋಜನ

ಭಕ್ಷ್ಯ ಪದಾರ್ಥಗಳಮೇಲೆ ಕೈ ಎಳೆಯುತ್ತಿರುವ ಕಾಂಗ್ರೆಸ್ ಮುಖಂಡರು.

ಮೌ. ಅಝಾದ ಹಾಗೂ ಗಫ್ಫರಖಾನರ ಪಂಕ್ತಿಯಲ್ಲಿ ಪಟೇಲರು.

ಮಹಾಕೋಶಲದ 'ಹಾಳುಹಂಪೆ' ಈ ತ್ರಿಪುರಿ



ತ್ರಿಪುರಿಯ ಸಮೀಪದಲ್ಲಿರುವ ನಂಗಮರಮರಿ ಕಲ್ಲಿನ ಗುಡ್ಡ.

ಇದೇ ತಿಂಗಳಿನ ಮಧ್ಯದಲ್ಲಿ ಮಹಾಕೋಶಲಪ್ರಾಂತ್ಯದ ತ್ರಿಪುರಿ ಎಂಬ ಹಳ್ಳಿಯು ಒಂದು ಐತಿಹಾಸಿಕ ಕಾಂಗ್ರೆಸ್ ಅಧಿವೇಶನ ನೋಡುತ್ತದೆ. ಈ ಕಾರಣದಿಂದಾಗಿ ಭಾರತೀಯರ ಗಮನ ಈ ತ್ರಿಪುರಿಯ ಕಡೆ ಸೆಳೆದಿದೆ.

ತ್ರಿಪುರಿ ಒಂದಾನೊಂದು ಕಾಲದಲ್ಲಿ ತುಂಬ ವೈಭವಶಾಲಿಯಾದ ನಗರವಾಗಿದ್ದಿತು. ಉತ್ತರ ಹಿಂದೂಸ್ಥಾನದಲ್ಲಿ ಒಂದು ಕಾಲದಲ್ಲಿ ಬಹಳ ವೈಭವದಿಂದ ರಾಜ್ಯವಾಳಿದ ಕಲಚುರಿವಂಶದವರ ರಾಜಧಾನಿಯಾಗಿದ್ದಿತು ಈ ತ್ರಿಪುರಿ.

ಮಹಾಕೋಶಲ ಪ್ರಾಂತ್ಯಕ್ಕೊಳಪಟ್ಟ ಜಬಲಪುರದಿಂದ ತ್ರಿಪುರಿ ಎಂಟು ಮೈಲಿನಮೇಲಿದೆ. ಅದನ್ನು ಈಗ 'ತೇವರ' ಎಂದು ಕರೆಯುತ್ತಾರೆ. ಒಂದಾನೊಂದು ಕಾಲದಲ್ಲಿ ಈ ಹಳ್ಳಿ ಪಟ್ಟಣವಾಗಿದ್ದಿತು. ಅಲ್ಲಿ ಟಂಕಶಾಲೆಯಿದ್ದಿತು. ಆದರ ಈಗ ಎಲ್ಲೆಲ್ಲೂ ಹಾಳು ಹಾಳು. ವಿಜಯನಗರ ಅಳಿದು ಹೋಗಿ ಹಾಳು ಹಂಪೆಯ ಅಸ್ತಿತ್ವ ಮಾತ್ರ ಉಳಿದ ಹಾಗೆ ತ್ರಿಪುರಿ ಅಳಿದು ಹೋಗಿ ಅದರ ಭಗ್ನಾವಶೇಷಗಳು ಮಾತ್ರ ಅಲ್ಲಲ್ಲಿ ಕಣ್ಣಿಗೆ ಬೀಳುತ್ತಿವೆ.

★

ಬೌದ್ಧ ಸಂಸ್ಕೃತಿ

ಇಂದಿನ ತ್ರಿಪುರಿಯಲ್ಲಿ ಹಿಂದಿನ ತ್ರಿಪುರಿಯ ವೈಭವವನ್ನು ದೃಷ್ಟಿಗೆ ತಂದು ಕೊಡುವ ಅನೇಕಾನೇಕ ಅವಶೇಷಗಳಿವೆ. ಅವುಗಳಲ್ಲಿ ಪ್ರಾಮುಖ್ಯವಾದುವುಗಳೆಂದರೆ ಮೂರ್ತಿಗಳು. ಅಲ್ಲಿನ ಕೆರೆಯ ತೀರದಲ್ಲಿ ಒಂದು ದೊಡ್ಡ ಶಿವಲಿಂಗವಿದೆ. ಇನ್ನೂ ಅನೇಕಾನೇಕ ಮೂರ್ತಿಗಳು ಹಿಂದು ಹಿಂದಾಗಿ ಬಿದ್ದುಕೊಂಡಿವೆ. ಪ್ರಾಚೀನ ತ್ರಿಪುರಿಯ ರಚೆಯ ಮಾಡಿಕೊಳ್ಳುವುದು ಈ ಮೂರ್ತಿಗಳಿಂದಲೇ ಸಾಧ್ಯವಿದೆ. ಅದಕ್ಕಾಗಿ ಇನ್ನಾವ ಸಾಧನೆಗಳೂ ನಮ್ಗೆ ದೊರೆಯುತ್ತಿಲ್ಲ.

ಇಲ್ಲಿನ ೧೨೦ ಮೂರ್ತಿಗಳನ್ನು ಕಂಡಾಗ ತ್ರಿಪುರಿಯ ಭಾರತೀಯ ಸಂಸ್ಕೃತಿಯ ನಿದರ್ಶನವಾಗುತ್ತ. ಈ ಹದಿನಾರು ಮೂರ್ತಿಗಳ ಶಿಲ್ಪರಚನೆ, ಕಲೆ, ಹಾಗೂ ಶಿಲೆಗಳನ್ನು ಕಂಡು ಬೇರೆ ಬೇರೆ ಮತ, ಸಂಸ್ಕೃತಿಗಳ ಸ್ಮರಣೆಯಾಗುವಂತಿದೆ.

ಬೌದ್ಧ ಧರ್ಮ ಹಾಗೂ ಬೌದ್ಧ ತಾಂತ್ರಿಕ ಕಲೆಗಳೊಂದಿಗೆ ಸಂಬಂಧಪಟ್ಟ ಎಂಟು ಮೂರ್ತಿಗಳಿವೆ. ಅಜಂಟಾಕಲೆಯೇ ಈ ಮೂರ್ತಿಗಳ ಕಲೆಯ ಮೂಲಾಧಾರ. ಇವುಗಳಲ್ಲಿ ಆರು ಮೂರ್ತಿ ಮಹಾತ್ಮಾ ಬುದ್ಧನವು. ಉಳಿದವು ಬೌದ್ಧ ತಾಂತ್ರಿಕರವು.

ಸುಮಾರಾಗಿ ಒಂದೂವರೆ ಸಾವಿರ ವರ್ಷಗಳಿಗೆ ಮೊದಲು ಮಹಾತ್ಮ ಬುದ್ಧ ಉತ್ತರದ ಕಪಿಲವಸ್ತು ನಗರದಲ್ಲಿ ಜನ್ಮತಳೆದ ವಿಚಾರ ಇತಿಹಾಸವನ್ನೋದಿದವರಿಗೆ ಗೊತ್ತು. ಆತನ ನಿರ್ವಾಣದ ನಂತರ ೨೫೦ ವರ್ಷಗಳ ತರುವಾಯ ಸಾಮ್ರಾಟ್ ಅಶೋಕ ಬೌದ್ಧ ಧರ್ಮದ ಪ್ರಚಾರದಲ್ಲಿ ಅಭೂತ ಪೂರ್ವ ಕಾರ್ಯ ಮಾಡಿದ. ತ್ರಿಪುರಿಯಲ್ಲಿ ದೊರೆಯುವ ಮೂರ್ತಿಗಳು ಭಗವಾನ್ ಬುದ್ಧದೇವನ ಜೀವನ ವಿಚಾರಕ್ಕೆ ಸಂಬಂಧಿಸಿವೆ.

★

ಸಿದ್ಧಾರ್ಥನ ಜೀವನ

ಪ್ರಾಚೀನ ಕಾಲದಲ್ಲಿ ರಾಜ ಮಹಾರಾಜರು ತಮಗಾಗಿ ಸುಂದರ ಸರೋವರಗಳನ್ನೂ ಉಪವನಗಳನ್ನೂ ನಿರ್ಮಿಸುತ್ತಿದ್ದರು. ಅಂತೆಯೆ ಕಲಚುರಿ ವಂಶದ ರಾಜರೂ ತಮ್ಮ ರಾಜಧಾನಿಯಾದ ಈ ತ್ರಿಪುರಿಯಲ್ಲಿ ಉಪವನವನ್ನು ನಿರ್ಮಿಸಿ ಅದರ ನಾಲ್ಕುಕಡೆಗಳಲ್ಲೂ ಮೂರ್ತಿಗಳನ್ನು ನಿಲ್ಲಿಸಿದ್ದ ಹಾಗೆ ಕಂಡುಬರುತ್ತದೆ.

ಗೌತಮ ಬುದ್ಧನ ಜೀವನವನ್ನು ಚಿತ್ರಿಸುವ ಈ ಮೂರ್ತಿಗಳು ತುಂಬ ಮನೋಹರವಾಗಿವೆ. ಒಂದು ಮೂರ್ತಿಯಲ್ಲಿ ಬಾಳೆ ಎಲೆಗಳಿಂದ ಕೂಡಿದ ಲತಾಮಂಟಪದಲ್ಲಿ ಯುವರಾಜ ಸಿದ್ಧಾರ್ಥ ಒಂದು ಮಂಚದ ಮೇಲೆ ಚಿಂತಾಮಗ್ನನಾಗಿ ಕುಳಿತಿದ್ದಾನೆ. ಈ ಲತಾವಿತಾನಯುಕ್ತ ಮಂಟಪ ಆತನ ವಿಲಾಸ ಕ್ರೀಡೆಗಾಗಿ ನಿರ್ಮಿತವಾಗಿದ್ದರೂ ಆತನಿಗಾಗಿ ಅದು ವಿರಕ್ತಿಯ ಸಾಧನೆಯಾಗಿ ಬಿಟ್ಟಿದೆ. ಆತನ ಬಳಿಯಲ್ಲೇ ಆತನ ತರುಣ ಪತ್ನಿ ಯಶೋಧರೆ ಶಿಲಾ ಪೀಠವೊಂದರ ಮೇಲೆ ತನ್ನ ತರುಣ ಪತಿಯ ವಿರಾಗ ಭಾವನೆಯನ್ನು ನೋಡುತ್ತ ಉದಾಸಳಾಗಿ ಕುಳಿತಿದ್ದಂತೆ ಚಿತ್ರಿಸಲಾಗಿದೆ. ಈ ಮೂರ್ತಿಯಲ್ಲಿನ ಯಶೋಧರೆಯ ಭಾವಭಂಗಿ ಉಚ್ಚ ಭಾವನೆಯ ನಿದರ್ಶನವಾಗಿದೆ.

[೬೬ ನೇ ಪುಟದಲ್ಲಿ ನೋಡಿ]

ಮಹಾ ಸಭೆಯ ಸೂತ್ರಧಾರಿಗಳು



ನಿಮ್ಮ ಸಂಪೂರ್ಣ ಜೀವನ ಭವಿಷ್ಯ

ಈ ಭವಿಷ್ಯದ ಲೇಖಕರು :—

ಶ್ರೀಮಾನ್ ವೀರಣ್ಣಗೌಡರು ಮೇಣಸಿಗಿ ಪಾಟೀಲ

ಭಾಗ್ಯೋದಯ ಪಂಚಾಂಗ ಕರ್ತೃ ಗದಗ.

ಜನ್ಮಾಂತರದ ಕರ್ಮಫಲವಾಗಿ ಬರುವ ಸುಖದುಃಖಾದಿಗಳನ್ನು ಮಾನವನು ಅರಿತುಕೊಳ್ಳಲಿ ಎಂದು ಲೋಕೋಪಕಾರ ದೃಷ್ಟಿಯಿಂದ ಪ್ರಾಚೀನಕಾಲದ ವಿದ್ವಾಂಸರೂ ಮಹರ್ಷಿಗಳು ನಾಲ್ಕು ಲಕ್ಷ ಜ್ಯೋತಿಷ್ಯ ಶಾಸ್ತ್ರಗಳನ್ನು ಬರೆದಿಟ್ಟಿದ್ದಾರೆ. ಶತ್ರು ಮಿತ್ರರ ವಿಚಾರ, ಭಾಗ್ಯೋದಯ ವಿಚಾರಗಳನ್ನು ತಿಳಿದುಕೊಳ್ಳಬೇಕಾದರೆ ಜನ್ಮಲಗ್ನ-ಕುಂಡಲಿಯೇ ಮುಖ್ಯವಾಗಿ ಅವಶ್ಯವಾದುದು. ಆದರೆ ಪ್ರತಿಯೊಬ್ಬರ ಜನ್ಮಕುಂಡಲಿಯನ್ನು ಕಾಪಿಡುವದು ಅಸಾಧ್ಯವು. ಅಂಥವರಿಗೆ ಜನ್ಮರಾಶಿ, ಜನ್ಮ ನಕ್ಷತ್ರ, ಜನ್ಮಲಗ್ನಕುಂಡಲಿಗಳ ಮಾಹಿತಿ ಇರುವದಿಲ್ಲವಾದುದರಿಂದ ಅಂಥವರಿಗೆ ತಮ್ಮ ಭವಿತವ್ಯವನ್ನು ತಿಳಿದುಕೊಳ್ಳುವದಕ್ಕಾಗಿ ಜ್ಯೋತಿಷಿಗಳ ಬೆನ್ನು ಹತ್ತಬೇಕಾಗುವದು. ಅವರ ಮನೋಬಯಕೆಗಳು ಪೂರ್ಣವಾಗದೆ ಚಿಂತಿಸಬೇಕಾಗುವದು.

ಅಂಥವರಿಗಾಗಿ ಅನೇಕ ಶಾಸ್ತ್ರಗಳನ್ನು ಆಧಾರವಾಗಿಟ್ಟುಕೊಂಡು ಹೆಸರಿನ ವರ್ಗಾತ್ಮಕ ಭವಿಷ್ಯವನ್ನು ಈ ಸಂಚಿಕೆಯಲ್ಲಿ ಬರೆದಿರುವೆನು

ತಿಳಿಯುವ ರೀತಿ

ಅ-ಅ ದಿಂದ ಓ-ಔ ವರೆಗಿನ ಹನ್ನೆರಡು ಅಕ್ಷರಗಳು 'ಅ' ವರ್ಗದಲ್ಲಿಯೂ 'ಕ' ದಿಂದ ಕಃ. 'ಖ' ದಿಂದ ಖಃ, 'ಗ' ಗಃ, 'ಘ' ದಿಂದ ಘಃ. ಙ ಇವು ಪ್ರತಿಯೊಂದರ ಹದಿನಾಲ್ಕು ಅಕ್ಷರಗಳೂ 'ಕ' ವರ್ಗದಲ್ಲಿ ಅಡಕವಾಗಿವೆ. "ಖಂಡೋಬಾ ಎಂಬ ಹೆಸರಿನವರು ಈ ಕಲ್ಪನಾವರ್ಗ ಭವಿಷ್ಯ ಕಥನದಲ್ಲಿ 'ಕ' ವರ್ಗದವರು. ಮೇಷ ಇಲ್ಲವೆ ವೃಶ್ಚಿಕರಾಶಿಯಾಗುವರು. 'ಕ' ವರ್ಗದ ಭವಿಷ್ಯವನ್ನು ಸ್ಥೂಲಮಾನದಿಂದ ಓದಿಕೊಳ್ಳಬೇಕು.

ಕ ವರ್ಗ

(ಕ, ಖ, ಗ, ಘ, ಙ.)

ಈ ವರ್ಗಕ್ಕೆ ಮೇಷ, ವೃಶ್ಚಿಕ ರಾಶಿ ಎಂತಲೂ ಸಂಜ್ಞೆಯಿದೆ.

ಈ ಅಕ್ಷರಗಳಲ್ಲಿ ಯಾರ ಜನ್ಮದ ಮೊದಲನೇ ಅಕ್ಷರ ಉಂಟೊ-ಅಥವಾ ೩-೧೨-೨೧-೩೦ ಇವುಗಳಲ್ಲಿ ಯಾವುದಾದರೂ ತಾರೀಖು ಗಳಲ್ಲಿ ಜನ್ಮವೆತ್ತಿರುವದಾದರೆ ಅವರು ಮಂಗಳನ ಗುಣಕ್ಕನುಸಾರವಾಗಿ ಬಾಳುತ್ತಾರೆ. ಕೆಳಗೆ ಬರೆದಿರುವ ಫಲಗಳಲ್ಲಿ ೧೦-೨ ಆಣೆ ಸರಿಬೀಳುವವೆಂದು ಧೈರ್ಯದಿಂದ ಹೇಳುವೆ.

ಈ ರಾಶಿಯವರು 'ತಾಮಸೀ ವೃತ್ತಿಯವರೂ ಅತಿ ಸಿಟ್ಟಿನವರೂ ಇದ್ದರೂ ಆ ಸಿಟ್ಟು ದೀರ್ಘಕಾಲ ಉಳಿಯದೆ ಬೇಗನೆ ಶಾಂತವೃತ್ತಿಯನ್ನು ತಳೆಯುವವರಾಗುತ್ತಾರೆ. ಇವರು ಶತ್ರುಗಳುಳ್ಳವರೂ,

[೩೪ ನೇ ಪುಟದಲ್ಲಿ ನೋಡಿ]

ಹಿಂದುಸ್ಥಾನ ಸರಕಾರದಲ್ಲಿ ರಜಿಸ್ಟರ ಆದಂಥ

ಸಿದ್ಧೇಶ್ವರ ಉಕ್ಕಿನ ತ್ರಿಜೋರಿಗಳನ್ನೇ ಕೊಳ್ಳಿರಿ!

"ಸಿದ್ಧೇಶ್ವರ" ಕಂಪನಿಯಲ್ಲಿ ತಯಾರಿಸಲ್ಪಡುವ ಉಕ್ಕಿನ ಸಾಮಾನುಗಳಿಗೆ ಹಳೆತನ (ಮುಪ್ಪು) ಇಲ್ಲ! ಕಳ್ಳರ ಕಾಟವಿಲ್ಲ! ಬೆಂಕಿಯ ಭಯವಿಲ್ಲ! ಗಾಳಿ ಧೂಳಿಗಳ ಸುಳಿವಿಲ್ಲ! ೧೦ ವರ್ಷ ಒಳಗಿಟ್ಟರೂ ಸಾಮಾನುಗಳಿಗೆ ಹಳೆತನವಿಲ್ಲ! ಯಾವಾಗಲೂ ಹೊಸವಾಗಿಯೇ ಇರುವವು.

ಸಿದ್ಧೇಶ್ವರ ಮತ್ತು ಕಂಪನಿ ತ್ರಿಜೋರಿ ಮೇಕರ್ಸ, ಹೆಡ್ ಆಫೀಸ ಹುಬ್ಬಳ್ಳಿ

ಬ್ರ್ಯಾಂಚ ಆಫೀಸ— ಅಜಿದಲಿಂಗ ಹೈದ್ರಾಬಾದ ದೆಕ್ಕನ್ ವಿಲ್ಸನ್‌ಪೇಟ ಕೊಲ್ಹಾಪುರ

ಏಜೆಂಟರು:
೧ ಬಿ. ಎಸ್. ಕುರವತ್ತಿ ಬ್ರದರ್ಸ, ದಾವಣಗೆರೆ
೨ ಎ. ಎಂ. ದಿವಾಕರ ಶಹಾಪುರ (ಬೆಳಗಾಂವ)
೩ ಚನ್ನಬಸಪ್ಪಾ ಶ್ರೀಶೈಲಪ್ಪಾ ನೋಟಿ ರವಿವಾರ ಪೇಟೆ ಬೆಳಗಾಂವ

ವಿಶೇಷ ಮಾಹಿತಿಗೆ ಸಮಕ್ಷಮ ಇಲ್ಲವೆ ಪತ್ರದ್ವಾರದಿಂದ ಇಂದೇ ತಿಳಿದುಕೊಳ್ಳಿರಿ.

ಮಾಲಕ— S. G. Kammar.

ಸಂಗೀತ

ಹೊಸ ಗ್ರಾಮಾಫೋನ್

ಕೀರ್ತನೆಗಳು.

...ತ್ರವು

ಕುಂ... ...ಹಕ

ಏನೆಂಬೆನೀಚೆಲುವ...

ಮನೋಹರೆ | ಬಿಂಬಧಾರೆ | ...

ಭಾವ || ಏನೆ ||

Tg Nos. 1 to 8 are missing

ಹೊಸ ಗ್ರಾಮಾಫೋನ್ ಕೀರ್ತನೆಗಳು.

ಶ್ರೀಮತಿ ಕೆ. ವಿ. ರಮಣಮ್ಮ

ಶ್ರೀಮತಿ ಇ. ವಿ. ಗೌರಿಅಮ್ಮಾಳ್

ಶ್ರೀಮತಿ ಪಿ. ಕೆ. ಮೀನಾಂಬಾಳ್

ಶ್ರೀಮತಿ ಪಿ. ಶಾರದಾಂಬಾಳ್



ರಾಗಂ—ಭ್ಯಾಗ್ ತಾಳಂ—ತ್ರಿತಾಲ್

ಧನಮೇ ಪ್ರಧಾನಂ ಧನಹೀನುನಿ । ಗಣಿಯಿಂಪರುಗದ ಜಗತಿನ್ ॥ಪ॥ ಧನ ಹೀನತಚೇತನ್ ಮನಮುನಕಡು ದುರ್ಬುದ್ಧುಲ ಬೆಡಗೊಂಡುನ್ । ಸರ್ವೇಶುನಿ ಯಂತ ಔಪಾಡೈನನ್ । ಸಾಗಿಲಪಡಡೆ ಧನಕಾಂಕ್ಷನ್ ॥ ಸೃಷ್ಟಿಂತುರು ನೋಟುಲ ಸ್ನೈನನ್ ಕಷ್ಟಮುಲಕು ವೆಸು ದೀಯರುಗಾ । ಆಹಾ ಧನ ಮಹಿಮನ್ ಗನುಗೊನವಶಮೆ ಧನ ಕಾಂತನ್ ಗನುಗೊನ್ನನ್ ॥ ನಿಶಿಂಪನ್ ಮನಸೌನಾ ॥ ಧ ॥

ಶ್ರೀ ಹೆಚ್. ಸುಬ್ರಮಣ್ಯಮ್, ಮೈಸೂರು.

ಕೇದಾರಗೌಳ ರಾಗ—ತಾಳ

ಓಡಿಪೋಪುದೇಸಿದೇನಿದು ॥ ಗಾಡಿಕಾತಿಯೇ ನೀಂ ॥ಪ॥ ಸೀರೆಯೆನ್ನೊಳು । ಕ್ಕಾರಗಿಳಾದೆ । ಸೇರದೆನ್ನನು ಗಾರುಗೈಯ್ವರೆ । ನೀರೆತಾಪ । ಮಾರಿಸಿಂದಿರೆ । ಸೇರಿನೀಂ ಸಂತೈಸದೆ ॥ ಚಂಡಿ ನಿನ್ನನು । ಕಂಡಮಾತ್ರದಿ । ಕೆಂಡಸಂಪಿಗೆ ಕೊಂಡು ಕಾಮನು ॥ ಹಿಂಡುತೆನ್ನನು ಬೆಂಡಗೈಯ್ವನು । ಚಂಡಿನೀಂ ಸಂತೈಸದೆ ॥ ೨ ॥

ರಾಗ—ಖರಹರಪ್ರಿಯ—ಆದಿತಾಳ

ಇವಳ್ಯಾರೀ ತರುಣೀಮಣಿ । ಪವ..ಲಕ್ಷಣ ಸುವೇಣೀ ॥ಪ॥ ಸುವಾಣೀ । ಭಾವ ಜನರಗಿಣಿ । ಪವನಶರೀರೆ ॥ಅ॥ ಇಂದುಮುಖಿಯನೇತ್ರವೂ । ಚಂದದ ಭುಜವಕ್ರವೂ । ಕುಂಪರವನೆ ಸುಂದರಾನನೆ । ಸುಂದರೀ ಬಂದುನಿಂದಿಹಳೋ ॥

ರಾಗ—ಕಾಂಬೋಧಿ—ಆದಿತಾಳ

ಏನೆಂಬೆನೀಚೆಲುವ । ಕಾಮೇಶನಾಕ್ರೋಧ । ಈ ಮೋಹಭಾವ ॥ಪ॥ ಈ ನೀರೆ ಮನೋಹರೆ । ಬಿಂಬಧಾರೆ । ಈ ಸುಂದರಿ । ಸೌಂದರ್ಯಮಾಶ್ಚರ್ಯ । ಈ ಮೋಹ ಭಾವ ॥ ಏನೆ ॥

ಶ್ರೀಮತಿ ಕೆ. ವೆಂಕಟಲಕ್ಷ್ಮಮ್ಮ, ಮೈಸೂರು.

ರಾಗ—ಬಿಲಹರಿ—ಆದಿತಾಳ



ಶ್ರೀ ಚಾಮುಂಡೇಶ್ವರಿ ಪಾಲಯಮಾಂ । ಕೃಪಾಕರಿ ಶಂಕರಿ ॥ ಶ್ರಿತಜನಪಾಲಿನಿ ಮಹಾ ಬಲಾದ್ರಿವಾಸಿನಿ । ಮಹಿಷಾಸುರಮರ್ಧಿನಿ ॥ ವಾಚಾಮಗೋಚರ ಮಹಿಮವಿರಾಜಿತೇ । ವರ ಗುಣಭರಿತೇ ವಾಕ್ಪತಿಮುಖಸುರವಂದಿತೇ ವಾಸು ದೇವಸಹಜಾತೇ ॥

ಸಾಸನಿದ ರಿಸನಿದ, ಪದನಿಪಮಗ, ಧಪಾಮಗರಿ । ಸರಿಗಪಮಗರಿಸನಿಧ ಸಾರೀ ಗಪಾ । ದಮಗರೀ ಗಪದ, ಸರಿಗಪ ಮಗರಿಸ । ರಿಗಪದ ಸನಿದಪ ದಸರಿಗ ಪದಸರಿ ಗಪಧಸ ನಿದರಿರೀರೀ ಸನಿದಪಮ ಗರಿಸಸರೀರೀ । ಗಪಪದ ದಸನಿದ ರೀಸಾನಿದಪ । ದಾಪಾಮಗರಿ । ಸಾರೀಗಪದ ॥

ರಾಕಾನಿಶಾಕರಸನ್ನಿಭ ವದನೇ ರಾಜೀವ । ಲೋಚನೆ ರಮಣೀಯ ಕುಂದರ ದನೇ । ರಕ್ಷಿತಭುವನೇ ಮಣಿರಚನೇ । ಮುಖವಾಕ್ಪ್ರದಾನವಿಖ್ಯಾತೇ ಮುನಿವರನುತ । ಸುಪ್ರೀತೇ ಶ್ರೀಕರ ತಾರಕ ಮಂತ್ರತೋಷಿತೆ । ಚಿತ್ತೇ ಸದಾ ನಮಸ್ತೇ ।

ರಾಗ—ಕಾಮೋಜ್—ಆದಿತಾಳ

ನಂದಗೋಪ ಕುಮಾರ ನಮೋನಮೋ । ಇಂದಿರೇಶ ಮುಕುಂದಾ ನಮೋ ನಮೋ ॥ ತಂದೆ ಪಾಲಿಸು ಸ್ವಾಮಿ ನಮೋನಮೋ । ಮುರವೈರೀ ॥೧॥ ಮಂಜುಕುಂಜ ವಿಹಾರಾ ನಮೋನಮೋ । ಕುಂಜರಾಧಿಪಪಾಲ ನಮೋನಮೋ । ಕಂಜನಾಭ ಮಹಾ ನುಭಾವ ನಮೋನಮೋ । ಕಮನೀಯಾ ॥ ೨ ॥ ದೇವೋತ್ತಮಾದಿನುತ ನಮೋ ನಮೋ । ದೇವಕೀ ತನುಜಾತ ನಮೋನಮೋ । ಪಾವನಾಂಘ್ರಿ ಸರೋಜಾ ನಮೋ ನಮೋ । ಪರಮಾತ್ಮ ॥ ೩ ॥

ಶ್ರೀಮತಿ ವೆಂಕೂಬಾಯಿ, ಬಳ್ಳಾರಿ.

ರಾಗ—ಝಂಜೂಟಿ ತಾಳ—ಆದಿ

ಗೋಪಾಲಕೃಷ್ಣ ಗಿರಿಧರ । ಮುರಹರ । ಕರುಣಾ ಭರಣಾ ಪಾಹಿ ಕೃಷ್ಣಾ ಕೃಷ್ಣಾ ॥ ಪ ॥ ಬೃಂದಾ ವನಚರ । ಸುಭಕರ ಸುರವೃಂದಾ । ಚರಿತಜದ ನಿಗಮನುತ ಮುಕುಂದಾ ಘನವರ । ಗಿರಿಧರವರಬೃಂದಾ । ರಕವೈರಿವಿನಾಶಕ । ನಂದ ನಂದ ಯದು ವೃಂದ್ಯ ವಂದ್ಯ

ಮುಚು । ಕುಂದಪಾಲ ಗೋವಿಂದ ನಮೋಸ್ತುತೆ ॥ ತಾರಾ ಧಿಪ ನಿಭ ಮುಖ । ಯದುಸುಕುಮಾರ । ಸುಮಶರ ಪಿತನಿಗಮ ವಿಹಾರ । ಸುರುಚಿರ । ವರನವ ಸುಮ ಾರ ನೃತಶ್ರೀಕರ । ಫಣಿಮದ ಹಾರ । ಮಾರಹರ ವಂದ್ಯ ಘೋರತರ ಪಾಪಹಾರ । ರ್ವೇಶ ನಮೋಸ್ತುತೆ ॥

ಶ್ರೀಮತಿ ಆರ್. ಬೃಹದಾಂಬಾಳ್, ಮದರಾಸು.

ರಾಗ—ಅಠಾಣ

ಶ್ರೀರಾಮ ಚಂದ್ರನಡಿ । ದಶರಥ ಬಾಲನಡಿ । ಶರಧಿಯೆ ಪಾವನಮಡಿ । ವಾಲ್ಮೀಕಿಮ ಗಿಲ್ । ಚಂದಾಮೃದ ಸಾರ ನಡಿ । ಅಡಿಯಾರುಗಳಿನ್ । ಕರುಣಾಸಾಗರ ನಡಿ ॥ ಶೂರ ರಾವಣನ್ ತೊಲ್ಲೈತೀರ್ಕ್ಕ ಅವ ದರಿತ್ತ । ನಾರಾಯಣ ನಡಿ । ಕೌಸಲ್ಯಯ್ಯೆ ಪೆಟ್ರಮಾರಾದ ಸತ್ಯವಾನಡಿ । ಕೌಶಿಕನ್ ಅಗು ಳ್ಸೀರಾಗ ಕೊಂಡವ ನಡಿ ॥ ಮಿಥಿಲಾಪುರಿಯಡೈಂದು । ಈ ಶನ್ ವಿಲ್ಲೈ ಮುರಿತ್ತು । ಮದಿ ಮುಗ । ವೈದೇಹಿ ತಣ್ಣೈನ್ । ಕರಂಪಿಡಿತ್ತು । ಸಖಿಯಾಗೊ ಕೊಂಡವ ನಡಿ । ಪರಶುರಾ ಮನ್ । ಗದಿಯಯ್ಯೆ । ವಗ ತ್ತುವನಡಿ ॥ ಪಾಪಿಕೂನಿ । ಸೊಲ್ಲಾಲ್ । ಕೈಗೇಯಿ । ಏಳಿರೆಂಡಾಡು । ಮೇವಿರಾ ಮನ್ । ವನಪೋಗ । ಪಟ್ಟಾಭಿಷೇಕಂ । ಕೋರೀಭರದನಕ್ಕಾಗೊ । ಕೇಟಿದೈತಂದು । ಆವಿಪಿಟ್ಟಾರ್ । ಪುನಪೋಗ । ಶ್ರೀರಾಮ ಚಂದ್ರನಡಿ ॥

ಶ್ರೀ ಕಂಠಾಚಾರ್, ಬೆಂಗಳೂರು.

ರಾಗ—ಬಿಲಹರಿ

ಯಾರೊಳು ನಾಂ ನೇರಿಕೆಯೊಳ್ಳಿದೇ ಯಾರೊಳಾಡುತಿರಲಿ ಹಾ ॥ ಪ ॥ ಸಾರಸುಖ ವುಳೀರಿ ಮುದವು ದೂರವಿದವಾಗಿವುದುವೆ । ಧರೆಯೊಳೆನ್ನ ಅವತಾರವು ಕರೆ ಕರೆ ಪಡ

ಲಿಂತಾದುದೇ ಹರಿದರು | ಜನಸದಾ ಕೊರೆದು ಪರಿಪರಿ ನುರುಗುವೆನುನಾಂ ಯೊಳುನಾಂ ಜವದೊಳೀಗ ಯವನಕುಲ ಜನದಲ್ಲೀ ಬೆಳೆದು ಭವದಿ ಮುಳುಗಿ ವುದೀ ಭವಣೆಯುನಗೆ ದೇವಾ || ಯಾರೊಳು ನಾಂ ||

ರಾಗ—ಜುಂಜೂಟಿ

ಸಾರಪರಿಮಳವಾ ನೆರಚಿಮೆರೆವಾ ಸರಸ ಸುಮವಾ | ಧರಿಸಿರುವ ಪಾರಿಜಾತಃ ಈ ಪರಿಮೆರೆಯೆಕುಂತ ಕುಲಗಳ | ಸುಲಲಿತ ಕಲಕಲ ರವಪೊಳು ಇಂದ್ರನ ನಂದನ ಕಂದವಿ | ದೆಂದೆನೆ ಮಂದಾರಂತಾ ಸುಂದರ ಕುಸುಮಾ ಬೃಂದವ | ಧರಿಸಿ ಕುಂದದಿರ್ಪ ಸೊಬಗಿಂದ ರಂಜಿಪುದು ಪಾರಿಜಾತವು | ಮನದಿಷ್ಟವನು ನೀಡಿ ಘನತೋಷವನು ವಿರಾಜಿಸುವ | ಸುಂದರ ಸುರುತರವು ಸುಖಕರವು ಮನಕೆ ವಿನೋದವ | ನಾಂತು ವಿರಾಜಿಪ ಪಾರಿಜಾತವು ||

ಕೆ. ವಿ. ಅಚ್ಯುತರಾವ್, ಬೆಂಗಳೂರು.

ರಾಗ—ಕಲ್ಯಾಣಿ ತಾಳ—ರೂಪಕ

ಪಂಚಬಾಣ ಸಂದೋಹ ಬೀರಿಗೆಲ್ಲುನೇ ಸಂಚರೀಕ ಗುಣದಪ್ಪುಬಲ ಜಂಝ

ಣಾರವವು ಮೆರೆಯೇ || ಅ || ಅರವಿಂದದಶರಬ್ಬೃಂದದೆ ನೆರೆಬಂಧಿಸಿ| ವರಮೌನಿಯ ಭರದಿಂದಲಿ ತಪನನಳಿದು | ತರಹರಿಸುವ ಪರಿಯುನೆಸಗಿ ಪರಿಪರಿಯೊಳು | ಪರಿಕಿಪೆನಹ ಬೀರುತೆಸುಮ ಶರಗಳ ಶೃಂ | ಗಾರದೆ ಮುಳುಗಿಸಿ ಮುನಿಯುನು | ತರುಣಿಯ ಸುಖವನು ಬಯಸುವ ಪರಿಯುಮಾಡಿ | ಹರುಷಗೂಡಿ ಪರಿಪರಿಯೊಳು ಪರಿಕಿಪೆನಹ ||

ಶ್ರೀಮತಿ ಯಶೋದಾಬಾಯಿ, ಬೆಂಗಳೂರು.

ಜೈ ಭಾರತ ಭೂಮಿಗೆ ಮಾತೆಗೆ ಜೈ | ಪಾವನಮೂರ್ತಿಗೆ ಜೈ ಧಾತೆಗೆ ಕಲ್ಯಾಣಿಗೆ ಜೈ ಜೈ ಜೈ | ಭೀಷ್ಮ ದ್ರೋಣ ಪರಶುರಾಮ | ಭೀಮಾರ್ಜುನಾದಿಸುತರ ಪೆತ್ತ ವೀರಮಾತೆಗೆ || ಜೈ || ದೇಶಸೇವೆಯಿಂದ ಸುಖಿಪ | ದೇಶಾಭಿಮಾನಿಗಳಿಗೆ ಧೀರಕರ್ಮ ವೀರರಿಗೆ || ಜೈ || ಧೀರದಾಸು ಶೂರನೆಪರು ಧರ್ಮಶ್ರೇಷ್ಠ | ಪುರುಷ ಗಾಂಧಿಪೆತ್ತ ವೀರಮಾತೆಗೆ ಜೈ ||

ರಾಗ—ತಾಳ

ಈಗ ಮಾಡಲೊ ರಾಮಧ್ಯಾನವ | ವಿಮುಖ | ನಾಗಬೇಡ ಮಾನವ | ಈಗ ರಾಮಧ್ಯಾನದಿಂದ | ಮೋಕ್ಷಪದವಿ ಪಡುವ ಮಾನವ || ಪ || ಸತತಿ ಕಾಲೆಂಬೊ ಶಾಂತನಾಯೊಳು ವಾರನಪ್ಪನಾ | ನೆನೆದು ಸತತಿಕಾಲಕ್ಷ್ಮೀಪತಿಯ ನೆನೆದು | ಸಾಕ

೦	೨	೬	ಟೀಕು ನಿತ್ಯಾನುಸಂಧಾನವು	೧	[illegible]	೦
೦	೦	೬	ಡಿಟೋ ಮೂಲ	೦	೪	೦
೦	೦	೬	ಜಾಪದಿ	೦	೧	೦
೦	೦	೬	ಹಂಸಸ್ವರಕೈವಲ್ಯ	೦	೪	೦
	೦	೬	ಸೇಲಂಜಿಲ್ಲಾ ತೀರ್ಪು	೦	೩	೦
	೧	೦	ಪಂಚತಂತ್ರಪದ್ಯಕಾವ್ಯವು	೦	೮	೦
	೦	೦	ಅಮರನಾರಾಯಣಕಾಲಜ್ಞಾನವು	೦	೧	೦

೦	೦	೬	ರಾಮಕರ್ಣಾಮೃತ	೦	೦	೬
೦	೦	೬	ನರಸಿಹ್ಮಶತಕ	೦	೦	೬
೦	೦	೬	ರಾಧಾಮಾಧವಲೀಲಾವಿಹಾರ	೦	೦	೬
೦	೦	೬	ಗಜೇಂದ್ರಮೋಕ್ಷಮು	೦	೦	೬
೦	೦	೭	ಭಜಗೋವಿಂದಂ	೦	೦	೬
೦	೦	೬	ಶಿಖಿನರಸಿಹ್ಮಶತಕಮು	೦	೦	೬
೦	೦	೬	ರಾಮತಾರಕಶತಕಮು	೦	೦	೬
೦	೦	೦	ಗರುಡಾಚಲಮು	೦	೦	೪
೦	೦	೬	ದಾಶರಥಿ ಶತಕಮು	೦	೦	೬
೦	೦	೬	ಚಕ್ಕಲಿ ಶೃಂಗಾರಪಾಟಲು	೦	೦	೬
೦	೦	೬	ಪೆಂಡ್ಲಿಪಾಟಲು	೦	೧	೬
೦	೦	೬	ಗಣಿಕಾಗುಣಪ್ರವರ್ತನ ತಾರಾವಳಿ	೦	೧	೦
೦	೦	೬	ಸುಮತಿಶತಕಮು	೦	೧	೦
೦	೦	೬	ಬ್ರಾಹ್ಮಣಚರಿತ್ರಮು	೦	೧	೦
೦	೦	೬	ಸಮಸ್ಯಲು	೦	೧	೦
೦	೪	೨	ಅಮರನಾರಾಯಣ ಶತಕಮು	೦	೧	೦
೦	೦	೬	ಬಾಷಿಯು ದಂಡಕ	೦	೧	೦

ನಮ್ಮ ಕಂಪನಿಯಲ್ಲಿ ತೆಲಗು, ಕನ್ನಡ, ಇಂಗ್ಲೀಷ್ ಸಹ ಇರುತ್ತೆ. ಲಗ್ನಪತ್ರಿಕೆಗಳು, ಬಿಲ್ಲುಫಾರಂಗಳು, ರೂಲುಫಾರಂಗಳು. ಬಹಳ ಸುಲಭಛಾರ್ಜಿಗೆ ಪ್ರಿಂಟುಮಾಡಲ್ಪಡುತ್ತೆ.

ವಾಜಪೇಯ, ಕೃಷ್ಣಯ್ಯ,

ಬೆಂಗಳೂರು ಬುಕ್ ಡಿಪೋ ಪ್ರೊಪ್ರೈಟರ್.

ಬೆಂಗಳೂರು.

ಸರಕಾರದಲ್ಲಿ ರಜಿಸ್ಟರಾದ ನಮ್ಮ ತಾರಿನವಿಳಾಸ

"ಪಂಜಾಬೀ"

PRIZE LIST

Few Medicines of

PUNJABEE DAWAKHANA

GADAG.

ಕೆಲವು ಔಷಧದ ಪತ್ರಿಕೆಗಳು,

ಪಂಜಾಬೀ ದವಾಖಾನೆ

ಜ್ಞಾಪಕಾರ್ಥದಸಲುವಾಗಿ

ಪಿ. ಎನ್ ಎಸ್ ಬಿಪಿ,

ಪಂಜಾಬೀ ಡಾಕ್ಟರ, ಗದಗ.

ಇವರಿಂದ ತಯಾರಮಾಡಿಸಿ,

ನೈಮನ್ ಪ್ರಿಂಟಿಂಗ್ ಮುದ್ರಾಲಯದಲ್ಲಿ

ಮುದ್ರಿಸಲ್ಪಟ್ಟಿತು.

ಗ್ರಾಹಕರಿಗೆ ಸೂಚನೆ.

ನಾವು ಇದುವರೆಗೆ ಪಟ್ಟ ಅನುಭವದಿಂದ ತಿಳಿದುಬರುವದೇನೆಂದರೆ,— ಈ ನಮ್ಮ ಕಂಪನಿಯಿಂದ ಕನ್ನಡ ಪ್ರಾಂತದ ಜನರಿಗೆ ಒಂದು ತರದ ಅನುಕೂಲತೆಯೇ ಆಗಿರುವದು.

ಬೇರೆ ಬೇರೆ ಜನರು ಬೇರೆ ಬೇರೆ ತರದ ವಸ್ತುಗಳ ಬೆಲೆಯ ಪಟ್ಟಿಯನ್ನು ಕಳುಹಿಸಿ ಕೊಡಬೇಕಾಗಿ ಮೊದಲಿಗೆ ಪತ್ರ ಬರೆಯುತ್ತಾರೆ. ಆದರೆ ಒಂದೇ ವಸ್ತುವು ಬೇರೆ ಬೇರೆ ತರದವು ಬೇರೆ ಬೇರೆ ಕೆಲಸಗಾರರಿಂದ ತಯಾರಾದವು ಅನೇಕ ಭೇದಗಳುಳ್ಳವು ಆಗಿರುವದರಿಂದಲೂ ಆಗಿಂದಾಗ ಆಗುವ ವ್ಯಾಪಾರ ಸ್ಥಿತಿಯ ಹೆಚ್ಚು ಕಡಿಮೆಗಳಿಂದ ಸಹ ಪ್ರತಿಒಂದು ವಸ್ತುವಿನ ವರ್ಣನೆ ಮತ್ತು ಆ ತಕ್ಕ ಬೆಲೆಯನ್ನು ತಿಳಿಸುವದು ಅಸಾಧ್ಯವಾಗಿರುವದು. ಕೆಲವು ಜನರು ವಜ್ರಕ್ಕೆ ಬೆಲೆ ಯೇನೆಂತಲೂ; ಕೆಲವರು ಕೆಂಪಿನ ಉಂಗುರಕ್ಕೆ ಬೆಲೆ ಯೇನೆಂತಲೂ; ಇನ್ನು ಕೆಲವರು ಕಸ್ತೂರಿ ೧ ತೊಲೆಗೆ ಬೆಲೆಯೇನೆಂತಲೂ, ಹೀಗೆ ಪ್ರಶ್ನೆ ಮಾಡುತ್ತಾರೆ. ಆದರೆ ಈ ತರದ ಪ್ರಶ್ನೆಮಾಡುವ ಗ್ರಾಹಕರಿಗೆ ಏನೆಂದು ಉತ್ತರ ಕೊಡಬೇಕಾಯಿತೆಂಬದನ್ನು ನಮ್ಮ ಸುಜ್ಞಾನ ಗ್ರಾಹಕರು ಆಲೋಚಿಸಬೇಕು. ಇವುಗಳ ಬೆಲೆಯು ಆ ವಸ್ತುಗಳ ಶ್ರೇಷ್ಟತ್ವ ಕನಿಷ್ಟತ್ವಗಳ ಮೇಲೆ ಅವಲಂಬಿಸಿರುವದು.

ಹೀಗೆ ನಾವು ಇಷ್ಟೇ ಪ್ರಾರ್ಥಿಸುತ್ತೇವಲ್ಲ; ಯಾರಿಗೆ ಯಾವ ತರದ ಸಾಮಾನುಗಳ ಅಪೇಕ್ಷೆಯುಂಟೋ ಅಂಥವರು ಆ ವಸ್ತುವಿನ ಹೀಗಿರಬೇಕೆಂತಲೂ ಮತ್ತು ಇಂತಿಷ್ಟು ಕ್ರಯದೊಳಗಾಗಿರಬೇಕೆಂತಲೂ ಸೂಚಿಸಿದರೆ ಆ ರೀತಿ ಸಾಧ್ಯವಾದಷ್ಟರ ಮಟ್ಟಿಗೆ ಪ್ರಯತ್ನಿಸಿ ಸಿಕ್ಕರೆ ಕಳುಹಿಸುವದಲ್ಲದೇ ಅದು ಅಷ್ಟರಲ್ಲಿ ಅಸಾಧ್ಯವಾಗಿದ್ದರೆ ಆ ಸಂಗತಿಯನ್ನು ಬರೆದು ಕಳುಹಿಸುವೆವು.

ನಾವು ಸಾಧ್ಯವಾದ ಮಟ್ಟಿಗೆ ವಸ್ತುಗಳ ಕ್ರಯವನ್ನು ಇದರಲ್ಲಿ ತಿಳಿಸಿರುತ್ತೇವೆ. ಅನೇಕ ಭೇದವಿರುವ ವಸ್ತುಗಳನ್ನು ಮಾತ್ರ ಇದರಲ್ಲಿ ನಮೂದು ಮಾಡಲಿಲ್ಲ. ಬಂಗಾರವನ್ನು ತರಿಸಿಕೊಳ್ಳುವ ಇಚ್ಛೆ ಇದ್ದವರನೇಕರು ಬಂಗಾರದ ದಾರಣೆಯನ್ನು ತಿಳಿಸಬೇಕಾಗಿ ಕೇಳುತ್ತಾರೆ. ಆದರೆ ಬಂಗಾರಕ್ಕೆ

ಧಾರಣೆಯು ನಾಳೆಗಿರುವದಿಲ್ಲ. ಯಾಕಂದರೆ ಭಂಗಾರದ ಧಾರಣೆಯು ಲಾಯತಿ ಹುಂಡಿಯ ಅದಲಾಬದಲಿನ ಧಾರಣೆಯಮೇಲೆ ಹೊಂದಿರುತ್ತದೆ. ಮತ್ತು ಆಗಿಂದಾಗ ಹೆಚ್ಚು ಕಡಿಮೆ ಧಾರಣೆಯಾಗುತ್ತಿರುವದು. ಆದ್ದರಿಂದ ಭಂಗಾರವನ್ನಪೇಕ್ಷಿಸತಕ್ಕವರು ಮುಂದಾಗಿ ಕೇಳುವ ಅವಶ್ಯವಿರಲಿಕ್ಕಿಲ್ಲ. ಮತ್ತು ಅನೇಕರು ಭಂಗಾರ ಪವನುಗಳನ್ನು ವ್ಯಾಲ್ಯೂಪೇಬಲ್‌ದಿಂದ ತರಿಸಲಿಕ್ಕೆ ಬರೆಯುತ್ತಾರೆ. ಇದರಿಂದ ಶೇಕಡಾ ೧|| ರೂಪಾಯಿ ಖರ್ಚು ಬೀಳುವದು. ಆದ್ದರಿಂದ ಭಂಗಾರವನ್ನಪೇಕ್ಷಿಸತಕ್ಕವರು ಮುಂದಾಗಿ ನೋಟು ಮೂಲಕವಾಗಲೀ ಹುಂಡೀ ಮೂಲಕವಾಗಿಯಾಗಲೀ ಹಣ ಕಳುಹಿಸಿಕೊಟ್ಟರೆ ಫಕ್ತ ಶೇಕಡಾ ೪ ಆಣೆ ಪ್ರಕಾರ ದಲಾಲಿ ತೆಗೆದುಕೊಂಡು ಕಳುಹಿಸುವೆವು. ಇದರಿಂದ ವ್ಯಾಲ್ಯೂಪೇಬಲ್ ಖರ್ಚು ಬಡ್ಡಿ ಇವು ಬೀಳಲಾರವು.

ಮುತ್ತು ರತ್ನಗಳು ಕಣ್ಣಿನ ಅನುಭವದಿಂದ ಕ್ರಯವನ್ನು ನಿಶ್ಚಯಿಸುವಂಥ ತಕ್ಕದ್ದಾದರೂ ಮುತ್ತಿಗೆ ಚಾವಗಟ್ಟಿಯಾಗಿಯೂ ರತ್ನಗಳಿಗೆ ರತಿಗಟ್ಟಿಯಾಗಿಯೂ ತೂಕದ ಮೇಲೆ ಕ್ರಯ ನಿಷ್ಕರ್ಷೆ ಮಾಡಬೇಕಾಗುವದು.

ಭಂಗಾರ, ಬೆಳ್ಳಿ, ಮುತ್ತು, ರತ್ನಗಳ ವಿಷಯವಾಗಿ ತೂಕ ಮುಂತಾದ್ದನ್ನು ನಿಶ್ಚಯಿಸಿಕೊಳ್ಳುವದಕ್ಕೆ "ಮಹಾಜನರ ಧರ್ಮಕಾಟಾ" ಎಂಬದೊಂದು ಸ್ಥಾನವಿರುತ್ತದೆ. ಮತ್ತು ಭಂಗಾರ ಬೆಳ್ಳಿಗಳ ಕ್ರಯವನ್ನು ನಿಶ್ಚಯಿಸುವದಕ್ಕೆ "ಚಿಂತು ಛಾಪ" "ಪಟವರ್ಧನಿ ಛಾಪ" ಈ ಹೆಸರುಳ್ಳ ಪೇಡಿಗಳಿದ್ದು ಅವುಗಳ ತೂಕ ಕ್ರಯ ಮುಂತಾದ್ದನ್ನು ಸದರೀ ಮೂರು ಕಡೆಯವರು ಮಧ್ಯಸ್ಥರಾಗಿ ನಿಶ್ಚಯಿಸಿ ಕೊಡುವರು. ಈ ಧರ್ಮಕಾಟಾ ಮತ್ತು ಪೇಡಿಗಳ ತೂಕ ಕ್ರಯ ನಿಷ್ಕರ್ಷೆಯ ಸರ್ಟಿಫಿಕೇಟನ್ನು ಸರಕಾರದವರು ಸಹ ವಿಶ್ವಾಸಪೂರ್ವಕವಾಗಿ ನಂಬುತ್ತಾರೆ. ಆದ್ದರಿಂದ ಇಂಥಾ ಸಾಮಾನುಗಳಬಗ್ಗೆ ನಾವು ಧರ್ಮಕಾಟಾ ರಶೀದಿ ಅಥವಾ ಛಾಪಾ ಹೊಡಿಯುವ ಪೇಡಿಗಳ ರಶೀದಿಯನ್ನು ಸದರೀ ಸಾಮಾನುಗಳೊಡನೆ ನಮ್ಮ ಗ್ರಾಹಕರಿಗೆ ಕಳುಹಿಸಿಕೊಡುವೆವು. ಅಂದರೆ ನಮ್ಮ ಉದ್ಯೋಗದ ಸತ್ಯತನಕ್ಕೆ ಅವು ಸಾಕ್ಷಿ ಕೊಟ್ಟಾವು.

ಇದು ಬಹು ವಿಸ್ತಾರವಾದ ಪಟ್ಟಣವಾಗಿದ್ದು ಒಂದೊಂದು ತರದ ಸಾಮಾನುಗಳು ಒಂದೊಂದು ಬಾಜಾರದಲ್ಲಿ ಮಾರುತ್ತಿರುವದರಿಂದ ಸ್ವಲ್ಪ ಸಾಮಾನುಗಳ ಬಗ್ಗೆಯಾದರೂ ನಾವು ಹೆಚ್ಚಿಗೆ ಶ್ರಮಪಡಬೇಕಾಗುತ್ತದೆಂಬಬಗ್ಗೆ ಯಾರು ಈ ಪಟ್ಟಣದ ಸ್ಥಿತಿಯನ್ನು ನೋಡಿ ಬಲ್ಲಾಗಿರುವರೋ, ಅವರನ್ನು ಕೇಳಿ ತಿಳುಕೊ

ಡಿಗೆ ಅನುಭವಕ್ಕೆ ಬರುವದು. ಆದರೆ ಸ್ವಲ್ಪ ಕ್ರಯದ ಸಾಮಾನುಗಳು ನಾವು ಬರೇ ಪ್ರಾಮಾಣಿಕತನದ ದಲಾಲಿಯನ್ನು ಮಾತ್ರ ವಿಟ್ಟು ಕಳುಹಿಸ ತ್ತೇವೆಂದರೆ ನಮ್ಮ ಆಫೀಸ್ ಖರ್ಚು ಸಹ ಹುಟ್ಟಲಾರದು. ಆದರೆ ಆ ತಕ್ಕ ಮುನಾಸಾಬಿನ ಮೇಲೆ-ಕಮಿಷನ್ ಆಕಾರ ಮಾಡುವೆವು. ಹೆಚ್ಚಿಗೆ ಮಾಲನ್ನು ಪಡಕೊಳ್ಳತಕ್ಕವರಿಗೂ ನಮ್ಮ ನಿತ್ಯದ ಗಿರಾಕಿಗಳಿಗೆ ಸಹ-ನಾವು ಶೇಕಡಾ ೨ ರೂಪಾಯಿಗೆ ಮಿಕ್ಕಿ ದಲಾಲಿಗೆ ಆಶೆಪಡಲಾರೆವು. ಕಡಮೆ ಕ್ರಯದ ಮಾ ಲುಗಳಾದರೂ ನಮ್ಮಿಂದ ಪಡಕೊಂಡಂತೇ ಬೇರೆ ಯಾರಿಂದ ಪಡಕೊಳ್ಳಲಾರರು ಯಾರಿಗೆ ರೈಲ್ವೇ ಸ್ಟೇಷನ್ನಾಗಲೀ ಸ್ಟೀಮರ ಬಂದರವಾಗಲೀ ಸಮೀಪಿಸಿದ್ದು ಅಂಥವರು ಭಾರ ವಸ್ತುಗಳನ್ನು ತರಿಸಿಕೊಳ್ಳಬೇಕಾಗಿದ್ದರೆ ಇಂಥಾ ಸ್ಟೇಷನ್ ಅಥವಾ ಬಂದರ ತಮಗೆ ಸಮೀಪವದೆ ಎಂದು ನಮಗೆ ಬರೆದು ತಿಳಿಸಿದರೆ ನಾವು ಸುಲಭವಾಗಿ ರೈಲ್ವೇ ಅಥವಾ ಸ್ಟೀಮರಿನ ಮೇಲಿಂದ ಕಳುಹಿಸಿಕೊಡುವೆವು.

ಮುಂಬಯಿ.

ಕೆನರಾ ಅಂಡ್ ಮೈಸೂರ್ ಟ್ರೇಡಿಂಗ್ ಏಜನ್ಸಿ ಆಫೀಸಿನವರ ನೇಮಗಳು.

೧. ಕನ್ನಡ ಪ್ರಾಂತದ ಜನರು ತಮಗೆ ಮುಂಬಯಿಯಿಂದ ಬೇಕಾಗುವಂಥ ಯಾವದೊಂದು ಸಾಮಾನುಗಳನ್ನಾದರೂ ನಮಗೆ ಬರದರೆ ಆ ಕೂಡಲೇ ನಾವು ಅವರಿಗೆ ಮುತವರ್ರಿಯಿಂದಲೂ ಬಂದೋಬಸ್ತಿಇಂದಲೂ ಕಳುಹಿಸಿಕೊಡುವೆವು.

೨. ನಾವು ಯಾರೊಬ್ಬರೊಡನೆಯಾದರೂ ಕಡಕಟ್ಟಿನ ವ್ಯಾಪಾರವನ್ನು ಮಾಡಲಿಕ್ಕಿಲ್ಲ. ಸಾಮಾನುಗಳಬಗ್ಗೆ ಮುಂಗಡ ಹಣ ನಮಗೆ ಕಳುಹಿಸಬೇಕೆಂಬ ಅಗತ್ಯವಿಲ್ಲ. ವ್ಯಾಲ್ಯೂಪೇಬಲ್‌ದಿಂದ ಕಳುಹಿಸುವೆವು. ಮುಂಗಡ ಹಣ ಬಂದ ಪಕ್ಷಕ್ಕೆ ಬಹಳ ಉತ್ತಮ.

೩. ನಮ್ಮ ಆಫೀಸಿನವರು ಯಾವಾಗಲೂ ಯೋಗ್ಯ ಭಂಡವಾಲವನ್ನು ಸಂಗ್ರಹಿಸಿಯೇ ತಮ್ಮ ಉದ್ಯೋಗವನ್ನು ನಡಸುವರು. ಗ್ರಾಹಕರಿಗೆ ಬೇಕಾದ ಸಾಮಾನುಗಳನ್ನು ನಗದು ಹಣ ಕೊಟ್ಟು ಚವಕಶಿಯಿಂದ ಖರೀದಿಮಾಡಿ ನ್ಯಾಯವಾದ ದಲಾಲಿಯನ್ನು ಮಾತ್ರ ತೆಗೆದುಕೊಂಡು ಕಳುಹಿಸಿಕೊಡುವರು.

೪. ಸಾಮಾನುಗಳನ್ನು ಕಳುಹಿಸುವಾಗ ಅವು ಹಾಳಾಗದಂತೇ ಹೆಚ್ಚು ಜಾಗ್ರತೆಯನ್ನು ತೆಗೆದುಕೊಂಡೇವು. ಆದರೆ ಕಟ್ಟುವ ಖರ್ಚಿನಬಗ್ಗಾಗಿ ತಗ ಲಿದ ನ್ಯಾಯವಾದ ಖರ್ಚನ್ನು ಬಂಗಿಯಮೇಲೆ ಆಕಾರ ಮಾಡುವೆವು.

ನಮ್ಮಲ್ಲಿ ಸಿಗಬಹುದಾದ ಸಾಮಾನುಗಳ ವಿಷಯವಾಗಿ ಮೊದಲಿಗೆ "ವಿಶೇಷ ಸೂಚನೆ" ಎಂಬ ಹೆಸರಿನ ಕೆಳಗೆ ಸಾಧಾರಣ ರೀತಿಯಿಂದ ಕಾಣಿಸಿದ್ದೇವಲ್ಲದೇ ಪುಸ್ತಕಗಳ ವಿವರಣೆಯನ್ನು ಬಾಳಬೋಧ ಮತ್ತು ಇಂಗ್ಲೀಷು ಅಕ್ಷರದಿಂದ ಪಟ್ಟಿರೂಪವಾಗಿ ಛಾಪಿಸಿರುತ್ತೇವೆ. ಇವಲ್ಲದೇ ಮುಂಬಯಿಯಲ್ಲಿ ಸಿಗಬಹುದಾದ ಯಾವದೊಂದು ಸಾಮಾನುಗಳನ್ನಾದರೂ ಹುಡುಕಿ ಸಾಧ್ಯವಾದಷ್ಟು ರವಟ್ಟಿಗೆ ಕಳುಹಿಸಿಕೊಡುವೆವು.

೬. ಭಂಗಾರ, ಬೆಳ್ಳಿ ಮುಂತಾದ್ದನ್ನು ವ್ಯಾಪಾರ ಮಾಡತಕ್ಕವರು ಯೋಗ್ಯರಾಗಿ ಕಂಡುಬಂದರೆ ಅಂಥವರು ಮುಂಗಡ ಹಣ ಕಳುಹಿಸಬೇಕೆಂಬ ಅಗತ್ಯವಿಲ್ಲ. ಎಷ್ಟೇ ರಕಮಿನ ಭಂಗಾರ ಬೆಳ್ಳಿಗಳನ್ನು ಕಳುಹಿಸಬೇಕಾಗಿ ಬರೆದಾಗ್ಯೂ "ಇನಷೂರೆನ್ಸ್" ವ್ಯಾಲ್ಯೂಪೇಬಲ್‌ದಿಂದ ಕಳುಹಿಸಿಕೊಡುವೆವು. ಆದರೆ ಶೇಕಡಾ ೧೦ ಆಣೆಗಳಂತೇ ಬಡ್ಡಿಯನ್ನು ೪ ಆಣೆಯಂತೇ ದಲಾಲಿಯನ್ನು ಸಹ ಕೊಡಬೇಕಾಗುವದು. ಒಂದುವೇಳೆ ನಾವು ಸಂಚಕಾರವನ್ನು ಕಳುಹಿಸಬೇಕಾಗಿ ಬರೆದರೆ ಅವರು ಶೇಕಡಾ ೧ ರೂಪಾಯಿಯಂತೇ ಭರವಸೆಯ ಹಣವನ್ನು ಕಳುಹಿಸಲಿಕ್ಕೆ ಒಪ್ಪಿರಬೇಕಾದದ್ದು. ಆಯಾಯ ದಿವಸದ ಪೇಟೆ ತಾರಣೆ ಇದ್ದಂತೆ ಜಕಾವಕೆಸಿಯಿಂದ ಕಳುಹಿಸುವೆವು. ಟಪ್ಪಾಲ್ ಖರ್ಚು ಮನಿ ಆರ್ಡರ್ ಫೀ ಸಹ ಬಿದ್ದೀತು.

೭. ನಾವು ಯಾವಾಗಲೂ ಪ್ರಮಾಣಿಕತನದಿಂದಲೇ ನಮ್ಮ ಉದ್ಯೋಗವನ್ನು ನಡಿಸುವೆವೆಂದು ನಂಬಿರುವೆವು.

೮. ಮುತ್ತು ರತ್ನಾದಿಗಳನ್ನು ಖರೀದಿ ಮಾಡಬೇಕಾದರೆ ಶೇಕಡಾ ೧-[illegible] ರೂಪಾಯಿಗಳಂತೇ ದಲಾಲಿಯನ್ನು ತೆಗೆದುಕೊಂಡೇವು.

೯. ತೋಕ್ ಮಾಲುಗಳನ್ನು ಖರೀದಿ ಮಾಡಿಸುವಬಗ್ಗೆ ಒಳ್ಳೇ ಅನುಭವವುಳ್ಳವರನ್ನು ನಮ್ಮ ಆಫೀಸಿನಲ್ಲಿ ಇಟ್ಟುಕೊಂಡಿರುವೆವು. ಮುಂಗಡ ಹಣದ ವಿನಹ ಭಾವಿ ಮಾಲುಗಳನ್ನು ಖರೀದಿ ಮಾಡಿಸಲಾರೆವು. ಗ್ರಾಹಕರ ಕಡೆಯಿಂದ ಏಜಂಟರಾಗಲೀ ಖುದ್ದ ಗ್ರಾಹಕರಾಗಲೀ ಬಂದರೆ ಅವರಿಗೆ ಪೂರ್ಣವಾದ ಸಹಾಯವನ್ನು ಮಾಡುವೆವು. ಆದರೆ ಶೇಕಡಾ ೧ ರೂಪಾಯಿಗಳಂತೆ ದಲಾಲಿಯನ್ನು ತೆಗೆದುಕೊಳ್ಳುವೆವು.

೧೦. ವ್ಯಾಪಾರಗಾರರವರಿಗೆ ನಾವು ಒಳ್ಳೇ ಅನುಕೂಲತೆಯನ್ನು ಕಲ್ಪಿಸಿ

ರುತ್ತೇವೆ. ಅಂಥವರು ಅಗತ್ಯವಾಗಿ ತಿಳಿಯಬೇಕಾದ ಯಾವದೊಂದು ವಿಷಯವನ್ನಾದರೂ ಖಾಸಗಿ ಪತ್ರ ವ್ಯವಹಾರವನ್ನು ನಡಸಿ ತಿಳಕೊಳ್ಳಬಹುದಾಗಿದೆ.

೧೧. ಯಾವದೊಂದು ವಸ್ತುವಿಗಾದರೂ ಇದರ ಟಪ್ಪಾಲು ಹಾಸಿಲು ವಗೈರಂತಾದ್ದನ್ನು ನಮೂದು ಮಾಡಲಿಲ್ಲ. ಈ ಬಗ್ಗೆ ನ್ಯಾಯವಾಗಿ ಬೀಳುವ ಖರ್ಚನ್ನು ಸಾಮಾನು ಬಂಗಿಯ ಮೇಲೆ ಆಕಾರಿಸಿ ಆ ವಿಷಯವನ್ನು ಅವರಿಗೆ ಬರೆದು ತಿಳಿಸುವೆವು.

೧೨. ಯಲ್ಲಾ ತರದ ಪತ್ರವ್ಯವಹಾರಗಳನ್ನು "ಮ್ಯಾನೇಜರ್ ಕೆನರಾ ಅಂಡ್ ಮೈಸೂರ್ ಟ್ರೇಡಿಂಗ್ ಏಜನ್ಸಿ ಆಫೀಸ್ ಮಾರ್ಕೆಟ್ ಪೋಸ್ಟ್ ಮುಂಬಯಿ" ಎಂಬ ವಿಳಾಸದಿಂದ ಕಳುಹಿಸತಕ್ಕದ್ದು.

೧೩. ನಾಟ್‌ಪೇಡಾಗಿ ಬರುವ ಪತ್ರಗಳನ್ನು ನಾವು ಸ್ವೀಕರಿಸಲಿಕ್ಕಿಲ್ಲ. ಮತ್ತು ಬೇರೆ ಯಾವದಾದರೊಂದು ಸಂಗತಿಯನ್ನು ನಮ್ಮಿಂದ ತಿಳುಕೊಳ್ಳಬೇಕಾಗಿದ್ದು ಅದು ನಮ್ಮ ಕರ್ತವ್ಯದ ಹೊರಗಿನದಾಗಿದ್ದರೆ ಅಂಥವರು ಅರ್ಧಾಣೆಯ ಪೋಸ್ಟೇಜು ಟಿಕೀಟನ್ನು ಉತ್ತರಬಗ್ಯಾಗಿ ಕಳಿಸಬೇಕು.

೧೪. ಯಾರಿಗಾದರೂ ಕೋರ್ಟುಕಚೇರಿಗಳ ಕೆಲಸದಲ್ಲಿ ವಕೀಲ ಬ್ಯಾರಿಷ್ಟರ ಮುಂತಾದವರ ಅಗತ್ಯವಿರಲೀ ಅಥವಾ ಕಾನಸೀಲ್ ಒಪ್ಪೀನಿಯನ್ ಪಡಿಯತಕ್ಕದ್ದಿರಲೀ, ಅಂಥಾ ವಿಷಯದಲ್ಲಿ ಸಹಾಯ ಮಾಡಬೇಕೆಂದು ನಮಗೆ ಬರೆದರೆ ಆ ಕೆಲಸವನ್ನು ಸಹಾ ನಾವು ಮಾಡಿಕೊಡುವೆವು.

೧೫. ಯಾರಿಗಾದರೂ ಮುಂಬಯಿಗೆ ಬರುವ ಅಪೇಕ್ಷೆ ಇದ್ದು ಅವರಿಗೆ ಇಲ್ಲಿ ಬೇಕಾದ ಸ್ಥಳ ಊಟ ಮುಂತಾದ್ದರ ಅನುಕೂಲತೆಯಾಗಬೇಕಾಗಿದ್ದಲ್ಲಿ ಅವರು ಮುಂದಾಗಿ ನಮಗೆ ತಿಳಿಸಿದರೆ, ಆ ಬಗ್ಗೆ ಎಲ್ಲಾ ಅನುಕೂಲತೆಗಳನ್ನು ಸಿದ್ಧ ಪಡಿಸುವೆವು. ಮತ್ತು ಅವರು ಇಳಿಯುವ ಸ್ಥಳಕ್ಕೆ ಜನರನ್ನು ಗಾಡಿಯನ್ನು ಸಹಾ ಕಳುಹಿಸುವೆವು.

ವಿವರಣೆ.

ಭಂಗಾರ—ಈ ಪಟ್ಟಣದಲ್ಲಿ ಭಂಗಾರದ ದಾರಣೆಯು ಒಂದೇ ಸಮನಾಗಿರುವದಿಲ್ಲ, ಭಂಗಾರದ ದಾರಣೆಯು ವಿಲಾಯತಿ ಹುಂಡಿಯ ಅದಲಾಬದಲಿನ ದಾರಣೆಯ ಮೇಲೆ ಅವಲಂಬಿಸಿರುತ್ತದೆ. ಇಂದಿನ ದಾರಣೆ ನಾಳೆಗೆ ಹೆಚ್ಚಾಗಲೂ ಬಹುದು ಕಡಿಮೆಯಾಗಲೂಬಹುದು. ಆದರೆ ನಾವು ಆಯಾಯ ದಿವಸದ

...ರದ ಧಾರಣೆಯಂತೆ ಕ್ರಯ ಮಾಡಿ ಕಳುಹಿಸುವೆವು. ಭಂಗಾರವನ್ನ ಪೇಕ್ಷಿಸತಕ್ಕವರು ಮುಂದಾಗಿ ಹಣವನ್ನ ನೋಟು ಅಥವಾ ಹುಂಡಿ ಮೂಲಕವಾಗಿ ಕಳುಹಿಸಿದರೆ ಉತ್ತಮವಾಗುವದು. ಹಾಗೆ ಮುಂತಡೆ ಇದ್ದರೆ ಆ ತಕ್ಕ ಹಣವಿಗೆ ಶೇಕಡಾ ಹನ್ನೆರಡಾಣೆಗಳ ಪ್ರಕಾರ ಬಡ್ಡಿಯೂ ವ್ಯಾಲ್ಯೂಪೇಬಲ್ ಖರ್ಚು ಶೇಕಡಾ ೧ ರೂಪಾಯಿ ಪ್ರಕಾರ ಹೆಚ್ಚು ಖರ್ಚು ಬೀಳುವದು. ಆದರೆ ಎಷ್ಟೇ ರಕಮಿನ ಭಂಗಾರ ಬೇಕಾದಾಗ್ಯೂ ನಾವು ವ್ಯಾಲ್ಯೂಪೇಬಲ್ ದಿಂದ ಕಳುಹಿಸಲೂ ಅಡ್ಡಿ ಇಲ್ಲ. ಆದರೆ ಭಂಗಾರದಬಗ್ಗೆ ಅಪೇಕ್ಷೆ ಮಾಡುವವರು ತಮ್ಮ ಪತ್ರದೊಂದಿಗೆ ಕೆಲವು ಮಟ್ಟಿಗೆ ಭರವಸೆ ಹಣವನ್ನ ಮುಂದಾಗಿ ಕಳುಹಿಸಿದ ಹೊರ್ತು ಭಂಗಾರವನ್ನು ಕಳುಹಿಸಲಾರೆವು. ಭಂಗಾರದ ಬಗ್ಗೆ ನಾವು ಶೇಕಡಾ ೪ ಆಣೆಯಂತೇ ಮಾತ್ರ ಕಮಿಶನ್ ತೆಗೆದುಕೊಂಡೇವು.

ಭಂಗಾರದಿಂದ ಘಟ್ಟಿ ತರದ ಆಭರಣಗಳನ್ನ ನಾನಾ ಜೇಲ್‌ದಾರ್ ಉಂಗುರಗಳನ್ನ ನಕ್ಷೆಯುಳ್ಳ ಆಭರಣಗಳನ್ನ ತಲೆ ಹೂವು, ಕೈಬಳೆ, ಕಂಠೀಸರ, ಉಡದಾರ, ಮುಂತಾದ ಬೇಕಾದ ತರದ ಆಭರಣಗಳನ್ನ ಸಿದ್ಧವಿರುವವನ್ನಾಗಲೀ, ಸಿದ್ಧಮಾಡಿಸಿ ಸಹಾ ಕಳುಹಿಸಿಕೊಡುವೆವು. ಮತ್ತು ನ್ಯಾಯವಾದ ಕೂಲಿಯನ್ನ ಕೆಲಸಕ್ಕೆ ತಕ್ಕ ಕೊಡಬೇಕಾದೀತಲ್ಲದೇ ಇಂಥವುಗಳ ಬಗ್ಗೆ ಶೇಕಡಾ ೧ ರೂಪಾಯಿ ಕಮಿಶನ್ ತೆಗೆದುಕೊಂಡೇವು.

ಬೆಳ್ಳಿ ಬೇಕಾದವರಿಗೆ ನಾವು ಶುದ್ಧ ಉರುಗಿದ (ಖರೆ) ಬೆಳ್ಳಿಯನ್ನ ಕಳುಹಿಸುವೆವು. ಇದರಬಗ್ಗೆ ಶೇಕಡಾ ೧ ರೂಪಾಯಿ ಕಮಿಶನ್ ತೆಗೆದುಕೊಂಡೇವು. ಬರೇ ಬೆಳ್ಳಿ ಬೇಕಾದವರು ಕೆಲವು ಹಣ ಮುಂಗಡ ಕಳುಹಿಸಬೇಕು.

ಖರೆ ಬೆಳ್ಳಿಯಿಂದ ತಯಾರಿಸಿದ ತಾಟುಗಳೂ, ಲೋಟಗಳೂ, ಕಾಲಸರಗಳೂ, ಉಡದಾರದ ಎಳೆಗಳೂ, ವಾಲ್ಮಾಜೀ ನಮೂನೆಯ ಉಡದಾರಗಳೂ ಸಾದಾ ಮಾಟದ ಮತ್ತು ನಕ್ಷೆ ಕೆಲಸದ ತಂಬಿಗೆ ಪಂಚಪಾತ್ರೆ, ಉದ್ಧರಣೆ, ತಟ್ಟೆ, ಬಟ್ಟಲು, ಜಾಂಬು, ಪ್ಯಾಲೆ, ಗುಲಾಬದಾನಿ, ಡಬ್ಬಿ, ಪೆಟ್ಟಿಗೆ ಮುಂತಾದ ಬೇಕಾದ ಸಾಮಾನುಗಳನ್ನ ಕೇಳಿದ ನಮೂನೆಗೆ ಸರಿಯಾಗಿ ತಯಾರಿಸಿ ಕಳುಹಿಸಿ ಕೊಡುವೆವು. ಬೆಳ್ಳಿ ವರ್ತಮಾನ ವಿನಹ, ಸಾದಾ ಮಾಟದ ನಗಗಳಿಗೆ ತೊಲೆಗೆ ೨ ಆಣೆ ಲಾಗಾಯಿತು, ೮ ಆಣೆ ವರಿಗೆ ಕೆಲಸಕ್ಕೆ ತಕ್ಕಂತೆ ಕೂಲಿ ಬೀಳುವದು. ನಕ್ಷೆ ಕೆಲಸಗಳಲ್ಲಿ ಕಚ್ಚಿ ಕೆಲಸದವೂ, ಬೈಸಾ ಕೆಲಸದವೂ, ಇರುತ್ತವೆ. ಕಚ್ಚೀ ಕೆಲಸದ ನಕ್ಷೆ ಸಾಮಾನುಗಳಿಗೆ ತೊಲೆಗೆ ೮ ಆಣೆ ಹಿಡಿದು ೧೨ ಆಣೆ ವರಿಗೆ

ಕೂಲಿ ಬೀಳುವದು. ಚೈನಾ ಕೆಲಸದ ಗುಲಾಬದಾನಿ ನಶ್ಯದ ಡಬ್ಬಿ ಇವುಗಳಿಗೆ ತೊಲೆಗೆ ೧೦ ಆಣೆಯಿಂದ ೧ ರೂಪಾಯಿ ವರಿಗೆ ಕೂಲಿ ಬೀಳುವದು. ವಾಲಾಯತಿ ಮಾಟದ ಉಡುವಾರಗಳಿಗೆ ತೊಲೆಗೆ ೮ ಆಣೆಯಿಂದ ೧೦ ಆಣೆ ವರಿಗೆ ಕೂಲಿ ಬೀಳುವದು. ಬೆಳ್ಳಿ ಸಾಮಾನುಗಳ ಮೇಲೆ ೧೦೦ಕ್ಕೆ ಮೇಲ್ಪಟ್ಟವುಗ ಮಾತ್ರ ಶೇಕಡಾ ೧ ರೂಪಾಯಿ ಪ್ರಕಾರವೂ, ಅದಕ್ಕೆ ಕೆಳ ಪಟ್ಟರೆ ತೊಲೆ ೧ಕ್ಕೆ ಅರ್ಧಾ ಆಣೆಯಂತೆಯೂ ಕಮಿಶನ್ ತೆಗೆದುಕೊಂಡೇವು. ಯಾವದಕ್ಕೆ ನಾವು ಕಮಿಶನ್ ತೆಗೆದುಕೊಳ್ಳುತ್ತೇವೋ ಅಂಥ ಸಾಮಾನುಗಳನ್ನು ಹೆಚ್ಚು ಜವಾಬಯಿಂದ ಕಳುಹಿಸೇವೆಂಬದನ್ನು ಗ್ರಾಹಕರು ನಂಬಿರಬೇಕು.

ಮುತ್ತು—ಈ ಪಟ್ಟಣದಲ್ಲಿ ಮುತ್ತಿನ ವ್ಯಾಪಾರವು ತೂಕದ ಮೇಲೆ ನಡೆಯುತ್ತದೆ. ಈ ಮುತ್ತಿನ ತೂಕವು ಚೌವಗಟ್ಟಿ ಇರುತ್ತದೆ. ಇದೊಂದು ವಿಲಕ್ಷಣ ತೂಕವಾಗಿರುವದು. ಅಡೀ ಕಟ್ಟಿದ ಚಿಕ್ಕ ಮುತ್ತುಗಳು ಮಾತ್ರ ಶೇಕಡಾ ಗಟ್ಟಿಯಲ್ಲಿ ಕ್ವಚಿತ್ ಮಾರಲಿಕ್ಕೆ ಸಿಗುವವು. ಆದರೆ ಚೌವಗಳಿಗೆ ಆಗುವಂಥ ಮುತ್ತು ಇದಕ್ಕೂ ಹಿರಿದು ಮುತ್ತುಗಳು ತೂಕದ ಮೇಲೇನೇ ತೆಗೆದುಕೊಳ್ಳಬೇಕಾಗುವದು. ಉರುಟು ಗಟ್ಟಿಯಾದ ಮುತ್ತು ಕಾಂತಿ ಇರುವ ಮುತ್ತುಗಳಿಗೆ ಇಲ್ಲಿ ಬಹಳ ಕ್ರಯವಿರುತ್ತದೆ. ಬಾಕಿ ದೇಶದಕಿಂತಲೂ, ಈ ದೇಶದವರು ಮುತ್ತು ಹೆಚ್ಚಿಗೆ ಉಪಯೋಗ ಮಾಡುವದರಿಂದ ಮುತ್ತಿನ ವ್ಯಾಪಾರವು ಇಲ್ಲಿ ಅತಿಶಯವಾಗಿ ನಡೆಯುವದು.

ರತ್ನಾದಿಗಳು—ವಜ್ರ, ಕೆಂಪು, ಪಚ್ಚೆ, ನೀಲ, ಪುಷ್ಯರಾಗ, ಗೋಮೇಧಿಕ, ವೈಡೂರ್ಯ ಮುಂತಾದ ರತ್ನಗಳ ವ್ಯಾಪಾರವು. ಈ ಪಟ್ಟಣದಲ್ಲಿ ಅತಿಶಯವಾಗಿ ನಡೆಯುತ್ತದೆ. ವಜ್ರದಲ್ಲಿ ಜಿಲಿಯಾನ, ವಲ್ಲಂದಿ, ಇಸ್ತಂಬೂಲಿ, ಪರಬ, ಎಂಬ ನಾಲ್ಕು ವಿಧವಾಗಿರುವವು. ಜಿಲಿಯಾನ ವಜ್ರಗಳು ಇಬ್ಬದೀಗೂ ಕಮಲಷೋಡದವು, ಎಲ್ಲ ತರದ ರತ್ನಗಳೂ ರತಿಗಟ್ಟಿ ತೂಕದಿಂದ ಮಾರಲ್ಪಡುತ್ತವೆ. (೧ ತೊಲೆಗೆ ೬೦ ರತಿ) ಜಿಲಿಯಾನ ರತಿ ೧ಕ್ಕೆ ೬೦ ರೂಪಾಯಿ ಮೇಲ್ಪಟ್ಟು ೧,೦೦೦ ರೂಪಾಯಿನ ವರೆಗೆ ಇರುತ್ತವೆ. ಇದರಂತೆ ಪಚ್ಚೆ ನೀಲ ಮುಂತಾದ ಬಾಕಿ ರತ್ನಗಳು ಅಗ್ಗವಾಗಿ ಸಿಗುವವು. ಇವುಗಳ ಕ್ರಯವು ಆಯಾಯ ಬಣ್ಣ ಮತ್ತು ನೀರು, ನಿಷ್ಕಳಂಕ ಇವುಗಳ ಮೇಲೆ ಅವಲಂಬಿಸಿರುತ್ತವೆ. ನಾವು ಮುತ್ತು ರತ್ನಗಳನ್ನು ನಮ್ಮ ಗಿರಾಕಿಗಳಿಗೆ ನ್ಯಾಯವಾದ ರೀತಿಯಿಂದ ಕ್ರಯ ಮಾಡಿ ಕಳಿಸುವೆವು. ಇದರ ಬಗ್ಗೆ ಮಾಲಿಕರ ಕಡೆಯಿಂದ ನಮಗೆ ಇಲ್ಲಿಯ ರೀತಿ ಪ್ರಕಾರ ಕಮಿಶನ್ ಸಿಗುತ್ತದೆ.

ರತ್ನ ಜಡಿತ ಆಭರಣಗಳು--ಕ್ರಾಸ್, ನೆಕ್ಲಸ್ ಪದಕಗಳು, ಚಿಕಂದ ನಮೂನೆ, ಬಾವಲಿ, ಉಂಗುರಗಳು, ಬೆಂಡೋಲೆಗಳು ಮುಂತಾದ ಸಮಸ್ತ ತರದ ರತ್ನ ಜಡಿತ ಆಭರಣಗಳನ್ನು ನಮ್ಮಿಂದ ಪಡಕೊಳ್ಳಬಹುದಾಗಿದೆ. ಇವುಗಳಲ್ಲಿ ಇಂಗ್ಲೀಷು ತರಹವಾಗಿ ಖುಲ್ಲಾ ಕಟ್ಟಿದಂಥವೂ, ದೇಶಿ ಮಾದ್ರಿಯಾಗಿ ಕುಂದಣ ಜಡಿಸಿದಂಥವೂ, ಹೀಗೆ ೨ ಮಾದ್ರಿ ಇರುತ್ತವೆ. ಕುಂದಣ ವಸ್ತುಗಳಿಗೆ ನಿಶ್ಚಯವಾದ ಬೆಲೆ ಕಟ್ಟುವದು ಕಷ್ಟ. ಯಾಕಂದರೆ ಕುಂದಣಗಾರರು ಹರಳಿನ ಕೆಳಗೆ ಬಣ್ಣದ ತಗಡಿನ ಮೇಲೆ ಕೂಡಿಸುತ್ತಾರಾದ್ದರಿಂದ ಅವುಗಳ ಬಣ್ಣ ಮುಂತಾದವು ನಿಶ್ಚಯಿಸಲು ಆಗುವದಿಲ್ಲ. ಇಂಗ್ಲೀಷ ಮಾದ್ರಿಯ ಖುಲ್ಲಾ ಕಟ್ಟಿಗೆಯ ಆಭರಣಗಳಿಗೆ ಹೆಚ್ಚಿಗೆ ಕ್ರಯ ಬೀಳುವದು. ಯಾಕಂದರೆ ರತ್ನಗಳ ನಿಜಸ್ವರೂಪವು ಯಾವಾಗಲೂ ವ್ಯಕ್ತವಿರುತ್ತಲ್ಲದೇ ಕಟ್ಟುವ ಕಸಬುಗಾರಿಕೆಯು ಹೆಚ್ಚು ಕೌಶಲ್ಯದ್ದಾಗಿರುವದು. ಆದ್ದರಿಂದ ಜನರು ನಿಜವಾದ ರತ್ನ ಸಂಗ್ರಹಿಸುವದಾದರೆ ಈ ತರದವುಗಳನ್ನೇ ಸಂಗ್ರಹಿಸಲು ನಾವು ಶಿಫಾರಸು ಮಾಡುತ್ತೇವೆ. ಹಲವು ತರದ ಮಾಟದ ನಾನಾ ವಿಧದ ರತ್ನಗಳ ಉಂಗರಗಳು ನಮ್ಮಲ್ಲಿ ಇರುತ್ತವೆ. ಬೇಕಾದವರು ತಮಗೆ ಇಷ್ಟವಿರ ಕ್ರಯದಲ್ಲಿ ಇಂಥಾ ಜಾತಿಯ ಉಂಗರ ಬೇಕೆಂತ ಬರೆದರೆ ಅದರಂತೇ ಕಳುಹಿಸುವೆವು. ಇದಲ್ಲದೆ ದಿಲ್ಲಿ, ಜಯಪುರ, ಮುಂತಾದ ಸ್ಥಳಗಳಲ್ಲಿ ತಯಾರಾದ ಕಮ್ಮಿ ಕ್ರಯದ ರತ್ನ ಜಡಿತ ಆಭರಣಗಳು ಇರುತ್ತವೆ. ಇವು ನೋಡಲಿಕ್ಕೆ ಸುಂದರ ಮತ್ತು ಡೌಲಾಗಿದ್ದು ಕ್ರಯ ಕಡಿಮೆಯಾಗಿರುವವು.

ಶಿಂಪಿ ಮುತ್ತು--ಇವರಲ್ಲಿ ಅನೇಕ ತರದ ಭೇದಗಳಿರುತ್ತವೆ. ಇದಲ್ಲದೇ ಫ್ಲೋರ ಊರಿನಲ್ಲಿ ಮೇಣದ ಮುತ್ತುಗಳು ಶಿಂಪಿ ಮುತ್ತುಗಳೆಂದು ಮಾರಲ್ಪಡುತ್ತವೆ. ಆದರೆ ನಿಜವಾದ ಶಿಂಪಿ ಮುತ್ತುಗಳಲ್ಲಿ ಕಾಳವನ್ನು ತುಂಬಿರುತ್ತಾರೆ. ಮೇಣದ ಮುತ್ತುಗಳಿಗಿಂತಲೂ ಶಿಂಪಿ ಮುತ್ತು ಭಾರವಾಗಿರುವದು. ಈ ಶಿಂಪಿ ಮುತ್ತುಗಳಲ್ಲಿ ಅಡಿಗೆ ೧| ರೂಪಾಯಿ, ೧|| ರೂಪಾಯಿ, ೧||| ರೂಪಾಯಿ, ೩ ರೂಪಾಯಿ. ಈ ಭೇದವುಳ್ಳವುಗಳಾಗಿರುತ್ತವೆ. ಬೇಕಾದ ತರದ್ದನ್ನು ಕಳುಹಿಸುವೆವು.

ಕಾಶ್ಮೀರ ಶಾಲುಗಳು--ಇತ್ತಲಾಗಿ ಕಾಶ್ಮೀರ ಶಾಲಿನ ನಮೂನೆಯಂಥಾವೇ ವಿಲಾಯತಿಯ ಶ್ಯಾಲುಗಳು ತಯಾರಾಗಿ ಬರುತ್ತವೆ. ಆದರೆ ಅವುಗಳಿಗೆ ಅಂಚು ಹಚ್ಚಿರುವದಿಲ್ಲ. ಕಾಶ್ಮೀರ ಶಾಲುಗಳಿಗೆ ಅಂಚು ಹಚ್ಚಿದ್ದಿದ್ದು [illegible]

ತರ ತರಗೆಯದಾಗಿರುವದು. ಕಾಶ್ಮೀರ ಶಾಲುಗಳು ಜೋಡಿ ೧ಕ್ಕೆ ೨೦ ರೂಪಾಯಿ ಮೊದಲುಗೊಂಡು ೨೦೦-೩೦೦ ರೂಪಾಯಿಗಳ ವರಿಗೆ ಕ್ರಯ ಬಾಳತಕ್ಕವು ಇರುತ್ತವೆ. ಜೋಡಿ ೧ಕ್ಕೆ ೫೦ ರೂಪಾಯಿಗೆ ಮೇಲ್ಪಟ್ಟ ಶಾಲುಗಳಲ್ಲಿ ನೂಲಿನ ಮಿಶ್ರಣವಿರುವದಿಲ್ಲ. ಕಡಿಮೆ ಕ್ರಯದ ಶಾಲುಗಳಲ್ಲಿ ನೂಲು ಮಿಶ್ರಣವಿರುವದು. ಇದರಲ್ಲಿ ೬ ಮೊಳ ಉದ್ದ ೩ ಮೊಳ ಅಗಲದವೂ ಮತ್ತು ಬೇರೆ ಬೇರೆ ತರದ ರಂಗಿನವೂ ಇರುವವು. ಕಾಶ್ಮೀರದಿಂದಲೇ ನಾವು ಸೀದಾ ತರಿಸುತ್ತೇವಾದಕಾರಣ ನಾವು ಸ್ವಲ್ಪ ಕಮಿಷನ್ನಿನಮೇಲೆ ಕೊಡಲು ಸಮರ್ಥರಾಗುವೆವು.

ಜರಿ ಪೀತಾಂಬರಗಳು—ಇದರಲ್ಲಿ ಗಂಡಸರದೂ ಹೆಂಗಸರದೂ ಹೀಗೆ ೨ ಪ್ರಕಾರದ ವಿರುತ್ತವೆ. ಗಂಡಸರುಪಯೋಗಿಸುವ ಪೀತಾಂಬರಗಳು ೬ ಮೊಳದ ಮೊದಲುಗೊಂಡು ೧೨ ಮೊಳದವರಿಗಿನವು ಇರುತ್ತವೆ. ಹೆಂಗಸರುಡುವವು ೧೬-೧೮ ಮೊಳದ ವಿರುತ್ತವೆ. ಗಂಡಸರುಡುವ ಪೀತಾಂಬರಗಳಿಗೆ ೮ ರೂಪಾಯಿ ಮೊದಲುಗೊಂಡು ೪೦ ರೂಪಾಯಿಗಳವರಿಗೂ ಹೆಂಗಸರುಡುವವು ೪೦ ರೂಪಾಯಿಗೆ ಮೇಲ್ಪಟ್ಟು ೧೫೦-೨೦೦ ರೂಪಾಯಿವರಿಗೂ ಇರುವವು. ಇವುಗಳಲ್ಲಿ ಪೈಠಣಿ, ಥನ್ನೊಡ, ಅಮದಾಬಾದ, ಯವಲೆ, ಈ ಸ್ಥಳಗಳಲ್ಲಿ ತಯಾರಾಗುವವು ಇರುತ್ತವೆ. ಹಣ ಹೆಚ್ಚಾದಂತೆ ಮಾಲು ಸಹ ಒಳ್ಳೇ ತರದ್ದು ಸಿಗುವದು.

ಸಾದಾ ಪಟ್ಟೆ ಮಡಿಗಳು—ಸಾದಾ ಪಟ್ಟೆಗಳಲ್ಲಿ ಬೇಕಾದ ತರದವನ್ನು ನಾವು ಕಳುಹಿಸಿಕೊಡುವೆವು. ಮುಂಬಯಿ ಗಿರಣಿಯಲ್ಲಿ ತಯಾರಾದವೂ ಕಾಶಿ, ಅಮದಾಬಾದ, ಯವಲೆ, ಹುಬ್ಬಳ್ಳಿ ಈ ಸ್ಥಳದವೂ ಸಹ ನಮ್ಮ ಕಡೆಗೆ ಸಿಕ್ಕಾವು. ಉತ್ತಮ ತರದ ಬಂಗಾಲಿ ಪೀತಾಂಬರಗಳು ಇರುತ್ತವೆ. ಇದಲ್ಲದೇ ಬಂಗಾಲಿ ರೇಶ್ಮೆಯ ಬಾಬತ್ತು ಗಂಡಸರ ಮಡಿಗಳೂ ಹೆಂಗಸರುಡುವ ಚಿಕ್ಕ ಮಡಿಗಳೂ ಸಹ ಇರುತ್ತವೆ. ಬೇಕಾದವರು ಜಿನಸಿನಬಗ್ಗೆ ನಮಗೆ ಬರೆದರೆ ಕೂಡ್ಲೇ ಅನುಕೂಲವಿದ್ದ ಮಾರ್ಗದಿಂದ ಕಳುಹಿಸುವೆವು.

ಬನಾರಶಿ ವಸ್ತ್ರಗಳು—ಬನಾರಸ್ ಕಾಶಿ ಇಲ್ಲಿ ತಯಾರಾಗುವ ಉತ್ತಮ ತರದ ಉಪರ್ಣಾ, ಛಾದರ, ದುಪೇಟಾ, ಸದ. ರೇಶ್ಮೆ ಜರಿಯ ಬಾಬತ್ತು ಹಲವು ತರದ ವಸ್ತ್ರಗಳು ಸಹ ನಮ್ಮ ದ್ವಾರಾ ನಮ್ಮ ಗ್ರಾಹಕರಿಗೆ ಸುಲಭವಾಗಿ ದೊರೆಯಬಹುದಾಗಿದೆ.

ವಿಲಾಯತಿ ತರ ತರದ ವಸ್ತ್ರಗಳು—ನಾನಾತರದ ಚೀಟುಗಳು ಮಲಮಲ್, ಜಿನಾತು, ಫ್ಲ್ಯಾನೆಲ್, ಸರ್ಜ, ಮುಂತಾದವೂ ಸಕಲಾತಿಗಳು ಬುರ್ನೀಸುಗಳು

ನಾನಾತರದ ಹೊಸ ಹೊಸ ನಮೂನೆ ಪಂಚೆಗಳೂ, ಧೋತ್ರಗಳೂ, ಸೀರೆ ವಸ್ತ್ರಗಳೂ ಇಂಥ ಯಾವದೊಂದು ಮಾಲುಗಳನ್ನಾದರೂ ಠೋಕ,ಅಥವಾ ಚಿಲ್ಲರೆಯಾಗಿ ಸಹ ನಮ್ಮ ದ್ವಾರ ಪಡಕೊಳ್ಳಬಹುದಾಗಿದೆ. ಠೋಕ ಕ್ರಯ ಮಾಡಿಸತಕ್ಕವರು ಕೆಲವು ಹಣ ಮುಂಗಡ ಕಳುಹಿಸಬೇಕು.

ಬನಾತುಗಳು—ನಮ್ಮಲ್ಲಿ ಹಲವು ಬಣ್ಣದ ನಾನಾತರದ ಬನಾತುಗಳಿರುವವು. ಡಬ್ಬಲ್ ಪನ್ನಾ ಇರುವದು. ವಾರು ೧ಕ್ಕೆ ೧೦ ಆಣೆಗೆ ಮೇಲ್ಪಟ್ಟು ೬೦ ರೂಪಾಯಿಯ ವರಿಗಿನ ಕ್ರಯದವು ಇರುತ್ತವೆ. ಆದರೆ ವಾರಿಗೆ ೬ ರೂಪಾಯಿಗೆ ಮೇಲ್ಪಟ್ಟ ಬನಾತುಗಳು ಶುದ್ಧವಾಗಿ ಉತ್ತಮವಿರುತ್ತದೆ. ಆದರೆ ಇದಕ್ಕೂ ಮೇಲ್ಪಟ್ಟ ಕ್ರಯದ ಬನಾತುಗಳು ಹೆಚ್ಚು ಶ್ರೇಷ್ಠತರವಾಗಿರುವದು.

ತಯಾರಾದ ಡ್ರೆಸ್ಸುಗಳು—ನಮ್ಮಲ್ಲಿ ನಾನಾತರದ ಬೇರೆ ಬೇರೆ ನಮೂನೆಯ ಬಾಬತ್ತು ಹೊಲಿಸಿ ತಯಾರಿಸಿದ ಕೋಟುಗಳೂ, ಪಾಟ್ಲೋನುಗಳೂ, ಶರ್ಟ್, ಖಮೀಜ್, ಬನೀನ್, ವಾಸಕೋಟು, ಶಾರ್ಟಕೋಟು, ಅಂಗಕೋಟು, ಜವ್ಹರಕೋಟು, ರೇನ್‌ಕೋಟು ಮುಂತಾದ ಸಾಮಾನುಗಳು ಸಿದ್ಧವಾಗಿರುವವು. ಯಾರಿಗೆ ಯಾವತರದ ಬಟ್ಟೆಗಳ ಬಾಬತ್ತು ಯಾವತರದ ಡ್ರೆಸ್ಸನ್ನು ಬೇಕಾದರೂ ತಯಾರಿಸಿದ್ದಾಗಲೀ ಅಥವಾ ತಯಾರಿಸಿ ಸಹ ಕಳುಹಿಸಿಕೊಡುವೆವು. ೧೦೦ ರೂಪಾಯಿ ಕ್ರಯದ ವರಿಗಿನ ಎಲ್ಲಾ ತರದ ವಸ್ತ್ರದ ಕೋಟುಗಳೂ ಬೇರೆ ತರದ ಡ್ರೆಸ್ಸುಗಳೂ ನಮ್ಮಲ್ಲಿ ಸಿದ್ಧವಾಗಿರುವವು. ಆದರೆ ನಮ್ಮ ಗ್ರಾಹಕರಿಗೆ ನಾವು ಪ್ರಾರ್ಥಿಸುವದೇನಂದರೆ, ನಾವು ಹ್ಯಾಗೆ ಡ್ರೆಸ್ಸುಗಳನ್ನು ಸುಲಭವಾಗಿ ಕೊಟ್ಟೇವೋ ಹಾಗೆ ಅವರು ಸ್ವತಹಾ ಬಟ್ಟೆ ಕೊಂಡು ಕೊಂಡು ಮಾಡಿಸಿಕೊಳ್ಳಲಿಕ್ಕೆ ಸಮರ್ಥರಾಗಲಾರರು.

ಟೊಪ್ಪಿಗೆಗಳು-ನಾನಾತರದ ಮಖಮಲ್ಲಿನ ಟೊಪ್ಪಿಗಳು ವಿಲಾಯತಿ ಬನಾವಟಿ ಕಾಶ್ಮೀರ ಟೊಪ್ಪಿಗೆಗಳೂ, ತಾಜಾ ಕಾಶ್ಮೀರದ ಟೊಪ್ಪಿಗೆಗಳೂ, ರೇಶ್ಮೆ ಕಸೂತಿಯ ಟೊಪ್ಪಿಗೆಗಳೂ, ಯೂರೋಪಿಯನ್, ಯಹೂದಿ, ಮುಸಲ್ಮಾನ, ಕ್ರಿಶ್ಚಿಯನ್ ಬಾಬತು ತರತರದ ನಮೂನೆಯ ಟೊಪ್ಪಿಗೆಗಳೂ ನಾನಾತರದ ತಾಜಾ ವೆಲ್ ಜರಿಯ ಕಸೂತಿಯ ಟೊಪ್ಪಿಗೆಗಳೂ ಸಹ ನಮ್ಮಲ್ಲಿ ಸಿಗುವವು. ಇವುಗಳ ಕ್ರಯದ ತಪಸೀಲನ್ನು ವಿವರಿಸುವದು ಕಠಿಣವಾದ್ದರಿಂದ ಗ್ರಾಹಕರು ತಮಗೆ ಇಂತಿಷ್ಟು ಕ್ರಯದವನ್ನು ಕಳುಹಿಸಬೇಕಾಗಿ ಬರೆದು ತಿಳಿಸಿದರೆ ಅದರಂತೆ ಅವರಿಗೆ ಕಳುಹಿಸಿಕೊಡುವೆವು. ಇದಲ್ಲದೇ ಜರಿಯ ಕೋರುಗಳೂ

ಕಲಾಬತ್ತಿನ ಅಂಚುಗಳೂ ಹುಡುಗರ ಡ್ರೆಸ್ಸುಗಳೂ ಜರಿಯಿಂದ ಕಸೂಟದ ಭಾರಿ ತರದ ಡ್ರೆಸ್ಸುಗಳೂ ಸಹ ಸಿಗುವವು.

ಚೈನಾರೇಶ್ಮೆ ವಸ್ತ್ರಗಳು-ಇತ್ತಲಾಗಿ ಮುಂಬಯಿಯಲ್ಲಿ ಪಾರ್ಶಿ, ಮುಸಲ್ಮಾನಿ ಮುಂತಾದ ಸ್ತ್ರೀಯರು ಧರಿಸುವ ಚೈನಾ ನಮೂನೆ ರೇಶ್ಮೆ ವಸ್ತ್ರಗಳನ್ನು ನೋಡಿ ಹಿಂದು ಸ್ತ್ರೀಯರು ಸಹ ಶೀರೆ ಕುಪ್ಪಸಗಳನ್ನು ರೇಶ್ಮೆ ಬಾಬತ್ತು ಇರುವ ಚೈನಾ ವಸ್ತ್ರಗಳನ್ನು ಉಪಯೋಗಿಸಲು ಪ್ರಾರಂಭಿಸಿರುತ್ತಾರೆ. ಈಗ ಹಿಂದೂಜನರ ಫ್ಯಾಶನ್ನಿಗೆ ಸರಿಯಾಗಿ ೧೬ ಮಳ ೧೮ ಮಳ ೨೦ ಮಳದ ಚೈನಾ ಶೀರೆಗಳು ಬರುತ್ತವೆ. ಇವುಗಳಿಗೆ ಅಂಚು ಸೆರಗುಗಳೇನೂ ಇರುವದಿಲ್ಲ. ಇವಕ್ಕೆ ಅಂಚಿಗೆ ಜರಿಯ ಕೋರುಗಳನ್ನು ಹಚ್ಚಿಸಿಕೊಂಡು ಗುಜರಾತಿ, ಭಾಟ್ಯ, ಪರಭು, ಶೇಣವೀ ಮುಂತಾದ ಜಾತಿಯ ಹೆಂಗಸರು ಉಡುವದನ್ನು ನೋಡಿ ಬ್ರಾಹ್ಮಣ ಹೆಂಗಸರು ಸಹ ಈ ತರದ ಡ್ರೆಸ್ಸುಗಳನ್ನೇ ಉಡಲು ಪ್ರಾರಂಭಿಸಿರುತ್ತಾರೆ. ಚೈನಾದ ಉತ್ತಮ ನಮೂನೆಯ ಕರವಸ್ತ್ರಗಳು ದಮಾಸ್ಕ, ಕಿನ್‌ಕಾಪ, ಕುತನಿ ಮುಂತಾದ ಹಲವು ತರದ ವಸ್ತ್ರಗಳು ಸರ್ವೋತ್ಕೃಷ್ಟವಾದವು ನಮ್ಮ ಕಡೆಗೆ ಸಿಗುವವು. ಅಪೇಕ್ಷೆಪಟ್ಟು ಬರೆದವರಿಗೆ ನಾವು ಅವರ ಇಚ್ಛಾನುಸಾರ ಕಳುಹಿಸಿಕೊಡುವೆವು.

ಘಡಿಯಾರಗಳು-ಘಡಿಯಾರಗಳಲ್ಲಿ ಅನೇಕ ತರದವು ಮತ್ತು ಅನೇಕ ತರದ ಕ್ರಯದವು ಇರುತ್ತವೆ. ಕಿಸೆಯ ಘಡಿಯಾರಗಳಲ್ಲಿ ೫ ರೂಪಾಯಿ ಮೊದಲುಗೊಂಡು ೫೦೦ ರೂಪಾಯಿಗಳ ವರೆಗಿನ ಕ್ರಯದವು ಇರುತ್ತವೆ. ನಾವು ನಮ್ಮ ಗ್ರಾಹಕರಿಗೆ ಇಷ್ಟೇ ಸೂಚಿಸುತ್ತೇವಲ್ಲ ಹ್ಯಾಗೆ ಹೆಚ್ಚಿಗೆ ಕ್ರಯದ ಘಡಿಯಾರಗಳನ್ನು ಅಪೇಕ್ಷಿಸುವಿರೋ ಹಾಗೆ ಒಳ್ಳೇ ತರದ ಘಡಿಯಾರಗಳು ನಿಮಗೆ ಸಿಗುವವು. ಘಡಿಯಾರಗಳ ಕ್ರಯವು ಅವುಗಳ ಮಜಬೂತಿಯ ಮೇಲೂ ಒಳ್ಳೇತನದ ಮೇಲೂ ಅವಲಂಬಿಸಿರುವದು.

ಚಂದ್ರಕಾಂತ ಶಿಲೆಯ ಕನ್ನಡಕಗಳು.

ನಾವು ಕಡಿಮೆ ತರದ ಕಾಜಿನ ಕನ್ನಡಕಗಳನ್ನು ಮಾರುವದಿಲ್ಲ. ನಮ್ಮ ಕನ್ನಡಕಗಳು ತಣುಕರವಾದ ಶಿಲೆಯ ಕನ್ನಡಕಗಳಾಗಿರುವವು. ಶಿಲೆದ ಕನ್ನಡಕಗಳನ್ನು ಹಾಕಿಕೊಳ್ಳುವದರಿಂದ ಕಣ್ಣಿಗೆ ಹೆಚ್ಚು ಪ್ರಯೋಜನವಿರುವದು. ಶಿಲೆದ ಕನ್ನಡಕಗಳಲ್ಲಿ ೩॥ ರೂಪಾಯಿಗೆ ಕಡಿಮೆ ಕ್ರಯದ ಕನ್ನಡಕಗಳು ಇರುವದಿಲ್ಲ. ಹೆಚ್ಚಿಗೆ ಹಣ ಕೊಟ್ಟಂತೆ ಒಳ್ಳೇ ತರದ ಪದಾರ್ಥಗಳು ಸಿಗುವವು.

ಪ್ರಸ್ತಾವನೆ.

ಇತ್ತೀಚಾಗಿ ಅನೇಕಪ್ರಕಾರದ ಔಷಧಗಳು ಅನುಭವ ಸಿದ್ಧವಾಗಿ ಪಾರು ತ್ಪಲಿಷ್ಟು, ಅವುಗಳ ವಿವರಣೆಯನ್ನು ಬಹು ಬಾಹುಳ್ಯವಾಗಿ ಬರೆಯುತ್ತಿರುವದರಿಂದಲೂ, ಒಂದೇ ಔಷಧವು ನೂರಾರು ರೋಗಕ್ಕೆ ಬರುವದೆಂದು ತೋರುತ್ತಿರುವದರಿಂದಲೂ, ಅದರ ನ್ಯಾಯವಾದ ಉಪಯೋಗವು ಜನರಿಗೆ ಆಗುವದಿಲ್ಲ. ಇದನ್ನು ತಿಳಿದು ಆ ಔಷಧಗಳ ಯೋಗ್ಯ ಉಪಯೋಗವು ಜನರಿಗೆ ಆಗಬೇಕೆಂಬದಕ್ಕಾಗಿ, ಮೊದಲಿಗೆ ರೋಗಗಳ ಹೆಸರನ್ನು ಅವುಗಳ ಮುಖ್ಯ ಸ್ವಭಾವವನ್ನು ಸಹ ವಿವರಿಸಿ ಅದರ ಕೆಳಗೆ ತಕ್ಕವಾದ ಔಷಧಗಳ ಹೆಸರನ್ನು ಕಾಣಿಸಿರುತ್ತೇವೆ.

ಒಂದು ಔಷಧದ ಗುಣವು ಒಂದೇಸರ್ತಿ ಅಥವಾ ಒಂದೇ ಬಾಟ್ಲಿ ಸೇವನೆ ಮಾಡುವದರಿಂದ ಅನುಭವಕ್ಕೆ ಬರಲಾರದು. ಆ ರೋಗ ಉತ್ಪನ್ನವಾಗುವದಕ್ಕೆ ಎಷ್ಟು ದಿವಸಗಳು ಬೇಕಾಗುವವೋ ಅದೇ ದಿವಸಗಳು ಅದರ ನಿಃಶೇಷತೆಗೆ ಬೇಕಾಗುವದು. ತಾತ್ಕಾಲಿಕವಾದ ರೋಗವು ಬೇಗನೆ ಗುಣವಾದಂತೆ ಘನ ರೋಗಗಳು ಆಗಲಾರವು. ಇವುಗಳು ಪರಿಹಾರವಾಗುವದಕ್ಕೆ ಹೆಚ್ಚು ದಿವಸ ಔಷಧ ಸೇವನೆ ಮಾಡಬೇಕಾಗುವ, ಆದ್ದರಿಂದ ಯಾವ ರೋಗಕ್ಕೆ ಎಷ್ಟು ಔಷಧಗಳು ಬೇಕಾದಾವೆಂಬದನ್ನು ಸಹ ಸೂಚಿಸಿದ್ದೇವೆ.

ನಮ್ಮಿಂದ ಔಷಧಗಳನ್ನು ಹೊಂದಲಿಚ್ಛೆಯುಳ್ಳವರು ತಮ್ಮ ರೋಗದ ವಿದ್ಯಮಾನಗಳನ್ನು ತಿಳಿದಷ್ಟುಮಟ್ಟಿಗೆ ಬರೆದು ತಿಳಿಸಿದರೆ ; ಆಬಗ್ಗೆ ನಾವು ಒಳ್ಳೇ ವಿಚಾರದಿಂದಲೂ, ಡಾಕ್ಟರ ಜನರ ಸಲಹೆಯಿಂದಲೂ ಆ ತಕ್ಕ ಯೋಗ್ಯವಾದ ಔಷಧವನ್ನು ಕಳುಹಿಸುವೆವು.

ಪ್ರತಿ ಒಂದು ಔಷಧದ ಸಂಗಡ ಅದರ ಅನುಪಾನ ವಿಷಯವು ತಿಳಿಸಲ್ಪಟ್ಟಿದ್ದೀತು. ಇದಲ್ಲದೆ ಅಗತ್ಯ ಕಂಡರೆ, ನಾವು ಪತ್ರದ್ವಾರದಿಂದಲೂ ಬರೆದು ತಿಳಿಸುವೆವು, ಈ ಯಾದಿಯಲ್ಲಿ ಔಷಧಗಳ ಕ್ರಯವನ್ನು ಮಾತ್ರ ತೋರಿಸಿದ್ದೇವಲ್ಲದೆ ಕಳುಹಿಸುವ ಖರ್ಚನ್ನು ನಮೂದು ಮಾಡಲಿಲ್ಲ. ಖರ್ಚು ಪ್ರತ್ಯೇಕ ಬೀಳುವದು.

ಮ್ಯಾನೇಜರ್,

ಕೆನರಾ ಅಂಡ್ ಮೈಸೂರ್ ಟ್ರೇಡಿಂಗ್ ಏಜನ್ಸಿ ಆಫೀಸ್,

ಮಾರ್ಕೆಟ್ ಪೋಸ್ಟ ಮುಂಬಯಿ.

ಕೆನರಾ ಅಂಡ್ ಮೈಸೂರ್ ಟ್ರೇಡಿಂಗ್ ಏಜನ್ಸಿ ಆಫೀಸಿನವರ ಔಷಧಗಳ ಅನುಕ್ರಮಣಿಕೆ.

ನಂ॥	ರೋಗದಮೇಲೆ ಔಷಧ.	ಕ್ರಯ ರೂ.	ನಂ॥	ರೋಗದಮೇಲೆ ಔಷಧ.	ಕ್ರಯ ರೂ.
೧	ಪ್ರಮೇಹ ರೋಗ	೩	೨೮	ಮೂಲವ್ಯಾಧಿ	೨॥
೨	ಧಾತು ಸ್ರಾವ	೪	೨೯	ವ್ರಣ	೨
೩	ಮರ್ಮ ವ್ರಣ (ಟಾಕಿ)	೨॥	೩೦	ಕೆಮ್ಮು	೨
೪	ಮೈಮೇಲೆದ್ದು ಒಡೆಯುವ ಟಾಕಿ	೬	೩೧	ಬಾಳಂತ ಕುತ್ತು	೫
೫	ಕಿಲ್ಲಪಿರಂಗಿ ಹುಣ್ಣು	೮	೩೨	ದಮ್ಮಿನ ರೋಗ	೩॥
೬	ಕಲೆ ನಿಲ್ಲುವ ಗರ್ಭದ ಕ್ಷತೆ	೩।॥	೩೩	ಕಿವಿಶೂಲೆ	೨
೭	ಉಷ್ಣಕಸು	೩।॥	೩೪	ನೇತ್ರರೋಗ	೨
೮	ರಕ್ತ ಕೆಟ್ಟದ್ದರಿಂದಾಗುವ ಖಜ್ಜಿ	೩।॥	೩೫	ಗಂಡಮಾಲೆ	೮
೯	ತೊಡೆವಾಳ	೬	೩೬	ನಾರು ಹುಣ್ಣು	೨॥
೧೦	ವೀರ್ಯ ತಿಳುವಾಗೋಣ	೫	೩೭	ಕಸುವಿನ ಉಪದ್ರವ	೧॥
೧೧	ಮಧ್ಯಂತ್ರದಲ್ಲಿ ಬಂದ ನಪುಂಸಕತ್ವ	೫	೩೮	ತ್ವಗ್ಛೇದನ	೧
೧೨	ಭಗಂಧರರೋ	೫।	೩೯	ರುತ್ತು ಖಜ್ಜಿ	೧
೧೩	ಧಾತು ನಷ್ಟತೆ	೪	೪೦	ಶೀತಜ್ವರ	॥
೧೪	ಅಶಕ್ತತೆ	೬	೪೧	ಚಾತುರ್ಥಿಕ ಜ್ವರ	೧
೧೫	ಜ್ವರಗಡ್ಡೆ	೩॥	೪೨	ಸಂಗ್ರಹಣಿ ಅತಿಸಾರ	೩
೧೬	ಗಜಕರ್ಣ	।=	೪೩	ಹುಡುಗರ ಶಕ್ತಿ ಕ್ಷೀಣತೆ	೨
೧೭	ಕೊಲರಾ (ವಾಂತಿಭ್ರಾಂತಿ)	೧	೪೪	ನೆಗಡಿ	೧
೧೮	ಪಚನ ಶಕ್ತಿ ಕ್ಷೀಣತೆ	।=	೪೫	ಕೂದಲುದುರುವ ರೋಗ	೧
೧೯	ಪಿತ್ತರೋಗ	೩	೪೬	ಕೂದಲು ಬೆಳೆಯುವದಕ್ಕೆ	೧
೨೦	ತಲೆಶೂಲೆ	।॥	೪೭	ಬಿಳೀ ಕೂದಲು ಕಪ್ಪಾಗುವ ಔಷಧ	೧
೨೧	ಪತ್ತಲೆಶೂಲೆ	೧॥	೪೮	ಕಣ್ಣಿಗೆ ತಂಪುಕೊಡುವದಕ್ಕೆ	೧।
೨೨	ಅಜೀರ್ಣ ರೋಗ	॥	೪೯	ಮೇಂದು ವೃದ್ಧಿ	।॥=
೨೩	ಹೊಟ್ಟೆಶೂಲೆ	೮	೫೦	ಪ್ರಾಣ ಸಂಜೀವನ	೩।
೨೪	ದಂತ ರೋಗ	।÷	೫೧	ಸರ್ಪದಂಶ.	೨
೨೫	ಕಾಮಾಲೆ ರೋಗ	೬	೫೨	ನಾಯಿ ಕಚ್ಚಿದ್ದಕ್ಕೆ	೨।
೨೬	ಹೆಂಗಸರ ಮೈಯಿಂದ ಹೋಗುವದು	೩	೫೩	ಮಲಮೂತ್ರ ಸ್ವಚ್ಛತೆ	।॥
೨೭	ಮುಟ್ಟಾಗುವ ಹೊಟ್ಟೆಕಚ್ಚಣ	೩॥	೫೪	ಕಫರೋಗ	೧॥

☞ ಈ ಔಷಧಗಳ ಮತ್ತು ರೋಗಗಳ ಮಾಹಿತಿಯನ್ನು ತಿಳಿಯತಕ್ಕವರು ಆಯಾಯ ನಂಬರಿನಮೇಲೆ ಮುಂದೆ ಬರದಿರುವ ಸಂಗತಿಯನ್ನು ಓದಿಕೊಳ್ಳಬೇಕು.

೧. ಪ್ರಮೇಹ ರೋಗವು.

ದುರ್ವ್ಯಭಿಚಾರದಿಂದ ಪುರುಷರಿಗಾಗಲೀ, ಸ್ತ್ರೀಯರಿಗಾಗಲೀ, ಪ್ರಮೇಹ ವೆಂಬ ರೋಗ ಪ್ರಾಪ್ತವಾಗುವದು. ಇದರಲ್ಲಿ ಕೆಂಪು, ಕಪ್ಪು, ಹಳದಿ ಈ ವರ್ಣಗಳಿಂದ ಧಾತುಸ್ರಾವವಾಗುವದು. ಮೂತ್ರವಾಗುವಾಗ ಉರಿಯೋಣ, ಚೇತನವಾದರೆ ಹಿಡಿಯೋಣ, ಇವೇ ಮುಂತಾದ ವಿಕಾರಗಳು ಈ ರೋಗದ ಮುಖ್ಯ ಗುಣಗಳಾಗಿರುವವು. ಇದರಬಗ್ಗೆ ನಮ್ಮಲ್ಲಿ "ಪ್ರಮೇಹಕುಠಾರ" ವೆಂಬ ಸರ್ವೋತ್ಕೃಷ್ಟ ಔಷಧವಿರುವದು. ಒಂದೇ ದಿವಸದಲ್ಲಿ ಔಷಧದ ಮಹತ್ವವು ತಿಳಿಯುವದು. ಒಬ್ಬನಿಗೆ ೨ ಬಾಟ್ಲಿಗಳು ಬೇಕಾಗುವವು. ಹಳೇ ರೋಗವಿದ್ದರೆ ೩ ಬಾಟ್ಲಿಗಳನ್ನು ಸೇವಿಸಬೇಕು. ಕ್ರಯ ಬಾಟ್ಲಿ ೧ಕ್ಕೆ ೧ ರೂಪಾಯಿ.

೨. ಧಾತುಸ್ರಾವ.

ಮನುಷ್ಯರಿಗೆ ಬಿಳೇ ವರ್ಣದಿಂದ ಧಾತುಸ್ರಾವವಾಗತಕ್ಕದ್ದೆಂದು ರೋಗ ವಿಧೆ. ಇದು ವ್ಯಭಿಚಾರ ದೋಷದಿಂದಲೂ, ಕೆಲವರಿಗೆ ಸ್ವಾಭಾವಿಕವಾದ ರೋಗದಿಂದಲೂ, ಹೋಗುವದು. ಆದರೆ ಪ್ರಮೇಹದಂತೆ ಉರಿಯೋಣ, ಹಿಡಿತ, ಮುಂತಾದ ವಿಕಾರಗಳಿದಕ್ಕಿರುವದಿಲ್ಲ. ಈ ರೋಗವುಳ್ಳವರು ನಮ್ಮಲ್ಲಿ ಔಷಧವನ್ನು ಅಪೇಕ್ಷಿಸುವದಾದರೆ ತಮ್ಮ ರೋಗದ ಸ್ಥಿತಿಯನ್ನು ಕುರಿತು ವಿವರಿಸಿ ಬರೆಯಬೇಕು. ಒಬ್ಬನಿಗೆ ೪ ರೂಪಾಯಿನ ಔಷಧ ಬೇಕಾಗುವದು.

೩. ಮರ್ಮ ವ್ರಣ.

ವ್ಯಭಿಚಾರ ದೋಷದಿಂದ ಪುರುಷರಿಗೆ ಜನ್ಯವಾದ "ಟಾಕಿ" ಎಂಬ ಒಂದು ತರದ ಹುಣ್ಣಾಗುವದುಂಟು. ಮೃದುಸ್ಥಾನದಲ್ಲಿ ಮೊದಲಿಗೆ ಚಿಕ್ಕ ಬೊಕ್ಕೆಗಳೆದ್ದು ಅನಂತರ, ಅವು ಸುಟ್ಟ ಗುಳ್ಳೆಯಂತೆ ಬೆಳ್ಳಗಾಗಿ ಹಿರಿದಾಗಿ ಹುಣ್ಣಾಗಿ ಬಹಳ ತೊಂದರೆಯನ್ನು ಕೊಡುವದಲ್ಲದೆ ಭಯಂಕರ ಸ್ವರೂಪವನ್ನು ತಾಳುವದು. ಇದರಬಗ್ಗೆ ಹೊಟ್ಟೆಗೆ ತೆಗದುಕೊಳ್ಳುವದಕ್ಕೂ ಹಚ್ಚುವದಕ್ಕೂ ನಮ್ಮಲ್ಲಿ ಔಷಧಗಳಿರುವವು. ಒಬ್ಬನಿಗೆ ೨। ರೂಪಾಯಿನ ಔಷಧಗಳು ಬೇಕಾಗುವವು.

೪. ಮೈಮೇಲೆದ್ದು ವದೆಯುವ ಟಾಕಿ.

ಗರ್ಮಿ ರೋಗವು ಶರೀರದಲ್ಲಿ ವ್ಯಾಪಿಸುವದರಿಂದ ರಕ್ತವನ್ನೆಲ್ಲ ಕೆಡಿಸಿ, ಅದು ಮೈಮೇಲೆಲ್ಲ ಹುಣ್ಣಾಗಿ ಹೊರಬೀಳುವದು. ಈ ರೋಗವು ಮೋಹಿನ

ರೋಗಕ್ಕಿಂತಲೂ ...ಕರವಾಗಿರುವದು. ಇದರಬಗ್ಗೆ ಹೊಟ್ಟೆಗೆ ಕೊಳ್ಳುವದಕ್ಕೂ ಮೈಗೆ ಹಚ್ಚುವದಕ್ಕೂ ಔಷಧವಿರುವದು. ಒಬ್ಬನಿಗೆ ೬ ರೂಪಾಯಿನ ಔಷಧ ಬೇಕಾಗುವದು.

೫. ಕಿಲ್ಲಪಿರಂಗಿ ಹುಣ್ಣು.

ಗರ್ಮಿ ರೋಗದಿಂದ ಮೈಮೇಲೆದ್ದು ಒಡೆಯುವ ಟಾಕಿಯಿಂದಾದ್ದೇ ಬೇರೊಂದು ತರದ ಕೆಟ್ಟ ಹುಣ್ಣಾಗುವದುಂಟು. ಇದು ಸಂದು ಸಂದುಗಳಲ್ಲಿ ಮಾತ್ರವೇ ಹುಣ್ಣಾಗಿ ಕೊಳೆಯುತ್ತಾ ಬರುವದು. ಒಂದೊಂದು ವೇಳೆ ಅವುಗಳಲ್ಲಿ ಕ್ರಿಮಿ ಬೀಳುವದು ಸಹ ಉಂಟು. ಇದರಬಗ್ಗೆ ಹಚ್ಚುವದಕ್ಕೂ ತಿನ್ನುವದಕ್ಕೂ ಒಬ್ಬನಿಗೆ ಬೇಕಾಗುವಷ್ಟು ಔಷಧಕ್ಕೆ ೮ ರೂಪಾಯಿ ಬೀಳುವದು.

೬. ಕಲೆ ನಿಲ್ಲುವ ಗರ್ಮಿಯ ಕ್ಷತ.

ಗರ್ಮಿ ವ್ಯಾಪಿಸುವದರಿಂದ ರಕ್ತ ಕೆಟ್ಟು ಮೈಮೇಲೆಲ್ಲ ಕೆಂಪು ಕೆಂಪು ಬೊಕ್ಕೆಗಳೆದ್ದು ಅವು ಒಡೆಯದೇ ಅಲ್ಲೇ ಅಕ್ಕಿಕೊಂಡು ಆ ಭಾಗದಲ್ಲಿ ಕಲೆ ನಿಲ್ಲುವದು. ಇದರಬಗ್ಗೆ "ಸಾರ್ಸಾಪರಿಲಾ" ಎಂಬ ಔಷಧವನ್ನು ಸೇವಿಸಬೇಕು. ಒಬ್ಬನಿಗೆ ೩ ಬಾಟ್ಲಗಳು ಬೇಕಾಗುವವು. ಪ್ರತಿ ಬಾಟ್ಲಿಗೆ ೧-೪-೦ ಒಂದೂಕಾಲು ರೂಪಾಯಿ.

೭. ಉಷ್ಣಕೆಸ.

ಗರ್ಮಿ ರೋಗವುಳ್ಳವರಿಗೆ ಒಂದು ತರದ ಕೆಟ್ಟ ವಾಯುವು ಶರೀರದಲ್ಲಿ ವ್ಯಾಪಿಸಿ ಸಂದು ಸಂದುಗಳು ಹಿಡಿದಂತೆ ಆಗಿ ಕೈ ಕಾಲುಗಳೆಲ್ಲ ನೋಯುವದಕ್ಕೆ ಹತ್ತುವವು. ಇದರಬಗ್ಗೆ ಹಚ್ಚುವದಕ್ಕೂ, ಹೊಟ್ಟೆಗೆ ತೆಗೆದುಕೊಳ್ಳುವದಕ್ಕೂ, ಒಬ್ಬನಿಗೆ ಬೇಕಾಗುವಷ್ಟಕ್ಕೆ (೩।।।) ಮೂರು ರೂಪಾಯಿ ಹನ್ನೆರಡಾಣೆ.

೮. ಹುಡಿತುರಿ ಕಜ್ಜಿ.

ಈ ಮೇಲಿನ ರೋಗವು ರಕ್ತ ಕೆಟ್ಟದ್ದರಿಂದಾಗುವದು, ಇದು ನಮ್ಮ ದೇಶದಲ್ಲಿ ಅನೇಕರಿಗೆ ಬರುತ್ತದೆ. ಎಂಟೇ ದಿವಸದಲ್ಲಿ ಶರೀರವನ್ನೂ ಬಣ್ಣಿಯಂತೆ ಮೃದುಮಾಡಿ ತುರಿಕಜ್ಜಿಗಳ ಮೂಲವನ್ನೇ ನಾಶಮಾಡತಕ್ಕ "ವಾಮನ ಗೋಪಾಳ ಸಾರ್ಸಾಪರಿಲಾ" ಎಂಬ ಔಷಧವು ನಮ್ಮಲ್ಲಿರುವದು. ಒಬ್ಬನಿಗೆ ೩ ಬಾಟ್ಲಗಳು ಬೇಕಾಗುವವು. ಪ್ರತಿ ಒಂದು ಬಾಟ್ಲಿಗೆ (೧।) ಒಂದೂಕಾಲು ರೂಪಾಯಿ.

೯. ತೊಡೆವಾಳೆ.

ಕೆಟ್ಟ ಸಂಸರ್ಗದಿಂದ ತೊಡೆ ಸಂದುಗಳ ಮೇಲಿದಿಗೆಗಳಲೆಯಂತೆ ಎದ್ದು ಅನಂತರ ಬಹಳ ದೊಡ್ಡದಾಗಿ ಬಡೆದು ಹುಣ್ಣಾಗಿ ಕುಳಿ ಬೀಳುವವು. ಇವು ಬೇಗನೇ ವಾಸಿಯಾಗುವದಿಲ್ಲ. ಇವನ್ನು ಮೂರನೇ ದಿವಸದಲ್ಲಿ ಗುಣಪಡಿಸುವಂಥಾ ಔಷಧವು ನಮ್ಮಲ್ಲಿರುವದು. ಒಬ್ಬವನಿಗೆ ಹಚ್ಚಲಿಕ್ಕೂ ಹೊಟ್ಟೆಗೆ ತೆಗದುಕೊಳ್ಳುವದಕ್ಕೂ ಬೇಕಾಗುವ ಔಷಧಕ್ಕೆ ೭ ರೂಪಾಯಿ.

೧೦. ವೀರ್ಯ ತಿಳುವಾಗೋಣ.

ಅತಿ ವಿಷಯೋಪಭೋಗದಿಂದ, ಇಲ್ಲವೇ ರೋಗ ಪ್ರಭಾವದಿಂದ, ಪುರುಷರಿಗೆ ವೀರ್ಯ ತಿಳುವಾಗಿ, ಸ್ಪರ್ಶಮಾತ್ರದಿಂದ, ಅಥವಾ, ತನಗೆ ತಾನೇ, ಇಲ್ಲವೇ ಸ್ವಪ್ನಾವಸ್ಥೆ ಮುಂತಾದ್ದರಿಂದ, ಪತನವಾಗಿ, ಅವರು ದಿನೇದಿನೆ ಅಶಕ್ತರಾಗುತ್ತಾ ಬರುವರು. ಇದರಬಗ್ಗೆ "ಕಬಿನಸ್‌ಫಾಸ್ಫರಿಸ" ಎಂಬ ಹೆಸರಿನ ಗುಳಿಗೆಗಳನ್ನು ಸೇವಿಸಬೇಕು. ಒಬ್ಬವನಿಗೆ ೫ ರೂಪಾಯಿನ ಔಷಧ ಬೇಕಾಗುವದು.

೧೧. ಮಧ್ಯಂತರದಲ್ಲಿ ಬಂದ ನಪುಂಸಕತೆ.

ಅನೇಕ ಪ್ರಕಾರದಿಂದ ಈ ಮೇಲಿನ ಮೃತ ಪ್ರಾಯರನ್ನಾಗಿ ಮಾಡುವ ರೋಗವು ಮನುಷ್ಯರ ಉಭಯ ವರ್ಗದಲ್ಲಿಯೂ, ಬಂದೆಡರಿಕೊಳ್ಳುವದು. ಸ್ವಾಭಾವಿಕ ವಾಸನೆ ತಪ್ಪಿಹೋಗುವದೇ ಇದರ ಗುರ್ತಾಗಿರುವದು. ಇದರ ಬಗ್ಗೆ ಒಬ್ಬವನಿಗೆ ಬೇಕಾಗುವಷ್ಟು ಔಷಧಕ್ಕೆ ೫ ರೂಪಾಯಿ.

೧೨. ಭಗಂದರ.

ಆಸನದ ಕೆಳಭಾಗ ಸಮಾನರೇಖೆಯ ನಡುಭಾಗದಲ್ಲಿ ಒಂದು ತರದ ಚಿಕ್ಕ ಚಿಕ್ಕ ಕುರುಗಳೆದ್ದು ಯಾವಾಗಲೂ ಪೀಡಿಸುತ್ತಿರುವದು. ಇದು ಬಹು ಕಠಿಣ ರೋಗವಾಗಿರುವದು. ಯಾವಾಗಲೂ ಹುಣ್ಣು ವಾಸಿಯಾಗಲಿಕ್ಕಿಲ್ಲ. ಇದರ ಬಗ್ಗೆ ಹಚ್ಚುವದಕ್ಕೂ, ಹೊಟ್ಟೆಗೂ, ಒಬ್ಬವನಿಗೆ ಬೇಕಾಗುವಷ್ಟಕ್ಕೆ (೫॥) ಐದೂವರೆ ರೂಪಾಯಿ.

೧೩. ಧಾತು ನಷ್ಟತೆ.

ಈ ರೋಗವು ನಮ್ಮ ದೇಶದಲ್ಲಿ ಅನೇಕರಿಗೆ ಹಿಡಿದಿದ್ದು, ಇದು ಮನುಷ್ಯರ ಸತ್ವವನ್ನು ಹಾಳುಮಾಡಿ ಬಿಡುವದು. ಕೆಲವರಿಗೆ ಮಲದಲ್ಲಿ, ಕೆಲವರಿಗೆ

ಮೂತ್ರದಲ್ಲಿಯೂ, ಹೀಗೆ ನಾನಾಪ್ರಕಾರದಿಂದ ಧಾತು ನಷ್ಟವಾ?
ಇದರಬಗ್ಗೆ ಒಬ್ಬನಿಗೆ ಬೇಕಾಗುವಷ್ಟು ಔಷಧಕ್ಕೆ ೪ ರೂಪಾಯಿ.

೧೪. ಅಶಕ್ತತೆ.

ರಕ್ತಾಭಿಸರಣ ಕಮ್ಮಿಯಾಗುವದರಿಂದಲೂ, ಎಲುಬಿನಲ್ಲಿರುವ ಸತ್ವ ಇಲ್ಲದಂ ತಾಗುವದರಿಂದಲೂ, ಮನುಷ್ಯನಿಗೆ ಶಕ್ತಿ ಕಡಿಮೆಯಾಗಿ ನಿಸ್ತೇಜನಾಗುವನು. ಇದರಬಗ್ಗೆ ಒಬ್ಬನಿಗೆ ೬ ರೂಪಾಯಿನ ಔಷಧ ಬೇಕಾಗುವದು.

೧೫. ಜ್ವರಗಡ್ಡೆ.

ಈ ರೋಗವು ಥಂಡಿ ಜ್ವರದಮೂಲಕ ಉಂಟಾಗುವದು. ಥಂಡಿ ಜ್ವರ ಬಂದವರಿಗೆ ರಕ್ತ ಕ್ಷೀಣವಾಗಿ ಶಕ್ತಿ ಕಡಿಮೆಯಾಗುವದರಿಂದ ಈ ರೋಗವು ಬಲವಾಗಿ ಕೊಳ್ಳುತ್ತಾ ಬರುವದು. ಇದು ಯಾವಾಗಲೂ ಎಡಭಾಗದ ಕಿಬೊ ಟೆಯಲ್ಲಿ ಕಾಣುತ್ತಿರುವದು. ಇದು ಬಹು ಹೀನತರದ ರೋಗವು. ಮಲೆ ನಾಡು ಪ್ರದೇಶದವರಿಗೆ ಹೆಚ್ಚಾಗಿ ಆಗುವಂಥಾದ್ದು. ಇದಕ್ಕೆ ಹಚ್ಚುವ ಮು ಲಾಮು ಮತ್ತು ಗುಳಿಗೆಗಳು ನಮ್ಮಲ್ಲಿರುತ್ತವೆ. ಇದರಿಂದ ೮ ದಿವಸದಲ್ಲಿ ಗಡ್ಡೆ ಕರಗಿಹೋಗುವದು. ಒಬ್ಬನಿಗೆ ೧॥ ರೂಪಾಯಿನ ಔಷಧ ಬೇ ಕಾಗುವದು.

೧೬. ಗಜಕರ್ಣ.

ಇದೊಂದು ತರದ ಚರ್ಮ ರೋಗವಾಗಿದೆ. ಗಂಜಿಯುಳ್ಳ ಮತ್ತು ವದ್ದೇ ವಸ್ತ್ರಗಳನ್ನುಡುವದರಿಂದಲೂ, ಸಾಂಕ್ರಾಮಿಕವಾಗಿಯೂ, ಆಗುವದು. ಮೊ ದಲಿಗೆ ತೊಡೆಯ ಸಂದಿನಲ್ಲಿ ಕಾಣಿಸಿಕೊಳ್ಳುವದು. ಒಹಳ ಕಿಟಿಕಿಟಿಯ ರೋಗವು. ಹಳೆತಾಗಿ ಹಬ್ಬಿದರೆ ಮೈಬಣ್ಣವನ್ನೆಲ್ಲ ಹಾಳುಮಾಡುವದು. ಇದರಬಗ್ಗೆ ೧ ದಿವಸದಲ್ಲಿ ಗುಣವಾಗತಕ್ಕಂಥಾ ಔಷಧವು ನಮ್ಮಲ್ಲಿರುವದು. ಕ್ರಯ ೫ ಆಣೆ.

೧೭. ಕಾಲರಾ ಅಥವಾ ವಾಂತಿ ಭ್ರಾಂತಿ.

ಇದಕ್ಕೆ ಮಾರಿಕಾ ಜಡವೆಂದು ಹೇಳುವರು. ಇದರಂಥ ಭಯಂಕರ ರೋ ಗವು ಈ ಜಗತ್ತಿನಲ್ಲಿ ಬೇರೊಂದಿಲ್ಲ. ಇದು ಅಕಸ್ಮಾತ್ತಾಗಿ ಬಂದು ಬಂದೇ ತಾಸಿನಲ್ಲಿ ಮನುಷ್ಯನನ್ನು ಬಲಿ ತೆಗೆದುಕೊಳ್ಳುವದು. ಆದ್ದರಿಂದ ನಮ್ಮ ಕಡೆಗೆ ಸಿಕ್ಕುವ "ಕೊಲರಾಪಿಲ್ಸ್" ಎಂಬ ಔಷಧವನ್ನು ಯಾವಾಗಲೂ ಮ

೨೯. ಇದು ಸಾಧಾರಣ ಹೊಟ್ಟೇ ನೋವಿನ ಉಪದ್ರವಕ್ಕೂ ಒದ ಬಹುದು. ಕ್ರಯ ೧ ರೂಪಾಯಿ.

೧೮. ಪಚನ ಶಕ್ತಿ ಕ್ಷೀಣತೆ.

ಶಕ್ತಿ ಕಡಿಮೆಯಾದ ಹಾಗೆ ಅಗ್ನಿ ಮಾಂದ್ಯವಾಗಿ ಪಚನ ಶಕ್ತಿ ಕಡಿಮೆಯಾಗುವದು. ಸಾಫಾಗಿ ಮಲ ಶುದ್ಧಿಯಾಗದೇ ಹಲವು ವಿಕಾರಗಳುಂಟಾಗುವವು. ಆದ್ದರಿಂದ ಶರೀರದ ಆರೋಗ್ಯವನ್ನು ಕಾಪಾಡಿಕೊಳ್ಳತಕ್ಕವರು, ನಮ್ಮಲ್ಲಿ ಸಿಕ್ಕುವ 'ಪಾಚನಕ್ರಿಯಾವರ್ಧಕ ಗುಳಿಗೆ' ಎಂಬ ಔಷಧವನ್ನು ಸಂಗ್ರಹಿಸಿಟ್ಟುಕೊಂಡು ವಾರಕ್ಕೊಮ್ಮೆಯಾದರೂ ೨ ಗುಳಿಗೆಗಳನ್ನು ಸೇವಿಸಬೇಕು. ಕ್ರಯ ೬ ಆಣೆ.

೧೯. ಪಿತ್ತರೋಗ.

ಆಹಾರ ದೋಷದಿಂದ ಪಿತ್ತಾಧಿಕ್ಯವಾಗಿ, ಅನೇಕ ಪ್ರಕಾರ ಕಷ್ಟಪಡಿಸುವದು. ಎದೆಯಲ್ಲಿ ಸುಡೋಣ, ಹುಳಿತೇಗು ಬರೋಣ, ತಲೆ ತಿರುಗೋಣ, ಬೋಳಿಬರೋಣ, ಅಂಗೈ, ಅಂಗಾಲು, ಕಣ್ಣು ಇವು ಉರಿಯೋಣ, ಇವೇ ಮುಂತಾದ ವಿಕಾರಗಳಾಗುವವು ಇದರಬಗ್ಗೆ ನಮ್ಮಲ್ಲಿ ಅತ್ಯುತ್ತಮ ಔಷಧವಿರುವದು. ಒಬ್ಬನಿಗೆ ಬೇಕಾಗುವಷ್ಟು ಔಷಧಕ್ಕೆ ೩ ರೂಪಾಯಿ.

೨೦. ತಲೆ ಶೂಲೆ.

ಧಾಳಿಯ ಪೆಟ್ಟಿನಿಂದಲೂ, ಥಂಡಿ ವ್ಯಾಪಿಸೋಣದರಿಂದಲೂ, ಜ್ವರದ ಅಂಗರೂಪವಾಗಿಯೂ, ತಲೆಶೂಲೆ ಉಂಟಾಗುವದು. ಇದರಬಗ್ಗೆ ೧ ಘಳಿಗೆಯಲ್ಲಿ ನಾಶಿಯಾಗತಕ್ಕ ಹಚ್ಚುವ ಔಷಧವು ನಮ್ಮಲ್ಲಿರುವದು. ಕ್ರಯ ಬಾಟ್ಲಿ ೧ಕ್ಕೆ ೧೨ ಆಣೆ.

೨೧. ವತ್ತಲೆ ಶೂಲೆ.

ಈ ರೋಗವು ಅಂಟಿತೆಂದರೆ ಬೇಗನೇ ಹೋಗುವದಿಲ್ಲ. ಒಂದು ತರದ ಜ್ವರವಾಗಿರುವದೆಂದರೂ ಅಡ್ಡಿ ಇಲ್ಲ. ಇದರಬಗ್ಗೆ ಉತ್ತಮವಾದ ಔಷಧ ನಮ್ಮಲ್ಲಿರುವದು. ಹಚ್ಚುವ ಮತ್ತು ಹೊಟ್ಟೆಯ ಅವುಷಧಕ್ಕೆ ೧-೮-೦ ಆಣೆ ಬೀಳುವದು.

೨೨. ಅಜೀರ್ಣ ರೋಗ.

ಮಿತಿ ತಪ್ಪಿ ಆಹಾರ ತಗೆದುಕೊಳ್ಳುವದರಿಂದಲೂ, ಜಾಗರಣದಿಂದಲೂ,

ಶ್ವಾಸವು ಕಡಿಮೆಯಾಗುವದರಿಂದಲೂ, ಪಚನೇಂದ್ರಿಯವು ಸ್ವ_ ಹೊಟ್ಟೆಯಲ್ಲಿ ವಾಯು ತುಂಬಿಕೊಳ್ಳುವದು. ಇದರಬಗ್ಗೆ ಒಂದು ಮೆಣಸಿನ ಕಾಳಿನಷ್ಟು ಅಫೀಮಿನ (ಪ್ರೋಮ್ಯ)ದ ಅರ್ಕವನ್ನು ಸೇವಿಸಬೇಕು. ೧ ಬಾಟ್ಲಿಗೆ ೮ ಆಣೆ ಬೇಕಾಗುವದು.

೨೩. ಹೊಟ್ಟೆ ಶೂಲೆ.

ಇದು ಒಂದು ತರದ ಘನ ರೋಗವಾಗಿರುವದು. ಇದು ಮನುಷ್ಯನಿಗೆ ತಗಲಿಕೊಂಡಿತೆಂದರೆ ತಾನಾಗಿ ಎಂದೂ ಬಿಟ್ಟುಹೋಗಲಿಕ್ಕಿಲ್ಲ. ಕೆಲವರಿಗೆ ಧಾನ್ಯದ ಆಹಾರ ಹಾಕದೋಣದರಿಂದಲೂ, ಕೆಲವರಿಗೆ ಶೀತ ಪದಾರ್ಥ ತಿನ್ನೋಣದರಿಂದಲೂ, ಕೆಲವರಿಗೆ ವಾಂತಿಮಾಡೋಣದರಿಂದಲೂ, ಆ ರೋಗದ ವೇದನೆಯು ಕಡಿಮೆಯಾದಂತಾಗುವದು. ಆದರೆ ನಿಜವಾಗಿ ಹೋಗಲಿಕ್ಕಿಲ್ಲ. ಇದರಬಗ್ಗೆ ಸರ್ವೋತ್ತಮವಾದ ಅವುಷಧವು ನಮ್ಮಲ್ಲಿರುವದು. ಒಬ್ಬನಿಗೆ ಒಂದು ತಿಂಗಳು ಸೇವಿಸತಕ್ಕ ಅವುಷಧಕ್ಕೆ ೮ ರೂಪಾಯಿ ಬೇಕಾಗುವದು.

೨೪. ದಂತ ರೋಗ.

ಹಲ್ಲು ನೋಯುವದೂ, ಹವಡಿ ಬಾತುಕೊಳ್ಳುವದೂ, ಹಲ್ಲಿನಿಂದ ರಕ್ತ ಸುರಿಯುವದೂ, ಇನ್ನೂ ಮುಂತಾದ ದಂತ ರೋಗಗಳಿರುತ್ತವೆ. ಇದರಬಗ್ಗೆ ನಮ್ಮಲ್ಲಿ ೪ ಆಣೆ ಕ್ರಯದ ಬಾಬತ್ತು ಒಂದು ತರದ ಹಲ್ಲುಜ್ಜುವ ಅವುಷಧವಿರುವದು. ಸರಿಯಾಗಿ ದಿನಾ ಇದನ್ನು ಉಪಯೋಗಿಸಿದರೆ ಕ್ರಮೇಣ ಗುಣ ತೋರುವದು.

೨೫. ಕಾಮಾಲೆ ರೋಗ.

ಈ ರೋಗವು ರಕ್ತಕ್ಷೀಣತೆ, ಮತ್ತು ಪಿತ್ತಾಧಿಕ್ಯದಿಂದುಂಟಾಗುವದು, ಇದರಿಂದ ಮನುಷ್ಯನು ನಿಸ್ತೇಜವಂತನಾಗುವದಲ್ಲದೆ ಅವನ ಕಣ್ಣು ಕೈ ಕಾಲು ಮುಂತಾದ ಅವಯವಗಳೆಲ್ಲವೂ ಅರಶಿನ ಬಣ್ಣವಾಗಿ ತೋರುವವು. ಇದರಬಗ್ಗೆ ಸರ್ವೋತ್ಕೃಷ್ಟವಾದ ಅವುಷಧವು ನಮ್ಮಲ್ಲಿರುವದು. ಒಬ್ಬನಿಗೆ ೬ ರೂಪಾಯಿನ ಅವುಷಧ ಬೇಕಾಗುವದು.

೨೬. ಹೆಂಗಸರಿಗೆ ಮೈಯಿಂದ ಹೋಗುವ ರೋಗ (ಪ್ರದರ)

ಈ ರೋಗವು ಅನೇಕ ಹೆಂಗಸರಿಗಿದ್ದು ಇದರ ಭಯಂಕರ ಸ್ವರೂಪವು ಪುರುಷರಿಗೆ ತಿಳಿಯುವದಿಲ್ಲ. ಇದರಲ್ಲಿ, ಬಿಳುಪು, ಕೆಂಪು, ಎರಡು ಪ್ರಕಾರವಿರುವದು. ಒಬ್ಬರಿಗೆ ೩ ರೂಪಾಯಿನ ಅವುಷಧ ಬೇಕಾಗುವದು.

೨೭. ಮುಟ್ಟಾಗುವ ಹೊಟ್ಟೆ ಕಬ್ಬು.

ಇದು ಹೆಚ್ಚಾಗಿ ಮಕ್ಕಳಾಗದ ಹೆಂಗಸರಿಗೆ ರಜಸ್ವಲಾ ಕಾಲದಲ್ಲಿ ಅಂಟಿಕೊಳ್ಳುವದು. ಇದು ಬಹಳ ವೇದನೆಕಾರಿಯಾಗಿದ್ದು, ಇದರ ದಣುವನ್ನು ಹೆಂಗಸರುಮಾತ್ರವೇ ಬಲ್ಲರು. ಇದರಬಗ್ಗೆ ಒಬ್ಬರಿಗೆ ಬೇಕಾಗುವಷ್ಟು ಔಷಧಕ್ಕೆ ೩|| ರೂಪಾಯಿ ಬೀಳುವದು.

೨೮. ಮೂಲವ್ಯಾಧಿ.

ಇದೊಂದು ಘನ ರೋಗವಾಗಿರುವದು. ಮಲವಿಸರ್ಜನೆ ಕಾಲದಲ್ಲಿ ಮಲವು ಘಟ್ಟಿಯಾಗಿ ಬರುವದರಿಂದ ಆಸನದ ಒಳಭಾಗವು ಒಡೆದು ಬುಸಬುಸನೆ ರಕ್ತ ಸುರಿಯುವದು. ಕೆಲವರಿಗೆ ಆಸನದ ಹೊರಭಾಗದಲ್ಲಿ ಮೊಳೆ ಬರುವದುಂಟು. ಕೆಲವರಿಗೆ ಇಲ್ಲ. ಇದರಬಗ್ಗೆ ಆಸನಕ್ಕೆ ಹಚ್ಚುವದಕ್ಕೆ ಮುಲಾಮು ಮತ್ತು ಹೊಟ್ಟೆಗೆ ತೆಗೆದುಕೊಳ್ಳುವದಕ್ಕೆ ಅವುಷಧಗಳಿರುವವು. ಒಬ್ಬನಿಗೆ ೨|| ರೂಪಾಯಿನ ಅವುಷಧ ಬೇಕಾಗುವದು.

೨೯. ವ್ರಣ.

ಮನುಷ್ಯನಿಗೆ ಚರ್ಮ ಸಂಬಂಧವಾಗಿ ಆಗುವ ಸಮಸ್ತ ಜಾತಿಯ ಘಾಯ ಮತ್ತು ಹುಣ್ಣುಗಳಮೇಲೆ ನಮ್ಮ ಕಡೆಯಲ್ಲಿ ಸಿಕ್ಕುವ ಮುಲಾಮಿನ ಅವುಷಧವು ೩ ದಿವಸದಲ್ಲಿ ಮಾಯಿಸುವಂಥಾದ್ದಾಗಿದೆ. ಒಂದು ಕುಪ್ಪಿಗೆ ೧ ರೂಪಾಯಿ.

೩೦. ಕೆಮ್ಮು.

ಇದರಲ್ಲಿ ನೆಗಡಿ ಕೆಮ್ಮು, ದಮ್ಮಿನ ಕೆಮ್ಮು, ಕ್ಷಯದ ಕೆಮ್ಮು, ಹುಡುಗರ ನಾಯಿ ಕೆಮ್ಮು, ಒಣ ಕೆಮ್ಮು ಮುಂತಾದ ಅನೇಕ ಭೇದಗಳಿರುವವು. ಈ ತರದ ಕೆಮ್ಮುಗಳನ್ನು ಹೋಗಲಾಡಿಸುವಂಥ ಅವುಷಧವು ನಮ್ಮಲ್ಲಿರುವದು. ಬಾಟ್ಲಿಗೆ ೧ ರೂಪಾಯಿ.

೩೧. ಬಾಳಂತಕುತ್ರ.

ನಮ್ಮ ದೇಶದಲ್ಲಿ ಅನೇಕ ಹೆಂಗಸರಿಗೆ ಈ ರೋಗ ಹತ್ತುವದು. ಪ್ರಸವವಾದನಂತರ ತಕ್ಕ ಉಪಚಾರಗಳು ಸಮನಾಗಿ ನಡೆಯದೇಹೋಗುವದರಿಂದ ದಿನೇದಿನೇ ಕ್ಷೀಣವಾಗಿ ಕೊಳ್ಳುತ್ತಾ ಬರುವದು. ರಕ್ತ ಕಡಿಮೆಯಾಗಿ ನಿಸ್ತೇಜರಾಗಿ ಅಶಕ್ತರಾಗುವರು. ಈ ರೋಗವನ್ನು ಪರಿಹರಿಸುವದಕ್ಕೆ ಉತ್ತಮವಾದ ಅವುಷಧ ನಮ್ಮಲ್ಲಿರುವದು. ಒಬ್ಬರಿಗೆ ಬೇಕಾಗುವಷ್ಟು ಅವುಷಧಕ್ಕೆ ೫ ರೂಪಾಯಿ ಬೀಳುವದು.

೩೨. ದಮ್ಮಿನ ರೋಗ.

ಈ ಉಬ್ಬಸ ರೋಗವು ಅನೇಕರಿಗೆ ಬಾಲ್ಯದಿಂದಲೂ ಮಧ್ಯಂತರದಲ್ಲಿಯಾಗಲಿ ಬರುವದು. ಇದು ೧೫-೨೦ ದಿವಸಗಳಿಗೊಮ್ಮೆ ಥಂಡಿ ಹೆಚ್ಚಾದಾಗೆ ಜಗುರಿ ಕೊಳ್ಳುವದು. ಇದಕ್ಕೆ "ಫೇತೋಸ್ಯಾರಫ್" ಎಂಬ ಔಷಧವನ್ನು ಸೇವಿಸ ಬೇಕು. ಒಂದು ಬಾಟ್ಲಿಗೆ ೩।। ರೂಪಾಯಿ. ಒಬ್ಬನಿಗೆ ೨ ಬಾಟ್ಲಿಗಳು ಬೇಕಾಗುವವು.

೩೩. ಕಿವಿ ಶೂಲೆ.

ಇದು ಬಹು ದುಃಖ ಕೊಡುವ ರೋಗವಾಗಿದೆ. ಕೆಲವರಿಗೆ ವೇದನೆಯಿಲ್ಲದೇ ದುರ್ವಾಸನೆಯುಳ್ಳ ಕೀವು ಸುರಿಯುವದು. ಇದರಮೇಲೆ ಸರ್ವೋತ್ತಮವಾದ ಔಷಧವು ನಮ್ಮಲ್ಲಿರುವದು. ಬಾಟ್ಲಿ ೧ಕ್ಕೆ ೨ ರೂಪಾಯಿ.

೩೪. ನೇತ್ರರೋಗ.

ಕಣ್ಣು ಕೊಳೆತಂತೆ ಮಿಜಿಮಿಜಿಯಾಗೋಣ, ವೇದನೆಯಾಗೋಣ, ಪಿಚ್ಚು ಸುರಿಯೋಣ, ಪರೆಗಟ್ಟೋಣ, ಹೂವು ಕೂಡೋಣ, ಇವೇ ಮುಂತಾದ ರೋಗಗಳಮೇಲೆ ನಮ್ಮ ಔಷಧದ ೪ ಹನಿಯನ್ನು ದಿನಾ ಕಣ್ಣಿಗೆ ಹಾಕಿದರೆ ೩ ದಿವಸದಲ್ಲಿ ಗುಣಬರುವದು. ಬಾಟ್ಲಿ ೧ಕ್ಕೆ ೨ ರೂಪಾಯಿ.

೩೫. ಗಂಡಮಾಲೆ.

ಇದು ಒಂದು ತರದ ರಕ್ತಭ್ರಂಶರೋಗವು. ಕುತ್ತಿಗೆ ಸುತ್ತಲೂ, ಯಾವಾಗಲೂ, ಗಂಟುಗಂಟಾಗಿ ಎದ್ದು ಕೀವಾಗಿ ಒಡೆದು ಗಾಯ ಮಾಯದೆ ಇರುವದು. ಮನುಷ್ಯನ ಸೌಂದರ್ಯಕ್ಕೆ ಕುಂದುತರುವದು. ಇದರಬಗ್ಗೆ ಹಚ್ಚುವದಕ್ಕೂ, ಹೊಟ್ಟೆಗೆ ತೆಗೆದುಕೊಳ್ಳುವದಕ್ಕೂ, ಉತ್ತಮ ಖಾತ್ರಿಯಾದ ಔಷಧವು ನಮ್ಮಲ್ಲಿರುವದು. ಒಬ್ಬನಿಗೆ ೮ ರೂಪಾಯಿನ ಔಷಧ ಬೇಕಾಗುವದು.

೩೬. ನಾರುಹುಣ್ಣು.

ಈ ಸಾಂಕ್ರಾಮಿಕ ವ್ರಣದ ರೋಗವು, ಮನುಷ್ಯನಿಗೆ ಕೈಕಾಲುಗಳ ಮೇಲೆದ್ದು ಒಡೆದು ಅದರಲ್ಲಿ ನಾರು ನಾರಿನಂಥ ಮಲಿನವು ಸೋರುತ್ತಿರುವದು. ಬೇಗನೆ ವಾಸಿಯಾಗುವದಿಲ್ಲ. ಇದರಬಗ್ಗೆ ರಾಮಬಾಣದಂಥ ಔಷಧವು ನಮ್ಮಲ್ಲಿರುವದು. ಒಬ್ಬನಿಗೆ ೨।। ರೂಪಾಯಿನ ಔಷಧ ಬೇಕಾಗುವದು.

೩೭. ಕಸವಿನ ಉಪದ್ರವ.

ಇದು ಶಕ್ತಿ ಕಡಿಮೆ ಇರುವ ಮಂದಿ ಮನುಷ್ಯರಿಗೆ ಹೆಚ್ಚಾಗಿ ಆಗುವದು.

ಸಣ್ಣ ಪ್ರಮಾಣದ ಭಾಗದಲ್ಲಿ ನಮ್ಮ ಅವುಷಧವನ್ನು ಹಚ್ಚಿ ಉಜ್ಜಿದರೆ ಕೂಡ್ಲೆ ಗುಣವಾಗುವಂಥ ಅವುಷಧವು ನಮ್ಮಲ್ಲಿರುವದು. ಹಚ್ಚುವದಕ್ಕೂ ಹೊಟ್ಟೆಗೆ ತೆಗೆದುಕೊಳ್ಳುವದಕ್ಕೂ ಒಬ್ಬನಿಗೆ ೮ ದಿವಸದ ಅವುಷಧಕ್ಕೆ ೧॥ ರೂಪಾಯಿ ಬೀಳುವದು.

೩೮. ತ್ವಗ್ಭೇದನ

ಎಷ್ಟೋ ಜನರಿಗೆ ಛಳಿಗಾಲ ಬಂತೆಂದರೆ, ಚರ್ಮವು ಬಿಗಿಯಾಗಿ ಕೈಕಾಲುಗಳಿಗೆ ಬಿರಿ ಒಂದು ಕಡಿಗೆ ಬಿತ್ತು ರಕ್ತ ಸೋರುವದುಂಟು. ಇದಕ್ಕೆ ಹಚ್ಚುವಂಥ ಅವುಷಧವು ನಮ್ಮಲ್ಲಿರುವದು. ಮುಂಜಾನೆಗೂ ರಾತ್ರಿಯಿಂದ ಇದನ್ನು ಸಂಗ್ರಹಿಸಿಟ್ಟುಕೊಂಡು ಅದರ ಬೆನ್ನಿಂದ ಕಂಡಕೂಡಲೇ ನಮ್ಮ ಅವುಷಧವನ್ನು ಉಪಯೋಗಿಸಿದರೆ, ಚರ್ಮವು ನುಣುಪಾಗುವದು. ಒಬ್ಬನಿಗೆ ೧ ರೂಪಾಯಿನ ಅವುಷಧ ಬೇಕಾಗುವದು.

೩೯. ಬುತ್ತಿ ಕಜ್ಜಿ.

ಈ ಬುತ್ತಿ ಎಂಬ ತುರಿ ಕಜ್ಜಿಯು ಹುಡುಗರಿಗೂ ಮತ್ತು ದೊಡ್ಡವರಿಗೂ ಮೊಳಕಂಡಿ, ಮೊಣಕಾಲುಗಳ ಮೇಲಾಗುವದು. ಇದಕ್ಕೆ ಹಚ್ಚುವಂಥ ಅವುಷಧವು ನಮ್ಮಲ್ಲಿರುವದು. ಒಬ್ಬನಿಗೆ ೧ ರೂಪಾಯಿ ಅವುಷಧ ಬೇಕಾಗುವದು.

೪೦. ಶೀತಜ್ವರ

ಇದು ಹೆಚ್ಚಾಗಿ ಆಷಾಢ ಶ್ರಾವಣ ಮಾಸದಲ್ಲಿ ಮಲನಾಡಲ್ಲಿರುವ ಜನರಲ್ಲಿ ಹಬ್ಬಿಕೊಳ್ಳುವದು. ಇದರಲ್ಲಿ ದಿನಾ ಬರುವದೂ, ದಿನ್ನಬಿಟ್ಟು ದಿನ ಬರುವದು ಎಂಬ ಎರಡು ಪ್ರಕಾರಗಳಿದ್ದು ದಿವಸದಲ್ಲಿ ನಾಲ್ಕು ತಾಸಿನವರೆಗೆ ಹಿಡಿಸುವದು: ಮೊದಲೇ ಒಂದು ತಾಸು ನಡುಕವು ಮತ್ತು ಛಳಿ ಅನಂತರ ೨ ತಾಸು ಜ್ವರ ಅನಂತರ ೧ ತಾಸು ಬೆವರೂ ಇವು. ಇದರ ಬಗ್ಗೆ ನಮ್ಮಲ್ಲಿ ಉತ್ತಮವಾದ ಅವುಷಧ ಸಿಗುವದು. ಗುಳಿಗೆಗಳಿರುವದರಿಂದ ೧ಕ್ಕೆ ೮ ಆಣೆ ಒಬ್ಬನಿಗೆ ಪಥ್ಯ ಬೇಕಾಗುವದು.

೪೧. ಚಾತುರ್ಥಿಕ ಜ್ವರ

ಇದು ವಿಶೇಷವಾಗಿ ಕೆಲವರಿಗೆ ಉಂಟಾಗುವ ಜ್ವರವಾಗಿದೆ. ಇದರಲ್ಲಿ ಛಳಿ ಜ್ವರ ಚಾತುರ್ಥಿಕ ಎಂಬ ೨ ತರದ ಭೇದಗಳಿರುತ್ತವೆ. ಇದರ ಸ್ವರೂಪವಾದರೂ ಶೀತಜ್ವರದಂತೆ ಇರುವದು. ಆದರೆ ಇದು ಬೇಗನೆ ಬಿಡುವದಿಲ್ಲ.

ಪಾಕಕ್ಕಾಗಿ ಸರ್ವೋತ್ಕೃಷ್ಟ ಅವುಷಧ ನಮ್ಮಲ್ಲಿರುವದು. ಪೆಟ್ಟಿಯಲ್ಲಿ ಗುಳಿಗೆಗಳಿರುವವು. ಕ್ರಯ ೧ ರೂಪಾಯಿ.

೪೨. ಸಂಗ್ರಹಣಿ ಅತಿಸಾರ.

ಈ ರೋಗವು ಭಯಂಕರ ಸ್ವರೂಪವಾಗಿರುವದು. ಇದರ ಬಲೆಯಲ್ಲಿ ಬಿದ್ದವರು ಬದುಕುವದು ಪ್ರಯಾಸ. ಮನುಷ್ಯನನ್ನು ಅತಿಶಯ ಕ್ಷೀಣ ದೆಶೆಗೆ ತಂದಿಡುವದು. ಇದರಬಗ್ಗೆ ತಯಾರಾದ ಅವುಷಧವು ನಮ್ಮಲ್ಲಿರುವದು. ಕ್ರಯ ೧ ರೂಪಾಯಿ. ಬಬ್ಬನಿಗೆ ೩ರೂಪಾಯಿ ಅವುಷಧ ಬೇಕಾಗುವದು.

೪೩. ಹುಡುಗರ ಶಕ್ತಿ ಕ್ಷೀಣತೆ.

ಹುಡುಗರನ್ನು ಸಣ್ಣವರಿರುವಾಗ ಸಶಕ್ತರಾಗಿರುವಂತೆಯೂ ತಕ್ಕ ಆಹಾರ ವ್ಯಾಯಾಮಗಳು ಸಿಗುವಂತೆಯೂ ಜಾಗ್ರತೆ ತೆಗಕೊಳ್ಳಬೇಕು. ಅನೇಕ ಹುಡುಗರು ತಾಯಿಯ ಸ್ತನ್ಯದೋಷದಿಂದಲೂ ಆಹಾರ ದೋಷದಿಂದಲೂ ಶಕ್ತಿ ಕ್ಷೀಣರಾಗುತ್ತಾ ಬಳಲುವದುಂಟು. ಇದರಬಗ್ಗೆ "ಕವಿಂಕಲ್ಲಪ್ಪುದ" ಎಂಬ ಅವುಷಧ ನಮ್ಮಲ್ಲಿರುವದು. ಕೊಟ್ಟ ೪ ದಿವಸದಲ್ಲಿ ಹುಡುಗರು ಸಶಕ್ತರಾಗಿ ಕಾಣುವರು. ಬಾಟ್ಲಿಗೆ ೧ ರೂಪಾಯಿ ೨ ಬಾಟ್ಲಿ ಕೊಡಬೇಕು.

೪೪. ನೆಗಡಿ.

ನೀರು ಮತ್ತು ಸರ್ದಿ ಇವುಗಳ ದೋಷದಿಂದ ಮನುಷ್ಯರಿಗೆ ಆಗಿಂದಾಗ ಈ ನೆಗಡಿ ಎಂಬದು ಆಗುವದು. ಇದು ಉಪಾಯಂಕರವಾದ್ದಲ್ಲ. ಆದರೆ ಮೂಗಿನಲ್ಲಿ ಶ್ವಾಸಗಳು ಬಾರದಂತೆ ಕಟ್ಟಿಬಿಡುವದು. ಹೆಚ್ಚಾದರೆ ತಲೆನೋವು ಬರುವದು. ಇದರಬಗ್ಗೆ ಮೂಸುವದಕ್ಕೂ ಮತ್ತು ತಲೆಗೆ ಹಚ್ಚುವದಕ್ಕೂ ನಮ್ಮಲ್ಲಿ ಅವುಷಧ ಇರುವದು. ೧ ರೂಪಾಯಿಗೆ ೨ ತರದ ಅವುಷಧವನ್ನು ಪಡಕೊಳ್ಳಬೇಕು.

೪೫. ಕೂದಲುದುರುವ ರೋಗ.

ಎಷ್ಟೋ ಜನರಿಗೆ ನಾನಾಪ್ರಕಾರದ ಕಾರಣಗಳಿಂದ ತಲೆಮೇಲಿನ ಕೂದಲು ತಮಗೆ ತಾವೇ ಉದುರಿಕೊಳ್ಳುತ್ತ ಬರುವವು. ಮತ್ತು ಕೆಲವರಿಗೆ ಹುಟ್ಟುದುರಿದ ಕೂದಲುಗಳು ಪುನಹ ಹುಟ್ಟುವದೇಯಿಲ್ಲ. ಇದರಬಗ್ಗೆ ನಮ್ಮ ಕಡೆಗೆ ಒಳ್ಳೆ ಅವುಷಧ ಸಿಗುವದು. ಕ್ರಯ ೧ ರೂಪಾಯಿ.

೬೬. ಕೂದಲು ಬೆಳೆಯುವದಕ್ಕೆ.

ತಲೆ ಕೂದಲಿನ ಸಾಂಧರ್ಯವನ್ನು ಹೆಚ್ಚಿಸುವದಕ್ಕೆ ನಮ್ಮಲ್ಲಿ ಒಳ್ಳೇತರದ ಸುವಾಸಿಕ ತೈಲಗಳಿರುತ್ತವೆ. ಕ್ರಯ ೧ ರೂಪಾಯಿ.

೬೭. ಬಿಳೀ ಕೂದಲನ್ನು ಕಪ್ಪುಮಾಡುವ ಔಷಧ.

ಇದೊಂದು ಅಪೂರ್ವ ಚಮತ್ಕಾರಿಕವಾದ ಅವುಷಧವು. ಕೂದಲು ಬಿಳೀದಾದರೆ ಇದನ್ನು ಹಚ್ಚುವದರಿಂದ ಕಪ್ಪಾಗಿರುವದು. ಕ್ರಯ ೧ ರೂಪಾಯಿ.

೬೮. ಕಣ್ಣಿಗೆ ತಂಪುಮಾಡುವ ಔಷಧ.

ಪ್ರತಿ ನಿತ್ಯ ಈ ಮೇಲಿನ ಅವುಷಧವನ್ನು ನೆತ್ತಿಗೆ ಹಚ್ಚಿ ತಿಕ್ಕುವದರಿಂದ ಕಣ್ಣಿನಲ್ಲಿ ತಂಪು ಉಂಟಾಗಿ ಮಿದುಡಿನ ಶಕ್ತಿ ಹೆಚ್ಚುವದು. ಕ್ರಯ ಡಬ್ಬಿ ೧ಕ್ಕೆ ೧೮ ಆಣೆ.

೬೯. ಮೇಂದುವೃದ್ಧಿ.

ಅತಿ ಪ್ರೋಚೋಣದರಿಂದ ಮತ್ತು ಹೆಚ್ಚಾಗಿ ಬರವಣಿಗೆ ಮಾಡುವದರಿಂದ ಮತ್ತು ಮಿತತಪ್ಪಿ ಕೆಲಸಮಾಡುವದರಿಂದ ಮನುಷ್ಯನಿಗೆ ಮೇಂದು ಶಕ್ತಿಯು ಕಡಿಮೆಯಾಗುವದು. ಇದರಬಗ್ಗೆ "ಫಾಸ್ಫರಿಸ" ಗುಳಿಗೆ ಎಂಬ ಅವುಷಧಿಯು ನಮ್ಮಲ್ಲಿ ಸಿಗುವದು. ಇದರ ಸೇವನೆ ಮಾಡೋಣದರಿಂದ ಮೇಲಿನ ದೋಷಗಳು ಪರಿಹಾರವಾಗುವವು. ಕ್ರಯ ಬಾಟ್ಲಿ ೧ಕ್ಕೆ ೧೪ ಆಣೆ.

೭೦. ತರುಣ ಸಂಜೀವನ.

ಅನೇಕ ತರುಣರು ಯೌವ್ವನ ಭಾರದಿಂದ ನಾನಾಪ್ರಕಾರ ತಮ್ಮ ಶಕ್ತಿಯನ್ನು ಕಡಿಮೆ ಮಾಡಿಕೊಳ್ಳುವರು. ತರುಣರಿಗೆ ಬಲಾತ್ಕಾರ ಕೃತಿಯಂಥ ಕೆಡಕು ಮತ್ತಾವದರಿಂದಲೂ ಆಗುವದಿಲ್ಲ. ಇವರ ಬೆನ್ನಿನ ಎಲಬುಗಳು ಎಲ್ಲ ಕರಗಿಹೋಗಿ ಅಂತ್ಯದಲ್ಲಿ ಕ್ಷಯ ರೋಗಕ್ಕೆ ಸಹ ಗುರಿಯಾಗುವರು. ಇದರ ಬಗ್ಗೆ "ಸುವರ್ಣಮಾತ್ರ" ಎಂಬ ಪರಮ ಅವುಷಧಿಯು ನಮ್ಮಲ್ಲಿರುವದು. ೨೮ ಗುಳಿಗೆಗಳಿರುವ ೧ ಬಾಟ್ಲಿಗೆ ೩॥ ರೂಪಾಯಿ ಬೀಳುವದು.

೭೧. ಸರ್ಪ ಕಚ್ಚಿದ ವಿಷಕ್ಕೆ ಔಷಧ.

ಈ ಮೇಲಿನ ಅವುಷಧವನ್ನು ಪ್ರತಿ ಒಬ್ಬನು ಸಂಗ್ರಹಿಸಿಟ್ಟುಕೊಂಡಿರಬೇಕಾಗಿ ನಾವು ಸೂಚಿಸುತ್ತೇವೆ. ಯಾಕಂದರೆ ಈ ಅವುಷಧವು ಆ ವಿಷಕ್ಕೆ ಗರುಡಾಸ್ತ್ರದಂತೆ ಇರುವದು. ಕ್ರಯ ಬಾಟ್ಲಿ ೧ಕ್ಕೆ ೨ ರೂಪಾಯಿ.

೫೨. ನಾಯಿ ಕಚ್ಚಿದ ವಿಷಕ್ಕೆ ಔಷಧ.

ಈ ಅವುಷಧವು ನಾಯಿ, ಬೆಕ್ಕು, ಇಲಿ, ಮುಂತಾದ ಪ್ರಾಣಿಗಳು ಕಚ್ಚಿದ ಮೇಗೆ ಉಪಯೋಗವಾದದ್ದು ಘಾಯಕ್ಕೆ ಹಚ್ಚುವದಕ್ಕೂ, ಹೊಟ್ಟೆಗೆ ತೆಗೆದುಕೊಳ್ಳುವದಕ್ಕೂ, ನಮ್ಮ ಕಡೆಗೆ ಅವುಷಧ ಸಿಗುವದು. ಒಬ್ಬನಿಗೆ ೨॥ ರೂಪಾಯಿನ ಅವುಷಧ ಬೇಕಾಗುವದು.

೫೩, ಮಲಮೂತ್ರಗಳನ್ನು ಸ್ವಚ್ಛತೆ ಪಡಿಸುವ ಔಷಧ.

ಮೇಲಿನ ಹೆಸರಿನ ಗುಳಿಗೆಗಳನ್ನು ಸೇವಿಸುವದರಿಂದ ಮಲಮೂತ್ರಗಳು ಏನೇನೂ ತೊಂದರೆ ಇಲ್ಲದೆ ಸ್ವಚ್ಛವಾಗಿ ಹೋಗುವದು ೨೮ ಗುಳಿಗೆಯ ಡಬ್ಬಿಕ್ಕೆ ೧೨ ಆಣೆ.

೫೪, ಕಫರೋಗ.

ಎದೆಯಲ್ಲಿ ಉಂಟಾಗುವ ಈ ರೋಗಕ್ಕೆ ಒಳ್ಳೇ ತರದ ಅವುಷಧವು ನಮ್ಮಲ್ಲಿರುವದು. ೧ ಬಾಟ್ಲಿಗೆ ೧॥ ರೂಪಾಯಿ.

ಈ ಎಲ್ಲ ಅವುಷಧಗಳಬಗ್ಗೆ ನಮಗೆ ಬರೆಕೊಳ್ಳಬೇಕು.

ಮ್ಯಾನೇಜರ್ ಕೆನರಾ ಅಂಡ್ ಮೈಸೂರ್ ಟ್ರೇಡಿಂಗ್ ಏಜನ್ಸಿ ಆಫೀಸ್,

ಮಾರ್ಕೆಟ್ ಪೋಸ್ಟ, ಮುಂಬಯಿ.

ಜನರಿಗೆ ಅನುಭವಕ್ಕೆ ಬಂದ ಔಷಧಗಳು.

ಸಾರ್ಸಾಪರಿಲಾ ಬಾಟ್ಲಿಗಕ್ಕೆ		೧	೪	ಎಗ್ಸ್ಯಾಮಿಕೇಕ್ಚರ್ ಬಾಟ್ಲಿಗಕ್ಕೆ		೧	೦
ಫಾಸ್ಫರಿಸ್	,,	೦	೧೪	ಟಾನಿಕಪಿಲ್ಸ	,,	೧	೦
ಕಾಡ್ಲಿವರ ಇಮಲ್ಶನ್	,,	೧	೦	ಇಷ್ಟನ್ ಸ್ಯಾರಪ್	,,	೧	೪
ಪಾಷ್ಟಿಕ ಸ್ಯಾರಪ್	,,	೧	೦	ಕೆಮಿಕಲ್ ಫೂಡ್	,,	೧	೪
ಪ್ರಮೇಹ ಕುಠಾರ	,,	೧	೦	ವಿ. ಯತಿ ಸಾರ್ಸಾಪರಿಲ	,,	೨	೮
ಪ್ರಮೇಹ ರಿಪು	,,	೧	೦	ಸಂಧಿವಾತದ ಔಷಧ	,,	೦	೧೨

...ತರ್ ಬಾಟ್ಲಿ	೧ಕ್ಕೆ	೦	೪
ಒಳೀವ್ ಗುಳಿಗೆ ಡಬ್ಬಿ	,,	೩	೦
ಡಿ॥ ಮುಲಾಮು	,,	೨	೮
ಜಂತರಾಣಿ	,,	೦	೫
ಗಜಕರ್ಣದ ಮುಲಾಮು	,,	೦	೫
ನಾರುಹುಣ್ಣಿನ ಮುಲಾಮು ಡ॥	೧ಕ್ಕೆ	೦	೧೨
ಟುಕಿಯ ಮುಲಾಮು	,,	೦	೮
ತ್ವಗ್ರೋಗದ ಮುಲಾಮು ಡಬ್ಬಿ	೧ಕ್ಕೆ	೦	೪
ಜ್ವರಗಡ್ಡೆಯ ಗುಳಿಗೆ ಡಬ್ಬಿ	೧ಕ್ಕೆ	೦	೧೨
ಡಿ॥ ಮುಲಾಮು	,,	೦	೪
ಸುಗಂಧ ಶೀರ್ಷ ಡಬ್ಬಿ	೧ಕ್ಕೆ	೦	೮
ಪಾಚಕನಕ್ರಿಯಾವರ್ಧಕ ಗುಳಿಗೆ	,,	೦	೬
ತಲೆಕೂದಲು ಕಪ್ಪಾಗುವ ಔಷಧ	,,	೧	೦
ಜುಲಾಬಿನ ಗುಳಿಗೆ ಡಬ್ಬಿ	೧ಕ್ಕೆ	೦	೬
ಜ್ವರಘ್ನ ಗುಟಿಕಾ	,,	೦	೮
ಚಾತುರ್ಥಿ ಜ್ವರದ ಗುಳಿಗೆ	,,	೦	೮
ಕಣ್ಣಿನ ಔಷಧ ಬಾಟ್ಲಿ	೧ಕ್ಕೆ	೧	೦
ಕಿವಿಯ ಔಷಧ	,,	೧	೦
ಫೆಲೋಸ್ಸ್ಯಾರಪ್	,,	೩	೮

ಪರಿಮಳ ದ್ರವ್ಯಗಳು.

ಅವಲ್ ಕಸ್ತೂರಿ ತೊಲೆ	೧ಕ್ಕೆ	೩೫೦	೦
ಕಸ್ತೂರಿ ತೊಲೆ	,,	೩೬	೦
ಡಿ॥ ಮಧ್ಯಮ	,,	೨೪	೦
ಡಿ॥ ಸಾಧಾರಣ	,,	೨೦	೦
ಕೇಸರಿ ರಾತ್ತಲು	೧ಕ್ಕೆ	೮೦	೦
ಡಿ॥	,,	೬೦	೦
ಡಿ॥	,,	೪೦	೦
ಡಿ॥	,,	೩೦	೦
ಡಿ॥	,,	೨೦	೦
ಡಿ॥	,,	೧೫	೦
ಡಿ॥	,,	೧೦	೦
ಡಿ॥	,,	೬	೦
ಫಿತಿಸ್ಸಿ ಡಬಿ	೧ಕ್ಕೆ	೦	೧೪
ಅರಗಜ ಉತ್ತಮ	,,	೧	೦
ಡಿ॥ ಮಧ್ಯಮ	,,	೦	೧೨
ಅರಗಜ ಸಾಧಾರಣ ಡಬ್ಬಿ	೧ಕ್ಕೆ	೦	೮
ಲ್ಯವೆಂಡರ ಟ್ರಬ್ಬಲ್ಸ ಬಾಟ್ಲಿ	,,	೩	೦
ಡಿ॥ ಮಧ್ಯಮ	,,	೨	೦
ಡಿ॥ ಸಾಧಾರಣ	,,	೧	೦
ಡಿ॥ ರಿಮೆಲ್ಸ	,,	೧	೮
ಅಮೇರಿಕನ್ ಸೆಂಟ್ ಬಾಟ್ಲಿ	೧ಕ್ಕೆ	೨	೦
ಪ್ಯಾರಿಸ್	,,	೩	೦
ರೋಜಸೆಂಟ್	,,	೨	೪
ಫ್ಲೋಡೇರಾಸೆಂಟ್	,,	೨	೪
ಡಿ॥ ಮಧ್ಯಮ	,,	೧	೮
ಡಿ॥ ಸಾಧಾರಣ	,,	೧	೦
ಪ್ಯಾಮೇಟಮ್ ಅವಲ್	,,	೧	೦
ಡಿ॥ ಸಾಧಾರಣ	,,	೦	೮
ಡಿ॥ ಹಲ್ಕಾ	,,	೦	೬

ಇವಲ್ಲದೆ ಇನ್ನೂ ಅನೇಕ ತರದ ಇಂಗ್ಲೀಷ ಸಮಾನೆಯ ಪರಿಮಳದ ದ್ರವ್ಯಗಳನ್ನು ನಮ್ಮ ವ್ಯಾಪಾರ ಪಡಕೊಳ್ಳಬಹುದಾಗಿದೆ.

ಹಿಂದುಸ್ತಾನದಲ್ಲಿ ತಯಾರಾದ ಹೂವಿನ ಅತ್ತರು

ಅಸಲ್ ಗುಲಾಬಿ ಅತ್ತರ್	ತೊಲೆ ೧ಕ್ಕೆ	೫	೦
ಡಿ॥ ಮಧ್ಯಮ	,,	೨	೮
ಡಿ॥ ಸಾಧಾರಣ	,,	೧	೮
ಮಲ್ಲಿಗೆ	,,	೨	೦
ಜಾಜಿ	,,	೨	೦
ಬಕಾವಲಿ	,,	೨	೦
ಅಂಬರ	,,	೨	೦
ಮಟ್ಟಿ	,,	೨	೦
ಕೇಶರಿ	,,	೪	೦
ಕಸ್ತೂರಿ	,,	೬	೦
ರಾಜ	,,	೨	೦
ಮೊಗೆ	,,	೨	೦
ಬುಲ್‌ಬುಲ್	,,	೨	೦
ಪಚ್ಚೆತೆನೆ	,,	೨	೦
ದವನಾ	,,	೨	೦
ಕಾಮಕಸ್ತೂರಿ	,,	೨	೦

ರೂಅಬ್‌ರ್ಘೂ ತೊಲೆ ೧ಕ್ಕೆ		— [illegible]	
ಕೇದಿಗೆ	,,	೨	೪
ಸಂಪಿಗೆ	,,	೨	೦
ಹೀನಾ	,,	೨	೦
ಒಕುಳ	,,	೨	೦
ಸೇವಂತಿಗೆ	,,	೨	೦
ಪಾರಿಜಾತ	,,	೨	೦

ಇವುಗಳ ವಿನಹಾ ಬಳ್ಳೀ ಪರಿಮಳ ಯುಕ್ತವಾದ ಕಾಜಿನ ಗುಳಿಗೆಗಳೂ ಕಾಜಿನ ಬಿಲ್ಲೆಗಳೂ ಶಿಗುತ್ತವೆ.

ಮಲ್ಲಿಗೆ ಎಂಣೆ ರಾತ್ತ್ಲು ೧ಕ್ಕೆ		೫	೦
ಕೇದಿಗೆ ಎಂಣೆ ತೊಲೆ ೧ಕ್ಕೆ		೪	೦
ಜಾಜಿಹುವ್ವಿನ ಎಂಣೆ	,,	೪	೦
ಮಸಾಲೆ ಎಂಣೆ	,,	೪	೦
ಸುಗಂಧರಾಜ	,,	೪	೦

ಈ ತರವ ತಲೆಗೆ ಹಾಕುವ ಸುವಾಸಿಕ ತೈಲಗಳು, ದೇಶೀ ಮತ್ತು ಇಂಗ್ಲೀಷ್ ಇವೆರಡು ವಿಧವು ನಮ್ಮಲ್ಲಿ ಶಿಗುವವು.

ಘಡಿಯಾಳಗಳು.

ಭಂಗಾರದ ರೈಲ್ವೇವಾಚ್ ೧ಕ್ಕೆ		೨೫೦
ಡಿ॥ ಮಧ್ಯಮ	,,	೧೫೦
ಡಿ॥ ಲೇಡೀವಾಚ್	,,	೧೦೦
ಡಿ॥ ಡಿ॥ ಮಧ್ಯಮ		೩೫
ಬೆಳ್ಳಿಯ ರೈಲ್ವೇವಾಚ್ ೧ಕ್ಕೆ		೪೫
ಡಿ॥ ಹಾಫ್‌ಹಂಟಿಂಗ್	,,	೪೦
ಡಿ॥ ಮಧ್ಯಮ	,,	೨೦
ಡಿ॥ ಸಾಧಾರಣ	,,	೧೮

ಮೆಟಲ್ ರೈಲ್ವೇವಾಚ್ ೧ಕ್ಕೆ		೨೦
ಡಿ॥ ಮಧ್ಯಮ	,,	೧೮
ಡಿ॥ ಡಿ॥	,,	೧೬
ಡಿ॥ ಡಿ॥	,,	೧೨
ಡಿ॥ ಸಾಧಾರಣ	,,	೧೦
ಡಿ॥ ಡಿ॥	,,	೮
ಡಿ॥ ಹಲ್ಕ	,,	೩॥
ಘಂಟೆ ಹೊಡೆಯುವ ಟ್ರೈಂಪೀಸ್	,,	೧೦

ತೆರೆಯುವ ಫೇಸ್ ಮಧ್ಯಮ	೧ಕ್ಕೆ	೬	೪
ಡಿ|| ಹಲ್ಕ	,,	೩	೦
ಅಫೀಸ್ ಕ್ಲಾರ್ಕ್	,,	೨೦	೦
ಡಿ|| ಮಧ್ಯಮ	,,	೧೮	೧
ಡಿ|| ಸಾಧಾರಣ	,,	೧೫	೦
ಸುಲ್ತಾನ ಕ್ಲಾರ್ಕ್	,,	೧೫	೦
ಡಿ|| ಮಧ್ಯಮ	,,	೧೩	೦
ಡಿ|| ಸಾಧಾರಣ	,,	೧೨	೦
ಕಾರ್ಪೆಟ್ ಕ್ಲಾಕ್	೧ಕ್ಕೆ	೧೦	೧
ಡಿ||	,,	೮	೬
ಡಿ||	,,	೫	೧
ಉತ್ತುರಮುಖಿ ಅವಲ್	,,	೫	೦
ಡಿ|| ಡಿ||	,,	೩	೦
ಡಿ|| ಮಧ್ಯಮ	,,	೧	೦
ಡಿ|| ಸಾಧಾರಣ	,,	೦	೮
ಡಿ|| ಹಲ್ಕ	,,	೦	೪

ಇವಲ್ಲದೆ ಬೇರೆ ಬೇರೆ ಕಾರಾಗಿರರಿಂದ ತಯಾರಿಸಿದ ನಾನಾ ತರದ ಘಡಿಯಾರಗಳು ಅವುಗಳ ಸರಪಣಿಗಳು ಸಹ ಇರುತ್ತವೆ.

ಮನೋಹರವಾದ ವಾದ್ಯ ಸಾಹಿತ್ಯಗಳು.

ಪಿಯಾನಾ ಪೆಟ್ಟಿಗೆ	೧ಕ್ಕೆ	೧೫೦
ಡಿ||	,,	೧೨೦
ಡಿ||	,,	೧೦೦
ಕೀಲಿಕೊಟ್ಟಮಾತ್ರದಿಂದ ತನಿಗೆ ತಾನೆ ರಾಗ ನುಡಿಸುವ ಪೆಟ್ಟಿಗೆ.	,,	೫೦
ಡಿಟ್ಟೋ	,,	೨೫
ಡಿ||	,,	೧೫
ಡಿ||	,,	೧೦
ಡಿ||	,,	೫
ಫಿಟಿಲ್	,,	೨೫
ಡಿ||	,,	೨೦
ಡಿ||	,,	೧೫
ಡಿ||	,,	೧೦
ಡಿ||	,,	೬

ಈ ಫಿಟೀಲಗಳನ್ನು ಇಡುವದಕ್ಕಾಗಿ ತಯಾರಿಸಿದ ಪೆಟ್ಟಿಗೆಗಳು ಇರುತ್ತವೆ. ಅವುಗಳಿಗೆ ಪ್ರತಿ ಒಂದಕ್ಕೆ ಕ್ರಯ ರೂಪಾಯಿ. ೩-೦-೦

ಬೇರೆಬೇರೆತರದ ಕಮಾನುಗಳಿರುತ್ತವೆ

ಫಿಟಿಲಿನ ತಂತಿಗಳು.

ಬೆಳ್ಳಿ ತಂತಿ ಕಟ್ಟು ಒಂದಕ್ಕೆ		೦	೪
ಬಾಕಿ ತಂತಿಗಳ ಕಟ್ಟಿಗೆ	,,	೦	೪

ಸತಾರಿನ ತಂತಿಗಳು.

ಪಕ್ಕೇತಾರಬರೇಲಿ ತೊಲೆ	೧ಕ್ಕೆ	೨	೦
ಡಿ|| ಉತ್ತಮತಾರ	,,	೧	೮
ಸಾಧಾರಣ	,,	೦	೮
ಪತಪೆ ಕಟ್ಟುವ ತಾರಿನ ಕಟ್ಟು	,,	೦	೪

ಇವುಗಳ ವಿನಹಾ ಬೇರೆಬೇರೆ ತರದ ವಾಸ್ಯಗಳನ್ನು ಅವುಗಳಿಗೆ ಕ್ಷಮವಿರುವ ಸಾಹಿತ್ಯಗಳನ್ನು ನಮ್ಮ ದ್ವಾರಾ ಪಡಕೊಳ್ಳಬಹುದಾಗಿದೆ. ಆ ಗ್ರಾಹಕರು ಅವುಗಳ ತಪಶೀಲನ್ನು ಕುರಿತು ನಮಗೆ ಸ್ಪಷ್ಟ ರೀತಿಯಿಂದ ಬರೆದು ತಿಳಿಸಬೇಕು.

ಮುಂಬಯಿ.

ಕೆನರಾ ಅಂಡ್ ಮೈಸೂರ್ ಟ್ರೇಡಿಂಗ್ ಏಜನ್ಸಿ ಆಫೀಸಿನಲ್ಲಿ ಮಾರಾಟಕ್ಕೆ

ಸಿದ್ಧವಿರುವ ಅಮೌಲ್ಯವಾದ "ಕಫ ನಾಶಕ ಗುಳಿಗೆಗಳು."

ಒಂದೇ ಗುಳಿಗೆಯಿಂದ ಅನುಭವ ಬರತಕ್ಕದ್ದು.

ನಮ್ಮ ಕಫ ನಾಶಕ ಗುಳಿಗೆಗಳು ಅಮೃತ ತುಲ್ಯವಾಗಿರುವವು. ಒಂದೇ ಗುಳಿಗೆಯನ್ನು ಸೇವನೆ ಮಾಡುವದರಿಂದ ಎದೆಯಲ್ಲಿರುವ ಕಫಗಳೆಲ್ಲ ಮಲದ್ವಾರದಿಂದ ಜುಲಾಬಾಗಿ ಬೀಳುವದು ಪ್ರತ್ಯಕ್ಷವಾಗಿ ತೋರುವದು. ಈ ಔಷಧದ ಬಗ್ಗೆ ನಾವು ಪೂರ್ಣ ಭರವಸೆಯುಳ್ಳವರಾಗಿರುತ್ತೇವೆ. ಇದರ ಅನುಭವ ಹೊಂದಿದ ಅನೇಕ ಜನರು ನಮಗೆ ಇದನ್ನು ಕುರಿತು ಶ್ಲಾಘಿಸಿ ಬರೆದ ಪತ್ರಗಳಲ್ಲಿ ೨ ಪತ್ರಗಳನ್ನು ಮಾತ್ರ ನಾವು ಇದರ ಕೆಳಭಾಗದಲ್ಲಿ ಸಾಕ್ಷಿಗಾಗಿ ತೋರಿಸಿದ್ದೇವೆ.

ಇದು ೧ ತಿಂಗಳ ಶಿಸುಗಳು ಮೊದಲುಗೊಂಡು ಎಲ್ಲರಿಗೂ ಸಮಾನಗುಣಕಾರಿಯಾಗಿರುವದು. ಇದನ್ನು ತೆಗೆದುಕೊಳ್ಳುವ ವಿಧಾನವನ್ನು ಮತ್ತು ಅನುಪಾನವನ್ನು ಸಹ ಕೆಳಗಡೆ ಬರೆದಿರುತ್ತೇವೆ.

ಕಫದಿಂದುಂಟಾಗುವ ದಮ್ಮಿನ ರೋಗವೂ, ಹುಡುಗರಿಗಾಗುವ ಕಫದ ಗೂರಲೂ, ಹುಟ್ಟುಗೂರಲೂ, ಕೋವೆ, ಬಾಲಗ್ರಹ ಮುಂತಾದವೂ, ದೊಡ್ಡವರಿಗಾಗುವ ಕಫ ಸಂಬಂಧವಾದ ಯಪೇನೋಉನ ಜಾಡ್ಯವೂ, ಇಸ್ದ್ರೀನೆ, ವಾಯುದಮನ, ಮುಂತಾದ ಎಲ್ಲ ಕಫ ಸಂಬಂಧ ರೋಗಗಳೂ ಈ ಗುಳಿಗೆ

ದ (೧) ಒಂದೇ ಪ್ರಹರದಲ್ಲಿ ಗುಣವಾಗುವದು. ಇಂಥ ಅಮೌಲ್ಯವಾದ ಔಷಧವು ಈ ಜಗತ್ತಿನಲ್ಲಿ ಬಹು ಸ್ವಲ್ಪವಾಗಿರುವದು. ಇದನ್ನು ಸಂಸಾರಿಯಾದ ಪ್ರತಿ ಒಬ್ಬನೂ ಸಂಗ್ರಹಿಸಿಟ್ಟುಕೊಳ್ಳಬೇಕೆಂದು ನಾವು ಸೂಚಿಸುತ್ತೇವೆ. ಇವು ೫ ವರುಷಗಳ ವರೆಗೆ ಕೆಡುವದಿಲ್ಲ. ಆದರೆ ಗಾಳಿ ತಗಲದಂತೆ ಬಂದೋಬಸ್ತಿನಿಂದ ಇಟ್ಟಿರಬೇಕು.

ಬಹಳ ಹಳೇ ಕಫ ರೋಗವಿದ್ದವರೂ ದಮ್ಮಿನ ರೋಗವಿದ್ದವರು ಸಹ ೫ ದಿವಸಕ್ಕೊಮ್ಮೆ ೪-೫ ಸಾರಿ ಈ ಗುಳಿಗೆಗಳನ್ನು ಸೇವಿಸಿದರೆ ಅವರಿಗೆ ಪುನಃ ಕಫವಾಗಲಿಕ್ಕಿಲ್ಲ. ಖಾಸಶ್ವಾಸ ಮಿಶ್ರವಿರತಕ್ಕ ರೋಗಿಗಳು ಯಿದರೊಂದಿಗೆ ಫೇರೋಸ್ ಸ್ಯಾರಪ್ ಎಂಬುದನ್ನು ಕ್ರಮವಾಗಿ ೧ ತಿಂಗಳು ಸೇವಿಸಬೇಕಾಗುವದು. ನಿಶ್ಚಯವಾಗಿ ಗುಣವಾಗುವದೆಂದು ನಾವು ಹೇಳುತ್ತೇವೆ. ಬರೇ ಕಫ ರೋಗತಕ್ಕಂಥ ಕ್ಷಯ ರೋಗವು ಸಹ ಈ ಗುಳಿಗೆ ಸೇವನೆಯಿಂದ ಪರಿಹಾರವಾಗುವದು ಇದರ ಮಹತ್ವವು ಅನುಭವದಿಂದ ತೋರುವದು.

೧ ಬಾಟ್ಲಿಯಲ್ಲಿ ೧೦ ಗುಳಿಗೆಗಳಿರುತ್ತವೆ ಪ್ರತಿ ಒಂದು ಬಾಟ್ಲಿಗೆ ೧ ರೂಪಾಯಿ ಕ್ರಯವು ಇರುತ್ತದೆ ೧ ಬಾಟ್ಲಿಯಿಂದ ೩ ಬಾಟ್ಲಿಗಳ ವರೆಗೆ ವ್ಯಾಲ್ಯೂಪೇಬಲ್ ಮುಂತಾದ ಖರ್ಚು ೮ ಆಣೆ ಬೀಳುವದು. ೧೦ ಬಾಟ್ಲಿಗಳನ್ನು ಒಂದೇಸಾರಿ ತೆಗದುಕೊಳ್ಳುವವರಿಗೆ ಯಾವದೊಂದು ಖರ್ಚು ಬೀಳಲಿಕ್ಕಿಲ್ಲ.

೧ ತಿಂಗಳು ಮೇಲ್ಪಟ್ಟ ಶಿಶುಗಳಿಗೆ ಗುಳಿಗೆಯ ೩ನೇ ಒಂದಂಶವನ್ನು ಕೊಡಬೇಕು ೫ ತಿಂಗಳು ಮೇಲ್ಪಟ್ಟ ಶಿಶುಗಳಿಗೆ ಅರ್ಧ ಗುಳಿಗೆಯನ್ನು ಕೊಡಬೇಕು ೧ ವರುಷಕ್ಕೆ ಮೇಲ್ಪಟ್ಟ ಹುಡುಗರ ಮೊದಲುಗೊಂಡು ಎಲ್ಲರಿಗೂ ಒಂದು ಗುಳಿಗೆಯನ್ನು ಕೊಡಬೇಕು. ದೊಡ್ಡವರಿಗೆ ಅವರ ಪ್ರಕೃತಿ ಮಾನದಿಂದ ಒಂದೂವರೆ ಎರಡು ಗುಳಿಗೆಗಳ ವರೆಗೆ ತೆಗದುಕೊಂಡಾಗ್ಯೂ ಬಾಧಕವಿಲ್ಲ ; ಮೊದಲಿಗೆ ಒಂದೇ ಸಾಕಾಗಿದೆ.

ತೆಗದುಕೊಳ್ಳುವ ಕ್ರಮ--ಬೆಳಿಗ್ಗೆ ಅರ್ಧ ಪಾವು ಬಿಸಿ ಹಾಲಿನಲ್ಲಿ ಗುಳಿಗೆಯನ್ನು ಕಲಿಸಿ ಕುಡಿಯಬೇಕು. (ಹಾಲು ಯಾತರದ್ದಾದರೂ ಅಡ್ಡಿಯಿಲ್ಲ) ತೆಗದುಕೊಂಡ ಹತ್ತು ನಿಮಿಷದಲ್ಲಿ ೧ ಪಾವು ಬಿಸಿ ನೀರನ್ನು ಕುಡಿಯಬೇಕು. ಸುಮಾರು ೨ ತಾಸಿನಲ್ಲಿ ಮಲದ್ವಾರದಿಂದ ೩--೪ ಸಾರಿ ಜುಲಾಬಾಗಿ ಕಫಗಳೆಲ್ಲ

ಬಿದ್ದು ಹೋಗುವವು. ಈ ಜುಲಾಬು ಬಂದಾಗ್ಗೆ ಹೆಚ್ಚಿಗೆ ಅಪಾ ಬಾಧಕವಿಲ್ಲ, ಇವರಿಂದ ಯಾವ ತರಹ ಅಪಾಯವೂ ಸಂಘಟಿಸಲಿಕ್ಕಿಲ್ಲ, ನಿಲ್ಲ ಬೇಕೆಂತ ಕಂಡರೆ ಅರ್ಧ ತೊಲೆ ತುಪ್ಪವನ್ನು ತಿಂದರೆ ಕೂಡಲೆ ನಿಲ್ಲು ವದು. ಕೆಲವರಿಗೆ ವಾಂತಿಯಾಗಿ ಸಹ ಹೋಗುವದುಂಟು, ವಾಂತಿಯಲ್ಲಾ ವೆರೂ ಕಫವೇ ಬೀಳುವದು ಹಾಗಾದರೆ ೪ ದಿವಸ ಬಿಟ್ಟು ಪುನಹಾ ಮತ್ತೊಂದು ಸಾರಿ ಬಂದೊವರೆ ಗುಳಿಗೆಯನ್ನು ತೆಗದುಕೊಳ್ಳಬೇಕು. (ಈ ನೇಮವು ಹುಡು ಗರಿಗೆ ಅಲ್ಲ) ಆ ದಿವಸ ಚನ್ನಾಗಿ ಜುಲಾಬಾಗುವದು. ಯಾರ ಶರೀರ ಪ್ರಕೃ ತಿಯು ಥಂಡಿಯದಾಗಿರುವದೋ? ಯಾರ ಉದರಭಾಗವು ಜಡವಾಗಿರುವದೋ ಅಂಥವರಿಗೆ ಬಂದೊಂದು ವೇಳೆ ದಕ್ಕಿ ಹೋಗುವದು ಸಹ ಉಂಟು. ಹಾಗಾದರೆ ೦ ತಾಸು ನೋಡಿ ಪುನಹಾ ಮತ್ತೊಂದು ಗುಳಿಗೆಯನ್ನು ಸೇವಿಸಬೇಕು. ಆಗ ಪೂರ್ಣವಾಗಿ ಜುಲಾಬಾಗುವದು ತುಪ್ಪವು ಇದರ ಉತಾರಾಗಿರುತ್ತದೆ.

ಪಿತ್ತಾಧಿಕ್ಯವಾದವರು ಈ ಗುಳಿಗೆಯನ್ನು ಖರ್ಜೂರದಲ್ಲಿ ಮಿಶ್ರಮಾಡಿ ತಿನ್ನಬೇಕು ಹೀಗೆ ಮಾಡಿದರೆ ಪಿತ್ತವೇ ಜುಲಾಬಾಗಿ ಹೋಗುವದು.

ಅನುಪಾನ-ತೆಗದುಕೊಂಡ ದಿವಸ ಯೆಂಣೆ, ಹುಳಿ, ಮಜ್ಜಿಗೆ, ಮೊಸರು, ಮುಂತಾದ್ದನ್ನು ತಿನ್ನಬಾರದು. ಮೈಯನ್ನು ಥಾಳಿಗೆ ಬಿಟ್ಟಿರಬೇ ಉಂಣೀ ವಸ್ತ್ರವನ್ನು ಹಾಕಿಕೊಂಡು ಯದೆಯನ್ನು ಬೆಚ್ಚಗೆ ಇರುವಂತೆ ಮಾಡಬೇಕು. ಹುಡುಗರಿಗಾದರೆ ಅವರಿಗೆ ಸ್ತನ್ಯ ಕೊಡುವ ತಾಯಿಯಿಂದಿರು ಮೇಲಿನ ಪತ್ಯ ಮಾಡಬೇಕು. ಹುಡುಗರನ್ನು ಥಾಳಿಗೆ ಹಾಕಬಾರದು.

ಈ ಬಗ್ಗೆ ಬರೆದು ಬಂದ ಪತ್ರಗಳ ಸಾರಾಂಶ.

ಅಯ್ಯಾ—ನನ್ನ ಕಫ ಮತ್ತು ದಮ್ಮಿನ ರೋಗಕ್ಕಾಗಿ ತಾವು ಕಳುಹಿಸಿದ ಗುಳಿಗೆಯನ್ನು ತೆಗೆದುಕೊಂಡೆ ಆಯಾಸವಿಲ್ಲದೆ ೪ ಸಾರಿ ಜುಲಾಬು ಆದ್ದರಲ್ಲಿ ಕಫ ಹೋದದ್ದು ಕಾಣುಬಂತು ಪುನಹಾ ಕಫವಿನ್ನೂ ಇರುವಂತೆ ಕಂಡುಬಂದದ್ದರಿಂದ ೪ ದಿನ ಬಿಟ್ಟು ಮತ್ತೊನ್ನು ತೆಗೆದುಕೊಂಡೆ ಆ ದಿವಸ ೫ ಸಾರಿ ಜುಲಾಬಾದ್ದರಲ್ಲಿ ಕಫ ಹೋದದ್ದನ್ನು ನನ್ನ ಆಪ್ತರಿಗೆ ಸಹ ತೋರಿಸಿದೆನು ಈ ಕಫನಾಶಕ ಗುಳಿಗೆಯನ್ನು ಮಾಡಿದ ವಿದ್ವಾಂಸರಿಗೆ ಎಷ್ಟು ಬಂದಿಸಿದರೂ ಸ್ವಲ್ಪ ಈ ಗುಳಿಗೆಗಳಿಂದ ಕಫ ನಾಶವಾಗುವದು ನಿಜ!

ಹೆಚ್ ಶ್ರೀನಿವಾಸರಾವ್,
ಉಳುಮೀಕಟ್ಟೇ ಮಣೇಗಾರ್ ತಾ|| ಸಾಗರ.

ಅಯ್ಯಾ—ತಮ್ಮ ಕಫನಾಶಕ ಗುಳಿಗೆಗಳನ್ನು ಹುಟ್ಟು ಗೂರಲಿರುವ ನನ್ನ ೩ ವರುಷದ ಹುಡುಗಿಗೆ ಕೊಟ್ಟೆನು. ೩ ಸಾರಿ ಜುಲಾಬಾಗಿ ಮಲದ್ವಾರದಿಂದ ಕಫಗಳು ಬಿದ್ದವು. ಮತ್ತು ಸ್ವಲ್ಪವಿದ್ದಂತೆ ಕಂಡು ಬಂದದ್ದರಿಂದ ೪ ದಿವಸ ಬಿಟ್ಟು ಪುನಹಾ ಒಂದು ಗುಳಿಗೆಯನ್ನು ಕೊಟ್ಟೆ. ಆಗಲೂ ಕಫ ಹೋಯಿತು ಅಂದಿನಿಂದ ಇದುವರೆಗೂ ನನ್ನ ಹುಡುಗಿಗೆ ಗೂರಲು ಕಾಣಲಿಲ್ಲ. ಹುಡುಗಿಯು ಸುರಕ್ಷಿತವಾಗಿದ್ದಾಳೆ ಈ ತಮ್ಮ ಕಫನಾಶಕ ಗುಳಿಗೆಗಳು ಅಮೃತ ಸಮಾನವಾಗಿರುವದರಿಂದ ಸಂಸಾರಿಗಳಾದವರು ಸಂಗ್ರಹಿಸಿಕೊಳ್ಳುವದು ಉಚಿತವಾಗಿದೆ.

ಕೆತಲೂರು ರಾಮರಾವ್‌ಗಾರು,
ವಿಶಾಖಾಪಟ್ಣ ಮದ್ರಾಸ್ ಪ್ರಾಂತ್ಯ.

ಶ್ರೀಃ.

ಆರ್ಯ ಭೈಷಜ್ಯ ಮಂದಿರಂ

ಶೃಂಗಗಿರಿ.

ಮೆಡಲ್ ಮತ್ತು ಸರ್ಟಿಫಿಕೇಟುಗಳನ್ನು ಪಡೆದಿರುವ

ಶಾಸ್ತ್ರೋಕ್ತ ಔಷಧಗಳ

ಸೂಚೀಪತ್ರವು

(ಕ್ಯಾಟಲಾಗ್)

ಆರ್ಯಭಿಷಕ್ಪ್ರದಃ ಕೆ. ಶೇಷಶಾಸ್ತ್ರೀ,
ಸರಸಬಾಲಗಣೇಶಃ, ಶ್ರೀಬಾಲವಾಣೀ, ಆಯುರ್ವೇದ-
ಕಲಾವಿಭೂಷಣಃ, ಶೃಂಗೇರಿ,

1915

ಶ್ರೀಃ.



ಆರ್ಯ ಭೈಷಜ್ಯ ಮಂದಿರಂ

ಶೃಂಗಗಿರಿ.

ಮೆಡಲ್ ಮತ್ತು ಸರ್ಟಿಫಿಕೇಟುಗಳನ್ನು ಪಡೆದಿರುವ

ಶಾಸ್ತ್ರೋಕ್ತ ಔಷಧಗಳ

ಸೂಚೀಪತ್ರವು

(ಕ್ಯಾಟಲಾಗ್)

ಆರ್ಯಭಿಷಕ್ಪ್ರದಃ ಕೆ. ಶೇಷಶಾಸ್ತ್ರೀ,
ಕರಸಬಾಲಗಸೇಕಃ, ಶ್ರೀಬಾಲವಾಣೀ, ಆಯುರ್ವೇದ-
ಕಲಾವಿಭೂಷಣಃ, ಶೃಂಗೇರಿ,

1915